
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


09 ಆಗಸ್ಟ್ 2017 ಪುಟ 16 ರೂ. 15/-



ಮರೆಯಾದ ಮರೆಯಲಾಗದ ಚೇತನ



ಲಿಂಗಾಯತರು ಹಿಂದೂಗಳಲ್ಲ




ರಂಗೀಲಾ ರಾಘವನ

ಲ್ಯಾಂಡ್ ಗ್ರ್ಯಾಬಿಂಗ್



ಅಂಬೇಡ್ಕರ್ ಮತ್ತು ಅಂಬಾನಿ, ಅದಾ

ಅಂಚಿನಿಂದ.....



ಡಾ.ವಾಸು ಎಚ್.ವಿ.

ರಾಜ್ಯ ಸರ್ಕಾರದ ವತಿಯಿಂದ ಬೆಂಗಳೂರಿನಲ್ಲಿ ಅಂಬೇಡ್ಕರ್‌ರ ಕುರಿತಾಗಿ ನಡೆದ ಅಂತರ್‌ರಾಷ್ಟ್ರೀಯ ಸಮ್ಮೇಳನದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರವಾದ ಚರ್ಚೆ ನಡೆಯುತ್ತಿದೆ. ಸಮ್ಮೇಳನ ನಡೆದ ರೀತಿಯ ಕುರಿತು ಪ್ರಶ್ನೆಗಳನ್ನು ಎತ್ತಿದ್ದು ಸರಿಯೇ. ಆದರೆ, ಅಂಬೇಡ್ಕರರ ಕುರಿತು ಈ ಪ್ರಮಾಣದ ಅಂತರ್‍ರಾಷ್ಟ್ರೀಯ ಸಮ್ಮೇಳನ ನಡೆದದ್ದರಿಂದ ಒಳ್ಳೆಯದಾಗಿದೆ. ಆ ಮಟ್ಟಿಗೆ ರಾಜ್ಯ ಸರ್ಕಾರದ ನಡೆ ಅಭಿನಂದನಾರ್ಹ. ಸಮ್ಮೇಳನದೊಳಗೂ ನಡೆದ ಚರ್ಚೆ ಹಾಗೂ 'ಬೆಂಗಳೂರು ಘೋಷಣೆ' ಕಾಣಿಸಿರುವಂತೆ ಶೋಷಿತ ಸಮುದಾಯಗಳ ನಿಜವಾದ ಅಭಿವೃದ್ಧಿಗೆ ನೂರು ಬಗೆಯ ಆರ್ಥಿಕ ಮತ್ತು ಸಾಮಾಜಿಕ ಕ್ರಮಗಳು ಅಗತ್ಯವಿದೆ. ಈ ಕಾರ್ಯಕ್ರಮವನ್ನು ಅದರ ಭಾಗವಾಗಿಯೂ ನೋಡಬಹುದು. 20ನೇ ಶತಮಾನದ ಭಾರತದ ಮಹಾನ್ ಚಿಂತಕರಲ್ಲಿ ಪ್ರಥಮರಾದ ಅಂಬೇಡ್ಕರರ ವಿಚಾರಗಳನ್ನು ಇಂತಹದೊಂದು ಕಾರ್ಯಕ್ರಮದ ಮುಖಾಂತರವೂ ಪ್ರತಿಷ್ಠಾಪಿಸುವ ಅಗತ್ಯವಿತ್ತು. ಅದೂ ಸಹ ಶೋಷಿತ ಸಮುದಾಯಗಳಿಗೆ ಆತ್ಮಗೌರವ ತಂದುಕೊಡುವ ಸಾಮಾಜಿಕ, ಸಾಂಸ್ಕೃತಿಕ ಕ್ರಮದ ಭಾಗವೇ ಆಗಿದೆ. ಆದರೆ, ಅದನ್ನು ನಡೆಸುವಾಗ ಆದ ಎಡವಟ್ಟುಗಳ ಕುರಿತು ಚರ್ಚೆ ನಡೆಯಬಾರದೆಂದೇನಿಲ್ಲ, ಚರ್ಚೆ ಆರೋಗ್ಯಕರವಾಗಿದ್ದರೆ ಒಳ್ಳೆಯದೆನಿಸುತ್ತದೆ.

ಇದರೊಂದಿಗೆ ಸಮ್ಮೇಳನದಲ್ಲಿ ಮಂಡನೆಯಾದ ವಿಷಯಗಳ ಸುತ್ತ ಚರ್ಚೆ ಮಾಡುವ ಅಗತ್ಯವಿದೆ. 70 ವರ್ಷಗಳಲ್ಲಿ ಶೋಷಿತ ಸಮುದಾಯಗಳ ಸಬಲೀಕರಣದ ಕುರಿತು ಚಿಂತನಮಂಥನಗಳು ಸಿಕ್ಕಾಪಟ್ಟೆ ನಡೆದಿವೆ. ಕೋಟಿಗಟ್ಟಲೆ ಹಣ ಬಿಡುಗಡೆ ಆಗಿದೆ. ಅದರಲ್ಲೂ ದಲಿತ ಚಳವಳಿಯು ಸಮುದಾಯದ ಹಕ್ಕಿನ ಪ್ರತಿಪಾದನೆ ಮಾಡಿದ ನಂತರ ಇವು ಇನ್ನೂ ಹೆಚ್ಚುಹೆಚ್ಚಾಗಿಯೇ ನಡೆಯಿತು. ಇವೆಲ್ಲಾ ನಡೆದೂ 70 ವರ್ಷಗಳ ಪ್ರಜಾಪ್ರಭುತ್ವದಲ್ಲಿ ಸಾಧಿಸಿದ್ದು ಇಷ್ಟೇ ಏಕಾಗಿದೆ? ಒಟ್ಟಾರೆ ಅರ್ಥದಲ್ಲಿ ಸಮಾನತೆಯೆಂಬುದು ಇನ್ನೂ ದೂರ ದೂರಕ್ಕೇ ಸಾಗುತ್ತಿರುವ ಮರೀಚಿಕೆ ಆಗಿರುವುದು ಏತಕ್ಕೆ? ಇವೆಲ್ಲದರ ಬಗ್ಗೆ ಸಮೀಕ್ಷೆ ನಡೆಸಿದ ನಂತರ ಕೈಗೆತ್ತಿಕೊಳ್ಳಬೇಕಿರುವ ಪ್ರಶ್ನೆ, ಹಾಗಾದರೆ ಮುಂದೇನು ಎಂಬುದು. ಬಲಪಂಥೀಯ ರಾಜಕಾರಣ ಮತ್ತು ಚಿಂತನೆಗಳು ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ಇವೆಲ್ಲಾ ನಡೆಯುವ ಸಾಧ್ಯತೆ ನಿಜಕ್ಕೂ ಕಡಿಮೆ. ಏಕೆಂದರೆ, ಹಕ್ಕಿನ ಪ್ರತಿಪಾದನೆ ಮಾಡುತ್ತಿರುವ ಸಮುದಾಯಗಳಲ್ಲಿನ ಮುಂಚೂಣಿ ಗುಂಪೊಂದನ್ನು ತನ್ನೊಳಗೆ ಅರಗಿಸಿ ಕೊಂಡುಬಿಡುವುದು ಪ್ರಬಲ ಶಕ್ತಿಗಳಿಗೆ ಯಾವಾಗಲೂ ಸುಲಭದ ದಾರಿ. ಅದಕ್ಕೆ ಬೇಕಾದ ಸೈದ್ಧಾಂತಿಕ ಸಮರ್ಥನೆಯನ್ನು ಒದಗಿಸಲೂ ಗುಂಪೊಂದು ದೊರೆಯುತ್ತದೆ. ಶೋಷಿತ ಹಿನ್ನೆಲೆಯ ಕೆಲವರು 'ಮೇಲಕ್ಕೆ' ಬಂದರೆ, ನಿಮಗೇಕಿಷ್ಟು ಅಸಹನೆ ಎಂಬ ಅಸ್ತ್ರವು ಪ್ರಯೋಗವಾದರೆ ಅಲ್ಲಿಗೆ ಆರೋಗ್ಯಕರ ಚರ್ಚೆಯ ದಿಕ್ಕು ತಪ್ಪಿಹೋಗುತ್ತದೆ.

ಇಂತಹದ್ದೊಂದು ವಿಚಾರವೂ ಸದರಿ ಸಮ್ಮೇಳನದಲ್ಲಿ ಮಂಡನೆಯಾಯಿತೆಂದು ಪತ್ರಿಕೆಯ ವರದಿಗಳು ಹೇಳುತ್ತಿವೆ. 'ದಲಿತರಲ್ಲೂ ಅಂಬಾನಿ, ಅದಾನಿ ಬರಲಿ' ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮುಜಾಫರ್ ಅಸ್ಸಾದಿ ಹೇಳಿದರೆಂದು ಪ್ರಜಾವಾಣಿಯಲ್ಲಿ (ಜುಲೈ 24, 2017, ಪುಟ 4-ರಾಜ್ಯ) ವರದಿಯಾಗಿದೆ. ಅವರ ಪ್ರಕಾರ "ದಲಿತ ಸಮುದಾಯಗಳಿಂದಲೂ ಅಂಬಾನಿ, ಅದಾನಿಯಂತಹ ಉದ್ಯಮಿಗಳು ಬರದಿದ್ದರೆ ಸಮಾಜದಲ್ಲಿ ಬದಲಾವಣೆ ಬರಲು ಸಾಧ್ಯವಿಲ್ಲ."

ಈ ವಾದವೇನೂ ಹೊಸದಲ್ಲ, ಆದರೆ, ಅಂಬಾನಿ ಅದಾನಿಯಂತಹ ಉದಾಹರಣೆಗಳನ್ನು ಇದುವರೆಗೂ ಯಾರಾದರೂ ಬಳಸಿದ್ದುದನ್ನು ನೋಡಿರಲಿಲ್ಲ. ಇಂತಹ ವಾದದ ಪ್ರತಿಪಾದಕರಲ್ಲೊಬ್ಬರಾದ ಚಂದ್ರಭಾನ್ ಪ್ರಸಾದ್‌ರ ಲೇಖನಗಳಲ್ಲೂ ದಲಿತ ಬಂಡವಾಳಶಾಹಿಯ ಬೆಳವಣಿಗೆ ಆಗಬೇಕು ಎಂಬುದು ವಿಸ್ತಾರವಾಗಿ ಚರ್ಚೆಯಾಗಿದೆ. ಬಂಡವಾಳಶಾಹಿ ವ್ಯವಸ್ಥೆಯು ಇದೇರೀತಿ ಇನ್ನಷ್ಟು ಆಕ್ರಮಣಕಾರಿಯಾಗಿ ಮುಂದುವರೆಯುತ್ತಿದ್ದಾಗ, ಮೇಲ್ಜಾತಿಗಳ ಉದ್ದಿಮೆಪತಿಗಳು ಮಾತ್ರ ಇರಬೇಕು ಎಂದು ಪ್ರತಿಪಾದಿಸುವುದು ಸಾಧ್ಯವಿಲ್ಲ, ಆದರೆ, ಅದರಿಂದ ದಲಿತ ಸಮುದಾಯದ ವಿಮೋಚನೆ ಸಾಧ್ಯವಿಲ್ಲವೆಂಬುದನ್ನು ಹಲವಾರು ಚಿಂತಕರು ಮುಂದಿಟ್ಟಿದ್ದಾರೆ. ಪ್ರಜಾವಾಣಿಯ ಸಾಪ್ತಾಹಿಕದಲ್ಲೂ ಚಂದ್ರಭಾನ್ ಪ್ರಸಾದ್ ಮತ್ತು ಆನಂದ್ ತೇಲ್‌ತುಂಬ್ಡೆಯವರ ಪರಸ್ಪರ ವಿರುದ್ಧ ಅನಿಸಿಕೆಗಳು ಜೊತೆಜೊತೆಯಲ್ಲೇ ಪ್ರಕಟವಾಗಿವೆ. ಆಗಲೂ ದಲಿತ ಸಮುದಾಯದಿಂದ ಅಂಬಾನಿ, ಅದಾನಿ ಥರದ ಉದ್ಯಮಿಗಳು ಬರಬೇಕು ಎಂದು ಹೇಳಿರುವುದನ್ನು ನೋಡಿಲ್ಲ.

ಇದೇ ಸಮ್ಮೇಳನದ 'ಬೆಂಗಳೂರು ಘೋಷಣೆ'ಯಲ್ಲಿ ಪ್ರತಿಪಾದಿಸಲಾಗಿರುವ ಅಂಶಗಳಿಗಾಗಲೀ, ದಲಿತ ಸಮುದಾಯದ ಬಹುಕಾಲದ ಹಕ್ಕೊತ್ತಾಯಗಳಾದ ಭೂಮಿ, ಉದ್ಯೋಗ, ಶಿಕ್ಷಣ, ದೌರ್ಜನ್ಯ ಮುಕ್ತ ಬದುಕು, ಸಮಾನ ಅವಕಾಶ ಇತ್ಯಾದಿಗಳಿಗಾಗಲೀ ಅಡ್ಡಿಯಾಗುತ್ತಿರುವುದು ಎಲ್ಲಿಂದ? ದೇಶವನ್ನು ತನ್ನ ಕಪಿಮುಷ್ಟಿಯೊಳಗಿಟ್ಟುಕೊಂಡಿರುವುದು ಬ್ರಾಹ್ಮಣಶಾಹಿ ಕಾರ್ಪೊರೇಟ್ ವ್ಯವಸ್ಥೆ ಎಂಬುದರಲ್ಲಿ ಸಂದೇಹವಿಲ್ಲ, ಆದರೆ, ಈ ಕಾರ್ಪೊರೇಟ್ ವ್ಯವಸ್ಥೆ ಮತ್ತು ಬ್ರಾಹ್ಮಣಶಾಹಿ ಎಂಬುದು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಹೊಂದಿರುವ ಅಂಶಗಳಾ, ಪೂರಕವಾಗಿವೆಯಾ? ಜಾಗತೀಕರಣದ ಆರಂಭದ ದಿನಗಳಲ್ಲಿ ಇವೆರಡರ ನಡುವೆ ವೈರುಧ್ಯವಿದೆಯೆಂತಲೂ, ಅದು ದಮನಿತ ಸಮುದಾಯಗಳ ಸಬಲೀಕರಣಕ್ಕೆ ಪೂರಕ ಅಂಶವಾಗಿ ಒದಗಿಬರಲಿದೆಯೆಂತಲೂ ಪ್ರಬಲ ಪ್ರತಿಪಾದನೆಗಳು ನಡೆದಿದ್ದವು. ಎರಡೂವರೆ ದಶಕಗಳ ಜಾಗತೀಕರಣ ಪ್ರಕ್ರಿಯೆಯು ಈಗ ಸ್ಪಷ್ಟವಾದ ಫಲಿತಾಂಶಗಳನ್ನು ನಮ್ಮ ಮುಂದಿಟ್ಟಿದೆ. ಬ್ರಾಹ್ಮಣಶಾಹಿಯ ಪುನರುತ್ಥಾನಕ್ಕೆ ಅದು ಹುಲುಸಾದ ತಳಹದಿಯನ್ನು ಒದಗಿಸಿತು. ಇದುವರೆಗೆ ಇದ್ದ ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಇನ್ನೂ ಹೆಚ್ಚಿಸಿದ್ದಲ್ಲದೇ, ಡಿಜಿಟಲ್ ಡಿವೈಡ್ ಥರದ ಹೊಸ ಅಸಮಾನತೆಗಳನ್ನೂ ಹುಟ್ಟಿ ಹಾಕಿದೆ. ಅಸಮಾನತೆಯ ಪಾತಾಳದಲ್ಲಿರುವ ಸಮುದಾಯಗಳು ಅಲ್ಲೇ ಇರುವಾಗಲೇ, ಕಾರ್ಪೊರೇಟ್ ವ್ಯವಸ್ಥೆಯ ಜೊತೆಯಲ್ಲಿ ಬ್ರಾಹ್ಮಣಶಾಹಿ ಪ್ರತಿಪಾದಕರೂ ನಾಗಾಲೋಟದಲ್ಲಿ ಆಗಸಕ್ಕೆ ನೆಗೆಯುತ್ತಿದ್ದಾರೆ. ಕಳೆದ 15 ವರ್ಷಗಳ ಇಂಟರ್‌ನೆಟ್‌ಯುಗ ಪ್ರಪಂಚವನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಹಲವು ರೀತಿಯಲ್ಲಿ ಬದಲಿಸಿದ್ದರೆ, ಅಂಬಾನಿಯ 5 ಜಿ ನೆಟ್‌ವರ್ಕ್ ಒಂದೇ ಹಲವು ಬಗೆಯ ಸ್ಥಿತ್ಯಂತರಗಳಿಗೆ ದಾರಿ ಮಾಡಲಿದೆಯೆಂದು ತಜ್ಞರು ಹೇಳುತ್ತಿದ್ದಾರೆ.



ಈ ಎಲ್ಲಾ ಬದಲಾವಣೆಗಳು ಅಸಮಾನತೆಯನ್ನು ಹೆಚ್ಚಿಸುತ್ತಿವೆ. ಆ ಜಾಗದಲ್ಲಿ ಅಂಬಾನಿಯ ಬದಲು ದಲಿತ ಸಮುದಾಯದ ಮತ್ತೊಬ್ಬ ವ್ಯಕ್ತಿ ಇದ್ದರೆ, ಆತ ಅಥವಾ ಆಕೆಯೂ ಅಮಾನವೀಯ ಸ್ಪರ್ಧೆಗೆ ಇಳಿಯದಿದ್ದರೆ ಉಳಿದುಕೊಳ್ಳುವುದು ಸಾಧ್ಯವಿಲ್ಲ. ಈ ಅಂಬಾನಿ ಅದಾನಿಗಳು ಸೃಷ್ಟಿಯಾಗಿರುವುದಾದರೂ ಹೇಗೆ? ಅವರು ಬೆಳೆದು ನಿಂತಿರುವುದು ವ್ಯವಹಾರದ ಚಾಕಚಕ್ಯತೆಗಳಿಂದ ಅಲ್ಲ. ಅಪಾರವಾದ ಕ್ರೌರ್ಯ, ಸರ್ಕಾರೀ ಬೊಕ್ಕಸಕ್ಕೆ ಕನ್ನ, ಸಂವಿಧಾನದ ಮೂಲಭೂತ ಆಶಯಗಳ ಬುಡಮೇಲು ಇವುಗಳೊಂದಿಗೆ ಬೆಳೆದಿದ್ದಾರೆ. ಅದಕ್ಕೆ ಬ್ರಾಹ್ಮಣವಾದದ ಪೂರಕ ಸಹಾಯ ಒದಗಿಬಂದಿದೆ. ಆರ್ಥಿಕ ಅಸಮಾನತೆ ಮತ್ತಷ್ಟು ಹೆಚ್ಚಿದೆ. ಜಾತಿ ವ್ಯವಸ್ಥೆ ಗಟ್ಟಿಯಾಗಿ ಉಳಿದುಕೊಂಡು ಬರಲು ಅದರ ಪುನರುತ್ಪತ್ತಿ ಆಗಲು, ಈ ಆರ್ಥಿಕ ಅಸಮಾನತೆಯೂ ಕಾರಣವಾಗಿದೆ.

ಇದೇ ಸಂದರ್ಭದಲ್ಲಿ ಶೋಷಿತ ಸಮುದಾಯಗಳಿಂದಲೂ ಒಂದು ಸಣ್ಣ ವಿಭಾಗವು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ನಡೆಸುವ ಹಂತಕ್ಕೆ ಬಂದಿದ್ದಾರೆ. ಇವರುಗಳು ಮುಂದಕ್ಕೂ ಉಳಿದು ಕೊಳ್ಳುತ್ತಾರೆಯೇ? ಎಲ್ಲ ಬಗೆಯ ಸಣ್ಣ ಮೀನುಗಳನ್ನು (ಇವತ್ತು ದೊಡ್ಡ ಮೀನುಗಳನ್ನೂ ತಿಂದು ಹಾಕಲಾಗುತ್ತಿದೆ) ತಿನ್ನಬೇಕೆಂದು ಅಂಬಾನಿ ಅದಾನಿ ಥರದವರು ಹೊರಟಿದ್ದಾರೆ. ಕ್ಷಮಿಸಿ, ತಿಂದು ಹಾಕುವ ಪ್ರಕ್ರಿಯೆ ಶುರುವಾಗಿ ಎಷ್ಟೋ ಕಾಲವಾಗಿದೆ. ಆ ರೀತಿ ಎಲ್ಲರನ್ನೂ ತಿನ್ನುವ ಕೆಲಸವನ್ನು ಮಾರ್ವಾಡಿ, ಸಿಂಧಿ, ಬನಿಯಾಗಳು ಮಾತ್ರ ಏಕೆ ಮಾಡಬೇಕು? ನಮ್ಮವರೂ ಸೇರಿದಂತೆ ಎಲ್ಲರನ್ನೂ ತಿನ್ನುವ ಕೆಲಸ ನಾವೇ ಮಾಡಬೇಕು ಎಂದು ಹೇಳೋಣವೇ? ಬ್ರಾಹ್ಮಣವಾದ ಮತ್ತು ಬಂಡವಾಳವಾದಗಳೆರಡೂ ನಮ್ಮ ಶತ್ರುಗಳು ಎಂದು ಬಾಬಾಸಾಹೇಬರು ಹೇಳಿದ್ದನ್ನೂ ತಿರುಚುತ್ತಾ, ಬಂಡವಾಳವಾದವನ್ನು ಸಮರ್ಥಿಸಲು ಕೆಲವರು ಹೊರಟಿರುವುದು ಆಘಾತಕಾರಿಯಾಗಿದೆ. ಚಳವಳಿ ಹಾಗೂ ಸಂಸದೀಯ ಪ್ರಜಾತಂತ್ರದ ಓಟಿನ ರಾಜಕಾರಣದ ಕಾರಣದಿಂದ ಶೋಷಿತ ಸಮುದಾಯಗಳ ನಡುವಿನಿಂದಲೇ ಒಂದು ಮಧ್ಯಮ ವರ್ಗ ಹುಟ್ಟಿ ಬರಲು ಆರಂಭವಾಯಿತು. ಶಿಕ್ಷಣ ಪಡೆದುಕೊಂಡು, ಸರ್ಕಾರದ ಕೆಲವು ಸಣ್ಣಪುಟ್ಟ ಸೌಲಭ್ಯಗಳನ್ನು ಬಳಸಿಕೊಂಡು ಮೇಲೆದ್ದು ಬಂದ ಈ ವರ್ಗವು ಇನ್ನೂ ಮೇಲೆ ಬರಲು ದಾರಿ ಹುಡುಕುತ್ತಿತ್ತು. ಆದರೆ, ಇದುವರೆಗೆ ಸಿಕ್ಕ ಅವಕಾಶಗಳನ್ನೂ ನಿಧಾನಕ್ಕೆ ಇಲ್ಲವಾಗಿಸುತ್ತಿರುವುದು ಬಂಡವಾಳವಾದ ಪ್ರೇರಿತ ಜಾಗತೀಕರಣ. ಅದಕ್ಕೆ ಬೇಕಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮರ್ಥನೆಯನ್ನು ಒದಗಿಸುತ್ತಿರುವುದು ಬ್ರಾಹ್ಮಣವಾದವಾಗಿದೆ.

ಇಂತಹ ಹೊತ್ತಿನಲ್ಲಿ ಅಪಾಯವನ್ನು ಸರಿಯಾಗಿ ಮುಂದಿಡುವ ಬದಲು, ಅದರೊಳಗೇ ನಾವೂ ಬೀಳಬೇಕು ಎಂದು ಹೇಳುವುದರ ಪರಿಣಾಮ ಏನಾಗಿರುತ್ತದೆ? ಅಂಬಾನಿ, ಅದಾನಿಯ ರೀತಿಯಾಗಬೇಕು ಎಂದು ಹೇಳುವುದರಿಂದ, ಆ ರೀತಿ ಆಗಲು ಸಾಧ್ಯವಿಲ್ಲ, ಬದಲಿಗೆ ಅಂಬಾನಿ ಅದಾನಿ ಇರುವ ರೀತಿಗೆ, ಅವರು ಬೆಳೆದುಬಂದ ರೀತಿಗೆ ಸಮರ್ಥನೆ ಒದಗಿಸಿದಂತಾಗುತ್ತದೆ. ಇದು ಶೋಷಿತ ಸಮುದಾಯಗಳ ವಿರುದ್ಧದ ಯಥಾಸ್ಥಿತಿಗೆ ಸಮರ್ಥನೆ ಒದಗಿಸುತ್ತದೆ. ಒಂದೆಡೆ ನಾವು ಸಮಾನ ಶಿಕ್ಷಣ ನೀತಿಗಾಗಿ ಕೇಳುವುದು, ಇನ್ನೊಂದೆಡೆ ಸಮಾನ ಶಿಕ್ಷಣ-ಎಲ್ಲರಿಗೂ ಆರೋಗ್ಯ-ಘನತೆಯುಳ್ಳ ಬದುಕು ಇತ್ಯಾದಿಗಳಿಗೆ ವಿರುದ್ಧವಾದ ಬಂಡವಾಳಶಾಹಿ ನೀತಿಗೆ ಪ್ರೋತ್ಸಾಹಕರವಾಗಿ ನಡೆದುಕೊಳ್ಳುವುದು ಸರಿಯೇ? ಈ ದೇಶದ ಶಿಕ್ಷಣ ಕ್ಷೇತ್ರಗಳ ಖಾಸಗೀಕರಣಕ್ಕೆ ತಳಹದಿಯಾದ ಬಿರ್ಲಾ-ಅಂಬಾನಿ ವರದಿಯನ್ನು ಸಿದ್ಧಪಡಿಸಿದ್ದು ಇದೇ ಅಂಬಾನಿಯಲ್ಲವೇ? ಆ ಜಾಗದಲ್ಲಿ ಒಂದು ಶೋಷಿತ ಸಮುದಾಯಕ್ಕೆ ಸೇರಿದ್ದ ವ್ಯಕ್ತಿ ಇದ್ದಿದ್ದರೆ ಬೇರೆ ರೀತಿಯ ವರದಿ ಬರುತ್ತಿತ್ತು ಎಂದು ಕೆಲವರು ಹೇಳಬಹುದು. ಹೌದು, ಬಿರ್ಲಾ ಅಂಬಾನಿ ಸಮಿತಿಯ ಬದಲಾಗಿ ಸುಖದೇವ್‌ಥೋರಟ್, ಆನಂದ್ ತೇಲ್‌ತುಂಬ್ಡೆಯವರ ಸಮಿತಿ ಇದ್ದಿದ್ದರೆ ಅದು ಈ ದೇಶದ ಚಿತ್ರಣವನ್ನೇ ಬದಲಿಸಬಲ್ಲ ಶಿಕ್ಷಣ ನೀತಿಗೆ ಕಾರಣವಾಗುತ್ತಿತ್ತು, ಆದರೆ ಆ ಶೋಷಿತ ಹಿನ್ನೆಲೆಯ ವ್ಯಕ್ತಿಯೂ ಅಂಬಾನಿಯ ರೀತಿಯ ಉದ್ದಿಮೆದಾರನೇ ಆಗಿದ್ದಲ್ಲಿ ಅದು ಆಗುತ್ತಿರಲಿಲ್ಲ, ಏಕೆಂದರೆ, ತನ್ನ ಕಾರ್ಪೊರೇಟ್ ಸಾಮ್ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ 'ಅಂಬಾನಿ ಅದಾನಿಯಂತಹ' ಉದ್ದಿಮೆದಾರ ವರದಿ ನೀಡುತ್ತಿರಲಿಲ್ಲ.

ಶಿಕ್ಷಣಕ್ಕೆ ಸಂಬಂಧಿಸಿದ ಬಿರ್ಲಾ-ಅಂಬಾನಿ [illegible] ಮತ್ತು ನೀತಿಗಳು ನೂರೆಂಟು ಬಗೆಯಲ್ಲಿ ಜಾ[illegible] ಅಂಬಾನಿ ಅದಾನಿಯ ರೀತಿಯ ಕೊಳ[illegible] ಬಂಡವಾಳಿಗರು ಸೃಷ್ಟಿಯೇ ಆಗುತ್ತಿರಲಿಲ[illegible] ಜನಸಾಮಾನ್ಯರಿಗೆ ಸೇರಿದ ಸಂಪನ್ಮೂಲಗಳ[illegible] ಹೊಡೆಯದೇ ಅಂತಹವರು ಹುಟ್ಟಿಕೊ[illegible] ಆಗುವುದಿಲ್ಲ, ಅವರು ಯಾವುದೇ ಸಮ[illegible] ಸೇರಿದ್ದರೂ ಸಹ ಮತ್ತು ಇದನ್ನು ಬಾಬಾ[illegible] ತಮ್ಮ ಕೈಯ್ಯಾರೆ ಬರೆದ ರಾಜ್ಯ ನಿರ್ದೇಶ[illegible] ಕಲಂ 39ಸಿ ವಿರೋಧಿಸುತ್ತದೆ.

ಈ ಚರ್ಚೆ ಬಂದಾಗ ಕೆಲವು ಗೆಳೆಯರು [illegible] ಉದಾಹರಣೆ ನೀಡುತ್ತಾರೆ. "ಅಲ್ಲಿ ನೋಡಿ [illegible] ಬಂಡವಾಳಶಾಹಿಗಳೆಂದು ಹೇಳುವ ದೇಶದ [illegible] ಜನರಿಗೆ ಎಷ್ಟೆಲ್ಲಾ ಸಕಾರಾತ್ಮಕ ಅನುಕೂ[illegible] ಮಾಡಿಕೊಟ್ಟಿದ್ದಾರೆ" ಎಂಬುದು ಅವರ [illegible] ಇಂತಹುದೇ ಕ್ರಮಗಳನ್ನೂ ಈ ದ[illegible] ಮಾಡಿಕೊಡಲಾಗಿದೆ. ಶೋಷಿತ ಸಮುದಾಯ[illegible] ಮತ್ತು ಅದು ಸಂಸದೀಯ ಪ್ರಜಾತಂತ್ರದಲ್ಲಿ ಓ[illegible] ಚುನಾವಣೆಯ ಸಂದರ್ಭದಲ್ಲಿ ತಂದುಕೊಡು[illegible] ಕಾರಣದಿಂದ ಇದು ಆಗಿದೆ. ನಮ್ಮ[illegible] ಸಮುದಾಯಗಳ ಸ್ಥಿತಿ ಶೋಚನೀಯ[illegible] ಅಮೆರಿಕದಲ್ಲೂ ಹಾಗೆಯೇ ಇದೆ. ಅದನ್ನ[illegible] ಮಾರ್ಟಿನ್ ಲೂಥರ್ ಕಿಂಗ್ 3 ಹೇಳಿದ್ದು.

ಜಗತ್ತಿನ ವಿದ್ಯಮಾನಗಳನ್ನು ಅಪ್ಪಾಗಿ [illegible] ಸಾಮಾನ್ಯ ವ್ಯಕ್ತಿಯೊಬ್ಬರು 'ಅಂಬಾನಿ, ಅದಾನಿ[illegible] ಆಡಿದ್ದರೆ ಅಷ್ಟು ತೊಂದರೆಯಿರಲಿಲ್ಲ, ಇದನ್ನು [illegible] ವಿಶ್ವವಿದ್ಯಾಲಯದ ಪ್ರೊಫೆಸರ್. ಈ ಸಮಾವೇಶ[illegible] ಪ್ರೊಫೆಸರ್ ಆಡಿದ ಮಾತಿಗಾಗಿ ಮಾತ್ರ ಈ [illegible] ನಾನು ಎತ್ತಿಲ್ಲ, ಜಾಗತೀಕರಣದ ದುಷ್ಪರಿಣಾ[illegible] ಮುಂಗಂಡು ಜನರನ್ನು ಎಚ್ಚರಿಸಬೇಕಿದ್ದ[illegible] ಬುದ್ಧಿಜೀವಿಗಳು, ಅದು ಒಳ್ಳೆಯದು ಮಾಡು[illegible] ಭ್ರಮೆಗಳನ್ನು ಹುಟ್ಟಿಹಾಕಿದ್ದನ್ನು ಕಂಡಿದ್ದೇವೆ. [illegible] ಬೇಕಾದಷ್ಟು ಜನ ಇದ್ದಾರೆ. ನಾನು ಈ ಮ[illegible] ಹೇಳಿದರೆ ಎದುರಿಗಿರುವವರಿಗೆ ಖುಷಿಯಾಗು[illegible] ಭಾವಿಸಿ, ಅವರಿಗೆ ಖುಷಿಯಾಗಬಹುದಾದ ಸ[illegible] ಥಿಯರೈಸ್ ಮಾಡಿ ಹೇಳುವುದು; ಒಂದು ವೇ[illegible] ಬಂದರೆ, ನಾನು ಹಾಗೆ ಹೇಳಿದ್ದಲ್ಲ ಎಂದು [illegible] ಸಮರ್ಥನೆಗಳನ್ನು ಮುಂದಿಡುವುದನ್ನು ಮ[illegible] ಅವರಿಗೆ ಸಲೀಸು. ಇಂತಹವರು ಕೇವಲ ಕಾಂಗ್[illegible] ಬಂದಾಗ ಮಾತ್ರ ಮಿಂಚುವುದಿಲ್ಲ; ಅವರುಗ[illegible] ಸರ್ಕಾರದಲ್ಲೂ 'ತಜ್ಞ'ರಾಗಿ ಮುಂದುವರ[illegible] ಬಲಪಂಥೀಯರಿಗೂ ಸಮರ್ಥನೆ ಒದಗಿಸು[illegible] ಸಮ್ಮೇಳನದ ಒಟ್ಟಾರೆ ಪ್ರಕ್ರಿಯೆಯ ಹಿನ್ನೆಲೆಯ[illegible] ದೊಡ್ಡ ಅವಕಾಶವಾದಿಗಳ ಚಿಂತನೆ ಹಾಗೂ[illegible] ವೈರುಧ್ಯಗಳ ಕುರಿತು ಸರಿಯಾದ ವಿಮರ್ಶೆ [illegible]

ಇವರುಗಳಿಗಿಂತ ಜನಪ್ರಿಯ ರಾ[illegible] ಮಾಡುತ್ತಲೂ, ತಮ್ಮ ಪಕ್ಷಗಳ ಒಳಗಿನ ಹಲವು [illegible] ನಡುವೆಯೂ ಶೋಷಿತ ಸಮುದಾಯಗಳ [illegible] ರಾಜಕಾರಣಿಗಳೇ ಸಕಾರಾತ್ಮಕ ಕೆಲಸ ಮಾಡು[illegible]

ಜಗದೀಶ್ ಕುಮಾರನ ಹುಚ್ಚಾಟ ಮತ್ತು ವಿದ್ಯಾರ್ಥಿಗಳ ದಮನ

ತಲೆಕೆಟ್ಟಿರುವವರನ್ನೆಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳನ್ನಾಗಿಸಿದರೆ ಎಂತೆಂತಹ ಅನಾಹುತಗಳು ಸಂಭವಿಸುತ್ತವೆ ಎಂಬುದಕ್ಕೆ ಪ್ರತಿಷ್ಠಿತ ಜೆಎನ್‌ಯು ವೈಸ್‌ಚಾನ್ಸಲರ್ ಜಗದೀಶ್ ಕುಮಾರ್ ಎಂಬ ಮೆಂಟಲ್ ಗಿರಾಕಿಯೇ ಸಾಕ್ಷಿ. ಈತನನ್ನು ಕುಲಪತಿಯಾಗಿಸಿದಾಗಿನಿಂದ ಮಾಡಿರುವ ಎಡವಟ್ಟುಗಳು ಒಂದೆರಡಲ್ಲ. ಕಳೆದ ಭಾನುವಾರ ವಿಶ್ವವಿದ್ಯಾಲಯದಲ್ಲಿ 'ಕಾರ್ಗಿಲ್ ವಿಜಯ ದಿವಸ'ವನ್ನು ಏರ್ಪಡಿಸಿದ್ದ ಜಗದೀಶ್ ಕುಮಾರ್ ಅಂದು ಅತಿಥಿಗಳಾಗಿ ಬಂದಿದ್ದ ಧರ್ಮೇಂದ್ರ ಪ್ರಧಾನ್ ಮತ್ತು ಜನರಲ್ ವಿ.ಕೆ.ಸಿಂಗ್ ಎಂಬ ಇಬ್ಬರು ಕೇಂದ್ರ ಮಂತ್ರಿಗಳ ಮುಂದೆ ಒಂದು ವಿಚಿತ್ರ ಮನವಿಯನ್ನು ಇಟ್ಟ. ಅದೇನೆಂದರೆ, "ವಿಶ್ವವಿದ್ಯಾಲಯಕ್ಕೆ ಒಂದು ಯುದ್ಧ ಟ್ಯಾಂಕ್ ಅನ್ನು ಕೊಡಿಸಿ, ಪ್ರತಿದಿನ ಕ್ಯಾಂಪಸ್ಸಲ್ಲಿ ಅದನ್ನು ವಿದ್ಯಾರ್ಥಿಗಳು ನೋಡುವುದರಿಂದ ಅವರಲ್ಲಿ ಭಾರತೀಯ ಸೇನೆಯ ಬಲಿದಾನಗಳು ಅರ್ಥವಾಗಿ ಅವರಲ್ಲಿ ರಾಷ್ಟ್ರೀಯ ಭಾವನೆ ಹೆಚ್ಚಾಗುತ್ತದೆ."

ಜಗದೀಶ್ ಕುಮಾರನ ಈ ಹುಚ್ಚು ಬೇಡಿಕೆಗೆ ತಕ್ಕಂತೆ ಅವತ್ತಿನ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ ನಿವೃತ್ತ ಸೇನಾಧಿಕಾರಿ ಜಿ.ಡಿ.ಭಕ್ಷಿ "ಜೆಎನ್‌ಯು ಎಂಬ ಕೋಟೆಯನ್ನು ವಶಪಡಿಸಿಕೊಂಡಿದ್ದೇವೆ. ಆದರೆ ನಮ್ಮ ಕೆಲಸ ಇನ್ನೂ ಮುಗಿದಿಲ್ಲ, ಸದ್ಯದಲ್ಲೇ ಹೈದರಾಬಾದ್ ಕೇಂದ್ರ ವಿವಿ ಮತ್ತು ಜಾಧವಪುರ್ ವಿವಿ ಎಂಬ ಕೋಟೆಗಳನ್ನೂ ವಶಪಡಿಸಿಕೊಳ್ಳುತ್ತೇವೆ" ಎಂದ. ಹಾಗೆಯೇ ಮತ್ತೊಬ್ಬ ನಿವೃತ್ತ ಸೇನಾಧಿಕಾರಿ ಬಿ.ಕೆ.ಮಿಶ್ರಾ "ಜನ ಈ ದೇಶವನ್ನು ಪ್ರೀತಿಸುವಂತಹ ವಾತಾವರಣವನ್ನು ನಿರ್ಮಿಸುತ್ತೇವೆ. ಆದರೂ ಅವರು ಪ್ರೀತಿಸದಿದ್ದರೆ ಅವರನ್ನು ಬಲವಂತ ಮಾಡುತ್ತೇವೆ" ಎಂದ.

ಅಲ್ಲ ವಿಶ್ವವಿದ್ಯಾಲಯಗಳು ಇರುವುದು ಏತಕ್ಕೆ? ಯುವಜನತೆ ಪ್ರಶ್ನಿಸುವ ಮೂಲಕ ಜ್ಞಾನವನ್ನು ಸಂಪಾದಿಸಬೇಕು ಎಂದೋ ಅಥವಾ ಯುದ್ಧಾಸ್ತ್ರಗಳನ್ನು ಪ್ರದರ್ಶಿಸುವ ಮೂಲಕ ಅವರಲ್ಲಿ ಭಯಭೀತಿಯನ್ನು ಹುಟ್ಟಿಸಬೇಕು ಎಂದೋ?

ಈ ಜಗದೀಶ್ ಕುಮಾರ್ ಎಂಬ ಮೋದಿ ಶಿಷ್ಯ ಮೊದಲು ರಾಷ್ಟ್ರ ಗಮನಕ್ಕೆ ಬಂದಿದ್ದೇ ಕನ್ನಯ್ಯ ಕುಮಾರ್, ಉಮರ್ ಖಾಲಿದ್ ಮತ್ತು ಅನಿರ್ಬನ್ ಭಟ್ಟಾಚಾರ್ಯ ಎಂಬ ವಿದ್ಯಾರ್ಥಿಗಳ ಮೇಲೆ ದೇಶವನ್ನು ಒಡೆಯುವ ಸ್ಲೋಗನ್‌ಗಳನ್ನು ಕೂಗಿದರು ಎಂಬ ಸುಳ್ಳು ಆರೋಪಗಳನ್ನು ಹೊರಿಸಿ ಅವರನ್ನೆಲ್ಲ ಜೈಲಿಗೆ ದೂಡಿದಾಗ. ಅದು ಎಂತಹ ಕುತಂತ್ರ ಎಂಬುದಕ್ಕೆ ಸಾಕ್ಷಿ ಆ ಪ್ರಕರಣ ನಡೆದು ಇಲ್ಲಿಗೆ ಒಂದೂವರೆ ವರ್ಷವಾದರೂ ಅವರ ವಿರುದ್ಧ ಇಲ್ಲಿಯತನಕ ದೆಹಲಿ ಪೊಲೀಸರಿಗೆ ಚಾರ್ಜ್‌ಶೀಟ್ ಸಲ್ಲಿಸಲಾಗದಿರುವುದು.



ಇರಲಿ, ಆ 'ದೇಶದ್ರೋಹ' ಪ್ರಕರಣದ ನಂತರ ಅದೇ ವಿವಿಯ ನಜೀಬ್ ಅಹಮದ್ ಎಂಬ ಮತ್ತೊಬ್ಬ ವಿದ್ಯಾರ್ಥಿ ನಾಪತ್ತೆಯಾದ. ಆತ ನಾಪತ್ತೆಯಾಗುವ ಮುನ್ನ ಅದೇ ವಿವಿಯ ಚೆಡ್ಡಿ ವಿದ್ಯಾರ್ಥಿಗಳಾದ ಎಬಿವಿಪಿ ಸದಸ್ಯರು ನಜೀಬ್‌ನನ್ನು ಹಲವು ಬಾರಿ ಥಳಿಸಿದ್ದರು. ವಿವಿಯ ಅಧಿಕಾರಿಯೊಬ್ಬರು (ಪ್ರಾಕ್ಟರ್) ಈ ಪ್ರಕರಣ ಕುರಿತು ಸಲ್ಲಿಸಿದ ವರದಿಯಲ್ಲಿ ಹಲ್ಲೆ ಮಾಡಿದ್ದ ಎಬಿವಿಪಿಯ ಸದಸ್ಯರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಜಗದೀಶ್ ಕುಮಾರನಿಗೆ ಸೂಚಿಸಿದ್ದರು. ಇದಾಗಿ ಒಂಬತ್ತು ತಿಂಗಳುಗಳು ಕಳೆದಿವೆ. ಆದರೆ ಇವತ್ತಿಗೂ ನಜೀಬ್ ನಾಪತ್ತೆ ಆಗಿದ್ದು ಅದೇ ಚೆಡ್ಡಿ ವಿದ್ಯಾರ್ಥಿಗಳು ಯಾರ ಭಯವೂ ಇಲ್ಲದೆ ಕ್ಯಾಂಪಸ್‌ನಲ್ಲಿ ಮೆರೆಯುತ್ತಿದ್ದಾರೆ.

ಕನ್ನಯ್ಯ ಮತ್ತು ಇತರರು ಜಾಮೀನು ಪಡೆದು ಹೊರಬಂದ ನಂತರ ವಿವಿಯ ಮುಖ್ಯ ಕಚೇರಿಯ ಎದುರು ಇರುವ ಮೆಟ್ಟಿಲು ಮತ್ತು ಹಜಾರಕ್ಕೆ 'ಫ್ರೀಡಮ್ ಸ್ಕೈರ್' ಎಂದು ಹೆಸರಿಟ್ಟು ಅಲ್ಲಿ ರಾಷ್ಟ್ರೀಯತೆ ಅಂದರೆ ಏನು ಎಂಬುದರ ಕುರಿತು ದೇಶದ ಪ್ರಖ್ಯಾತ ಪ್ರೊಫೆಸರ್ ಮತ್ತು ಹೋರಾಟಗಾರರಿಂದ ಬರೋಬ್ಬರಿ ಒಂದು ತಿಂಗಳ ಕಾಲ ಉಪನ್ಯಾಸಗಳನ್ನು ಕೊಡಿಸಿದ್ದರು. ಜೊತೆಗೆ ವಿದ್ಯಾರ್ಥಿಗಳು ಕೂಡ ಆ ಸ್ಥಳವನ್ನು ತಮ್ಮ ಪ್ರತಿಭಟನೆಗಳಿಗೆ ಉಪಯೋಗಿಸಿದ್ದರು. ಅದನ್ನೆಲ್ಲ ತಡೆಯಲು ಜಗದೀಶ್ ಕುಮಾರ್ ಏನು ಮಾಡಿದನೆಂದರೆ, ಅದ್ಯಾವುದೋ ಕಲಂ ಹಿಡಿದು ಇನ್ನು ಮುಂದೆ ಅಲ್ಲಿ ಯಾರೂ ಗುಂಪು ಸೇರಬಾರದೆಂದು ಫತ್ವಾ ಹೊರಡಿಸಿದನಲ್ಲದೆ, ಆ ಮೆಟ್ಟಿಲುಗಳ ಮೇಲೆ ದೊಡ್ಡದಾದ ಸಿಮೆಂಟ್ ಕುಂಡಗಳನ್ನಿಟ್ಟು ಅವುಗಳಲ್ಲಿ ಸಸಿಗಳನ್ನು ನೆಡಿಸಿದ.

ಜೆಎನ್‌ಯು ವೈಶಿಷ್ಟ್ಯತೆಗಳಲ್ಲಿ ಒಂದು ಅಲ್ಲಿನ ಪೋಸ್ಟರ್‌ಗಳು. ಹಲವು ಕಟ್ಟಡಗಳ ಗೋಡೆಗಳ ಮೇಲೆ ವಿದ್ಯಾರ್ಥಿಗಳು ಬಗೆಬಗೆಯ ಪೋಸ್ಟರ್‌ಗಳನ್ನು ಅಂಟಿಸಿರುತ್ತಾರೆ ಅಥವಾ ಬಣ್ಣಗಳಲ್ಲಿ ಬಿಡಿಸಿರುತ್ತಾರೆ. ಅಂತಹ ಪೋಸ್ಟರ್‌ಗಳು ಯಾವುದೋ ಪ್ರತಿಭಟನೆಯ ಬಗ್ಗೆ ಇರಬಹುದು ಅಥವಾ ಇನ್ನೆಲ್ಲೋ ಅಣೆಕಟ್ಟೆಗೆ ಮುಳುಗಡೆಯಾದ ಹಳ್ಳಿಗಳ ಬಗ್ಗೆ ಇರಬಹುದು ಅಥವಾ ಮೋದಿ ಪ್ರಜಾತಂತ್ರ ವ್ಯವಸ್ಥೆಯನ್ನು ಕುಲಗೆಡಿಸುತ್ತಿರುವ ಬಗ್ಗೆ ಕಾರ್ಟೂನ್ ಇರಬಹುದು, ಬಸ್ತರ್‌ನಲ್ಲಿ ಭಾರತೀಯ ಸೇನೆಯ ತುಕಡಿಗಳು ನಡೆಸುತ್ತಿರುವ ಅತ್ಯಾಚಾರ/ದಾಳಿಗಳನ್ನು ಖಂಡಿಸುವ ಪೈಂಟಿಂಗ್ ಆಗಿರಬಹುದು... ಈ ಪೋಸ್ಟರ್ ಸಂಸ್ಕೃತಿ ಬಹಳ ವರ್ಷಗಳಿಂದ ಜೆಎನ್‌ಯುನಲ್ಲಿ ನಡೆದುಕೊಂಡು ಬಂದಿದೆ. ಇಲ್ಲಿಯತನಕ ಯಾವ ವಿಸಿಯೂ ಇದರ ಕುರಿತು ಚಕಾರವೆತ್ತಿರಲಿಲ್ಲ, ಆದರೆ ಜಗದೀಶ್ ಕುಮಾರ್ ಬಂದಮೇಲೆ ಇವುಗಳ ಮೇಲೆ ದಂಡ ವಿಧಿಸುತ್ತಿದ್ದಾನೆ. ಕಳೆದ ಹದಿನೆಂಟು ತಿಂಗಳಲ್ಲಿ ಈತ ಹೀಗೆ ವಿದ್ಯಾರ್ಥಿಗಳ ಮೇಲೆ ವಿಧಿಸಿರುವ ದಂಡದ ಒಟ್ಟು ಮೊತ್ತ ಬರೋಬ್ಬರಿ ನಾಲ್ಕು ಲಕ್ಷ ರೂಪಾಯಿಗಳು. ಅಷ್ಟೇ ಅಲ್ಲ, ತನ್ನ ವಿರುದ್ಧ ಸ್ಲೋಗನ್ ಕೂಗಿದ್ದಕ್ಕೆ, ತನ್ನನ್ನು ಭೇಟಿಯಾಗಲು ಸಮಯ ಕೇಳಿದ್ದಕ್ಕೆ, ತನ್ನ ವಿರುದ್ಧ ಹೇಳಿಕೆ ಕೊಟ್ಟದ್ದಕ್ಕೆ ಎಂದೆಲ್ಲ ದಂಡ ವಿಧಿಸುತ್ತಿದ್ದಾನೆ ಅಥವಾ ವಿದ್ಯಾರ್ಥಿಗಳನ್ನು ವಿಚಾರಣೆಗೆ ಒಳಪಡಿಸುತ್ತಿದ್ದಾನೆ. ಇನ್ನೂ ಮುಂದೆ ಹೋಗಿ "ನಿಮ್ಮ ವಿರುದ್ಧ ವಿಚಾರಣೆ ನಡೆಯುತ್ತಿದೆ/ ನಿಮ್ಮ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತಿದೆ" ಎಂದೆಲ್ಲ ಸಬೂಬು ನೀಡಿ ವಿದ್ಯಾರ್ಥಿಗಳು ಹೊಸ ಸೆಮಿಸ್ಟರ್‌ಗಳನ್ನು ಸೇರದಂತೆ ತಡೆಯುತ್ತಿದ್ದಾನೆ. ಈಗಾಗಲೇ 30 ವಿದ್ಯಾರ್ಥಿಗಳನ್ನು ಹೀಗೆ ತಡೆಹಿಡಿದಿದ್ದು ಅವರುಗಳಲ್ಲಿ ಉಮರ್ ಖಾಲಿದ್ ಕೂಡ ಒಬ್ಬ. ಅಂದಹಾಗೆ, ಕನ್ನಯ್ಯ, ಅನಿರ್ಬನ್ ಮತ್ತು ಉಮರ್ ವಿರುದ್ಧ ಇಲ್ಲಿಯತನಕ ಚಾರ್ಜ್‌ಶೀಟ್ ದಾಖಲಾಗಿಲ್ಲವಾದರೂ 'ದೇಶದ್ರೋಹ'ದ ಕೇಸು ಅವರುಗಳ ನೆತ್ತಿಯ ಮೇಲೆ ತೂಗುತ್ತಿರುವ ಕತ್ತಿಯಾಗಿಯೇ ಉಳಿದಿದೆ. ಯಾಕೆಂದರೆ ಅದು ಕ್ಲೋಸ್ ಆಗುವ ತನಕ ಅವರಿಗೆ ಯಾವ ವಿವಿಯಲ್ಲೂ ಕೆಲಸ ಸಿಗುವುದಿಲ್ಲ; ಓದನ್ನು ಮುಂದುವರಿಸಲೂ ಸಾಧ್ಯವಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯವನ್ನೇ ಮೋದಿ ಗ್ಯಾಂಗ್ ಹೀಗೆ ಮಸುಕುಗೊಳಿಸುತ್ತಿದೆ.

ಯುವಜನತೆಗೆ ಮಂಕು ಬೂದಿ ಎರಚಿ ಅಧಿಕಾರಕ್ಕೇರಿದ ಮೋದಿಗೆ ಇವತ್ತು ಬಲವಾದ ಪ್ರತಿರೋಧ ವ್ಯಕ್ತವಾಗುತ್ತಿರುವುದು ಅದೇ ಯುವಜನತೆಯಿಂದ. ಆದ್ದರಿಂದ ಅವರನ್ನೆಲ್ಲ ದಮನ ಮಾಡಲು ಮೋದಿ ಹೊರಟಿದ್ದಾನೆ. ಉದಾಹರಣೆಗೆ, ಪಂಜಾಬ್ ವಿಶ್ವವಿದ್ಯಾಲಯದ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


ವಿದ್ಯಾರ್ಥಿಗಳು ಶುಲ್ಕ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು. ಪೊಲೀಸರು ಅವರನ್ನೆಲ್ಲ ಬಡಿದು ಜೈಲಿಗಟ್ಟಿದರು. ಕಳೆದ ತಿಂಗಳು ಅಲಹಾಬಾದ್ ವಿಶ್ವವಿದ್ಯಾಲಯದ 11 ವಿದ್ಯಾರ್ಥಿಗಳು ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥನ ಗೂಂಡಾರಾಜ್ ವಿರೋಧಿಸಿ ಪ್ರತಿಭಟಿಸಿದ್ದರಿಂದ ಅವರೂ ಜೈಲುಪಾಲಾದರು. ಅಷ್ಟೇ ಅಲ್ಲ, ಅದಾದ ಒಂದು ತಿಂಗಳ ನಂತರ ಯೋಗಿ ಆದಿತ್ಯನಾಥನ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ದ್ವಿತೀಯ ಮತ್ತು ಉನ್ನತ ಶಿಕ್ಷಣಕ್ಕೆ ದೊಡ್ಡ ಮಟ್ಟದಲ್ಲಿ ಅನುದಾನವನ್ನು ಕಡಿತಗೊಳಿಸಿತು. ಇವೆಲ್ಲ ಮೋದಿ ಮತ್ತಾತನ ಚೆಡ್ಡಿ ಗ್ಯಾಂಗಿಗೆ ಉನ್ನತ ಶಿಕ್ಷಣ, ಯುವಕರ ಭವಿಷ್ಯದ ಬಗ್ಗೆ ಇರುವ ತಿರಸ್ಕಾರ ಭಾವವನ್ನು ಎತ್ತಿಹಿಡಿಯುತ್ತವೆ. ಸ್ವತಃ ಮೋದಿ ನಾಲ್ಕನೆ ಕ್ಲಾಸ್ ಪಾಸ್ ಆಗಿಲ್ಲ, ಇನ್ನು ಯೋಗಿ ಆದಿತ್ಯನಾಥ ಡಿಗ್ರಿ ಮಾಡಿಕೊಂಡಿದ್ದಾನಷ್ಟೇ. ಇಂತಹವರಿಗೆ ಎಂಎ, ಎಂಫಿಲ್, ಪಿಎಚ್‌ಡಿ, ಸ್ಕಾಲರ್‌ಶಿಪ್, ರಿಸರ್ಚ್ ಫೆಲೋಶಿಪ್ ಇತ್ಯಾದಿಗಳ ಪ್ರಾಮುಖ್ಯತೆ ಬಗ್ಗೆ ಅರಿವು ಇರಲಿ, ಅವುಗಳ ತಲೆಬುಡವೂ ಗೊತ್ತಿಲ್ಲ.

ಅಂತಹವರಿಂದ ವಿದ್ಯಾರ್ಥಿಗಳ ದಮನವಲ್ಲದೆ ಉದ್ಧಾರ ಸಾಧ್ಯವೇ? ■

ನಿನ್ನೊಂದಿಗೆ ನನಗೆ ಸಂಬಂಧವೇ ಇಲ್ಲ

ನಿನ್ನ ಮನೆಯ
ಒಂದು ಕೋಣೆ
ಹೊತ್ತಿ ಉರಿಯುತ್ತಿರುವಾಗ
ಮತ್ತೊಂದು ಕೋಣೆಯಲ್ಲಿ
ನಿನಗೆ ನಿದ್ರಿಸಲು ಸಾಧ್ಯವೇ?
ನಿನ್ನ ಮನೆಯ
ಒಂದು ಕೋಣೆಯಲ್ಲಿ
ಹೆಣದ ರಾಶಿ
ನಾರುತ್ತಿರುವಾಗ
ಇನ್ನೊಂದು ಕೋಣೆಯಲ್ಲಿ ಕೂತು
ಪ್ರಾರ್ಥನೆ ಮಾಡಲು
ನಿನಗೆ ಸಾಧ್ಯವೇ?
ಹೌದೆಂದಾದರೆ
ನಿನ್ನ ಬಳಿ ಹೇಳಲು
ನನಗೇನೂ ಇಲ್ಲ.

ದೇಶವೆಂದರೆ
ಅದು ಕಾಗದದ ಮೇಲೆ
ಬರೆದ ನಕ್ಷೆಯಲ್ಲ,
ಒಂದು ಭಾಗ
ಹರಿದುಹೋದರೆ
ಉತ್ತುಳಿದ ಭಾಗಗಳು
ನಲುಗದೆ ಇರಲು
ನದಿ, ಬೆಟ್ಟ, ಹಳ್ಳಿ ಪಟ್ಟಣ
ಏನೂ ಅರಿಯದಂತೆ
ಇದ್ದಂತೆಯೇ ಇರಲು
ಬದ್ಧಲ್ಲೇ ಬದ್ಧಿರಲು.
ನಿನಗೆ ಒಪ್ಪಿಗೆ ಆಗದಿದ್ದರೆ



ನಿನ್ನೊಂದಿಗೆ ನನಗೆ
ಯಾವುದೇ ಸಂಬಂಧವೂ ಇಲ್ಲ.

ಈ ಲೋಕದಲ್ಲಿ
ಮನುಷ್ಯ ಜೀವಕ್ಕಿಂತ
ಮಿಗಿಲಾದುದು
ಏನೂ ಇಲ್ಲ,
ದೇವರು

ಜ್ಞಾನ
ಚುನಾವಣೆ.
ಕಾಗದದ ತುಂಡೊಂದರ ಮೇಲೆ
ಬರೆದ ಸಾಲುಗಳನ್ನು
ಹರಿದುಹಾಕಲು ಸಾಧ್ಯ
ನೆಲದ ವಿಳಾ
ಪದರಗಳ ಕೆಳಗೆ
ಹುಗಿಯಲು ಸಾಧ್ಯ.

ಹೆಣವನ್ನು ಊರುಗೋಲಾಗಿಸಿಕೊಂಡು
ಹೆಣವನ್ನು ಬೆಂಬಲಿಸುವ
ವಿವೇಕವು ಕುರುಡು
ಬಂದೂಕಿನ ನಳಿಯಿಂದ
ಹೊರಹೊಮ್ಮುವ ಶಾಸನ
ಕೊಲೆಗಡುಕರ ಉದ್ಯಮ.
ನಿನಗಿದರ ಬಗ್ಗೆ
ಅಸಮ್ಮತಿ ಇದ್ದರೆ
ನಿನ್ನೊಂದಿಗೆ
ಇನ್ನೊಂದೇ ಒಂದುಕ್ಷಣ
ಇರಬಯಸುವುದಿಲ್ಲ ನಾನು.

ನೆನಪಿರಲಿ
ಮಗುವಿನ ಹತ್ಯೆ
ಹೆಣ್ಣಿನ ಕಗ್ಗೊಲೆ
ಗುಂಡಿನಿಂದ ಸೀಳಲ್ಪಟ್ಟ
ಪುರುಷನ ದೇಹ
ಕಾನೂನಿನ ವೈಫಲ್ಯ ಮಾತ್ರವಲ್ಲ
ಇಡೀ ದೇಶದ ವೈಫಲ್ಯ
ಸೋಲು.

ರಕ್ತ ಹೀಗೆ ಹರಿದಾಗ
ನೆಲ ಅದನ್ನು ಹೀರಿಕೊಳ್ಳುವುದಿಲ್ಲ
ಅದು
ಆಕಾಶದಲ್ಲಿ ಹಾರುವ
ಬಾವುಟವನ್ನು
ಕಪ್ಪಾಗಿಸುತ್ತದೆ.

ಯಾವ ನೆಲದ ಮೇಲೆ
ಸೈನ್ಯದ ಬೂಟು
ಮುದ್ರೆಯೊತ್ತುತ್ತದೋ
ಯಾವ ನೆಲದ ಮೇಲೆ
ಹೆಣಗುಳುರುಳುತ್ತಿರುತ್ತವೋ
ಆ ನೆಲದ ಕತೆಗೆ ವ್ಯಥೆಗೆ
ನಿನ್ನ ರಕ್ತ ಕುದಿಯದಿದ್ದರೆ
ನೀನು ಬಂಜರಾಗಿದ್ದಿ ಎಂದು ತಿಳಿ.
ಉಸಿರೆಳೆಯುವ ಅಧಿಕಾರ
ನೀನು ಕಳೆದುಕೊಂಡಿದ್ದಿ
ಈ ಲೋಕ ನಿನ್ನ ಪಾಲಿಗೆ ಇನ್ನಿಲ್ಲ.


ಕೊನೆಯ ಮಾತು
ಸ್ಪಷ್ಟವಾಗಿ ಹೇಳುತ್ತೇನೆ:
ಯಾವುದೇ ಕೊಲೆಗಾರನನ್ನು
ಕ್ಷಮಿಸಬೇಡ ಎಂದಿಗೂ
ಎಂದೆಂದಿಗೂ
ಅದು ನಿನ್ನ ಅಪ್ಪನೇ ಆಗಿರಲಿ
ಧರ್ಮದ ಗುತ್ತಿಗೆ ಪಡೆದವನೇ ಆಗಿರಲಿ
ಇಲ್ಲಾ
ಲೋಕತಂತ್ರದ
ಸ್ವಯಂಘೋಷಿತ ರಕ್ಷಕನೇ ಆಗಿರಲಿ.


● ಸರ್ವೇಶ್ವರ್ ದಯಾಲ್ ಸಕ್ಸೇನ
ಕನ್ನಡಾನುವಾದ:
■ ಸಂವರ್ತ 'ಸಾಹಿಲ್'

(1982ರಲ್ಲಿ 'ಅಸ್ಸಾಮ್' ಬಳಿಕ ನೈಲಿ ದಾಳಿಗಾಗಿ ಬರೆದ ಈ ಕವಿತೆಯ ಮೂಲ ಶೀರ್ಷಿಕೆ 'ಅಸ್ಸಾಂ')

ಬಿಡಿಎ-ಬಿಬಿಎಂಪಿ ಮಿಕಗಳಿಗೆ ರೇಪಿಸ್ಟ್ ಸ್ವಾಮಿ ತಿನಿಸಿದ್ದೆಷ್ಟು?

ರಂಗೀಲಾ ರಾಘವನ ಲ್ಯಾಂಡ್ ಗ್ರ್ಯಾಬಿಂಗ್





ಏಕಾಂತ ಸೇವೆಯ ನೆಪದಲ್ಲಿ ಕಂಡವರ ಹೆಣ್ಮಕ್ಕಳ ಮುಕ್ಕಿದ್ದು ಆಯ್ತು, ಬಾಲಿವುಡ್ ಬೆಡಗಿ ಮಲ್ಲಿಕಾ ಶೆರಾವತ್‌ಳನ್ನು ಮಠಕ್ಕೆ ಕರೆಸಿಕೊಂಡು ಜೊಲ್ಲು ಸುರಿಸಿದ್ದೂ ಆಯ್ತು, ಗೋಶಾಲೆಯ ನೆಪದಲ್ಲಿ ಸರ್ಕಾರದ ಬೊಕ್ಕಸವ ನೆಕ್ಕಿದ್ದೂ ಆಯ್ತು ಇದೀಗ ರೇಪಿಸ್ಟ್ ರಾಘವ ಅನಾಮತ್ತು ಸಿಲಿಕಾನ್ ಸಿಟಿಯ ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಅಮರಿಕೊಳ್ಳಲು ಸಜ್ಜಾಗಿದ್ದಾನೆ. ಗಿರಿನಗರದ ತನ್ನ ಮಠದ ಪಕ್ಕವಿರುವ ವಿವೇಕಾನಂದ ಪಾರ್ಕ್‌ಗೆ ಆಟಕಾಯಿಸಿ ಕೊಂಡಿರುವ ಈ ಕೌಬಾಯ್, ಸಾರ್ವಜನಿಕರ ಉಪಯೋಗಕ್ಕೆ ಅಂತ ಮೀಲಿಟ್ಟಿದ್ದ ಜಾಗಕ್ಕೇ ಲಂಗರು ಹಾಕಿದ್ದಾನೆ. ತನ್ನ ಮೇಲಿನ ರೇಪ್ ಕೇಸನ್ನು ತಿರುಗಾಮುರುಗ ಮಾಡಿ, ಸಾಲುಸಾಲು ಜಡ್ಜ್‌ಗಳೇ ಎದ್ದೋಗುವಂತೆ ಮಾಡಿದ್ದ ರಾಘವ ಲ್ಯಾಂಡ್ ಗ್ರ್ಯಾಬಿಂಗ್‌ನಲ್ಲೂ ಅಂತದ್ದೇ ಅಪರಾತಪರಾಕ್ಕೆ ಅಣಿಯಾಗಿರೋದು ಹೊಸ ವಿಷಯವೇನಲ್ಲ. ಆದ್ರೆ ಹೈಕೋರ್ಟ್ ಕಟಕಟೆಯಲ್ಲಿರೋ ಈ ಕೇಸು ಇನ್ನು ಸ್ವಲ್ಪ ದಿನದಲ್ಲೇ ಫೈನಲ್ ಹಂತಕ್ಕೆ ಬರಲಿದ್ದು ರಂಗೀಲಾ ರಾಘುವಿನ ಪಟಾಲಂ ಸೃಷ್ಟಿಸಿದ್ದ ಸಕಲಷ್ಟೂ ಬೋಗಸ್ ಡಾಕ್ಯುಮೆಂಟ್‌ಗಳ ಬಣ್ಣ ಬಯಲಾದರೆ ಆತನಿಗೆ ಸಾಥ್ ಕೊಟ್ಟ ಬಿಡಿಎ, ಬಿಬಿಎಂಪಿ ಗೌರ್ಮೆಂಟ್ ಧೂತರೆಲ್ಲ ಇಕ್ಕಟ್ಟಿಗೆ ಸಿಲುಕುವುದು ಮಾತ್ರ ಗ್ಯಾರಂಟಿ. ಈಗಾಗಲೇ ಅಂತಹ ಲಕ್ಷಣಗಳು ಢಾಳಾಗಿ ಗೋಚರಿಸಲು ಶುರುವಾಗಿವೆ.

ಹೇಳಿಕೇಳಿ ಅವು ಸಿಎ ಸೈಟುಗಳು, 1984ರ ಬಿಡಿಎ ತಿದ್ದುಪಡಿ ಕಾಯ್ದೆ (17) ಪ್ರಕಾರ ಸಾರ್ವಜನಿಕ ಉಪಯೋಗಕ್ಕೆ (ಸಿಎ) ಅಂತ ಮೀಸಲಿಟ್ಟ ಜಾಗವನ್ನು ಪಾರ್ಕು, ಪ್ಲೇಗ್ರೌಂಡು ಮೊದಲಾದ ಸಾರ್ವಜನಿಕ ನಿರ್ಮಾಣಗಳಿಗಲ್ಲದೆ ಬೇರೆ ಕೆಲಸಕ್ಕೆ ಬಳಸಲೇಬಾರದು. ಸಾಲದ್ದಕ್ಕೆ 2007ರ ರಿವೈಸ್ಡ್ ಮಾಸ್ಟರ್ ಪ್ಲಾನ್‌ನಲ್ಲೂ ಈ ಜಾಗವನ್ನು (ಸೈಟ್ ನಂಬರ್ 2ಎ/1) ಸಾರ್ವಜನಿಕ/ಅರೆ ಸಾರ್ವಜನಿಕ ಜಾಗ ಎಂದು ಬಿಬಿಎಂಪಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ಹಾಗಿದ್ದರೂ ರಾಘವನ ಕೌಬಾಯ್ ಟೀಮು ತಮ್ಮದು ಧಾರ್ಮಿಕ ಸಂಸ್ಥೆಯಾದ್ದರಿಂದ ನಾವು ಮಾಡೋದೂ ಸಾರ್ವಜನಿಕ ಕಾರ್ಯ ಎಂಬ ಕುತರ್ಕವನ್ನಿಟ್ಟು ಪಾರ್ಕ್ ಅತಿಕ್ರಮಿಸಲು ಮುಂದಾಗಿದೆ.

ಬೆಂಗಳೂರಿನ ಕೇಂದ್ರಭಾಗ ಗಿರಿನಗರದ ವಿಶ್ವಭಾರತಿ ಹೌಸಿಂಗ್ ಕಾರ್ಪೋರೇಷನ್ ಲೇಔಟ್‌ನಲ್ಲಿ ಈ ರಾಘವನ ಶಾಖಾ ಮಠವಿದೆ. ಅದು ಅಜಮಾಸು 80ರ ದಶಕದಲ್ಲಿ



ಗಿರಿನಗರದ ವಿವಾದಿತ ಸ್ಥಳದಲ್ಲಿರುವ ಮಠ

ನಿರ್ಮಾಣವಾದದ್ದು. ವಿಶ್ವಭಾರತಿ ಹೌಸಿಂಗ್ ಕಾರ್ಪೋರೇಷನ್ ಈ ಜಾಗದಲ್ಲಿ ಲೇಔಟ್ ಮಾಡಿ ಸೈಟುಗಳನ್ನು ಮಾರಾಟ ಮಾಡುವಾಗ ಕಾರ್ಪೋರೇಷನ್‌ನ ಅಂದಿನ ಅಧ್ಯಕ್ಷ ಬಿ.ಕೃಷ್ಣಭಟ್ ಒಂದಷ್ಟು ಜಾಗವನ್ನು ರಾಮಚಂದ್ರಾಪುರದ ಮಠಕ್ಕೆ ಕೊಟ್ಟಿದ್ದರು. ಆಗಿನ ಪೀಠಾಧಿಪತಿಯಾಗಿದ್ದ ರಾಘವೇಂದ್ರ ಭಾರತಿ ಸ್ವಾಮೀಜಿ ಅಲ್ಲೊಂದು ಪುಟ್ಟ ಶಾಖಾ ಮಠ ಕಟ್ಟಲು ಅಡಿಗಲ್ಲು ಹಾಕಿದ್ದರು. ಅದೀಗ ಬೃಹತ್ ಮಠವಾಗಿ ಬೆಳೆದು ನಿಂತಿದೆ. ಅದ್ಯಾವಾಗ ಹಾಲಿ ರೇಪಿಸ್ಟ್ ರಾಘವೇಶ್ವರ ಮಠಕ್ಕೆ ಪೀಠಾಧ್ಯಕ್ಷನಾಗಿ ವಕ್ಕರಿಸಿದನೋ ಆಗಿನಿಂದ ರಾಮಚಂದ್ರಾಪುರ ಮಠ ಧರ್ಮ ಕಾರ್ಯಗಳಿಗಿಂತ ಅಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇ ಹೆಚ್ಚು. ಅಂಥಾ ರಾಘವನ ಕಣ್ಣು ಗಿರಿನಗರದ ಮಠದ ಪಕ್ಕದಲ್ಲಿರೋ ಪಾರ್ಕ್‌ನ ಮೇಲೆ ಬಿದ್ದಿದ್ದೇ ತಡ ನಕಲಿ ದಾಖಲೆಗಳು ಜನ್ಮವೆತ್ತಲು ಶುರುವಾದವು.

ಬೋಗಸ್ ಡಾಕ್ಯುಮೆಂಟ್‌ಗಳು


2010ರಲ್ಲಿ ಮಠದ ಆಡಳಿತಾಧಿಕಾರಿಯಾಗಿದ್ದ ದಿವಾಕರ್ ಶಾಸ್ತ್ರಿ ಎಂಬಾತ ಬಿಡಿಎಗೆ ಒಂದು ಅರ್ಜಿ ಗುಜರಾಯಿಸಿ ಗಿರಿನಗರದ ವಿಶ್ವಭಾರತಿ ಹೌಸಿಂಗ್ ಲೇಔಟ್‌ನಲ್ಲಿರುವ ಮಠದ 2ಎ/1 ಸೈಟಿನ ಖಾತೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕಿದೆ, ಹಾಗಾಗಿ ಎನ್‌ಒಸಿ ಪತ್ರ ಕೊಡಿ ಅಂತ ಕೇಳಿದ್ದ. ಆ ಸೈಟನ್ನು 1985ರಲ್ಲೇ ವಿಶ್ವಭಾರತಿ ಸೊಸೈಟಿಯಿಂದ ಮಠ ಖರೀದಿಸಿತ್ತು ಎಂದಾತ ಉಲ್ಲೇಖಿಸಿದ್ದನಾದರು ಅದನ್ನು ಪುಷ್ಟೀಕರಿಸುವಂತಹ ಯಾವ ದಾಖಲೆಯನ್ನೂ ಲಗತ್ತಿಸಿರಲಿಲ್ಲ. ಬಿಡಿಎ ತಾನು ಕೊಟ್ಟ ಸೈಟುಗಳಿಗೆ ಸೇಲ್ ಡೀಡ್ ಮಾಡಿಕೊಡಬಹುದೇ ವಿನಾಃ ಎನ್‌ಒಸಿ ಕೊಡುವಂತಹ ಪರಂಪರೆಯೇ ಇಲ್ಲ. ಅಲ್ಲದೇ ಆ ಸೈಟನ್ನು ಮಠಕ್ಕೆ ಬಿಡಿಎ ನೇರವಾಗಿ ಅಲಾಟ್ ಮಾಡಿರಲಿಲ್ಲ. ಸಾಲದ್ದಕ್ಕೆ ಅದು ಸಿಎ ಸೈಟು. ಹಾಗೆಲ್ಲ ಮಠಕ್ಕೆ ಪರಭಾರೆ ಮಾಡುವಂತೆಯೂ ಇಲ್ಲ. ಇದನ್ನೆಲ್ಲ ಪರಿಶೀಲಿಸಿದ ಅಧಿಕಾರಿಗಳು ತಾವು ಹೀಗೆ ಬೇಕಾಬಿಟ್ಟಿ ಎನ್‌ಒಸಿ ನೀಡಲು ಬರುವುದಿಲ್ಲ ಅಂತ ಷರಾ ಬರೆದು ವಾಪಾಸ್ ಕಳಿಸಿದ್ದರು.

ಅಷ್ಟೊತ್ತಿಗಾಗಲೇ ಗಿರಿನಗರದಲ್ಲಿ ನಡೆಯುತ್ತಿದ್ದ ರಿಯಲ್ ಎಸ್ಟೇಟ್ ಬೆಲೆಗಳು ರಾಘವನ ಕಣ್ಣು ಕುಕ್ಕಲು ಶುರು ಮಾಡಿದ್ದವು. ಅಷ್ಟು ಸುಲಭಕ್ಕೆ ಆತ ಬಿಡುವುದಕ್ಕೆ ಸಿದ್ಧನಿರಲಿಲ್ಲ. ಆದೇ ದಿವಾಕರ್ ಶಾಸ್ತ್ರಿಯಿಂದ ಮತ್ತೊಂದು ಅರ್ಜಿ ಗುಜರಾಯಿ[illegible] ಆದರೆ ಈ ಬಾರಿ ಕೇವಲ ಅರ್ಜಿ ಮಾತ್ರವಲ್ಲದೇ 198[illegible] ಅಂದಿನ ಬಿಡಿಎ ಕಮೀಷನರ್, ವಿಶ್ವಭಾರತಿ ಸೊಸೈ[illegible] ಬರೆದಿದ್ದರು ಎನ್ನಲಾದ ಒಂದು ಬೋಗಸ್ ಪತ್ರವನ್ನು [illegible] ಅದಕ್ಕೆ ಪ್ರತಿಯಾಗಿ ಆ ಸೊಸೈಟಿ ಬಿಡಿಎ ಅಕೌಂಟಿಗೆ 5,46[illegible] ರೂಪಾಯಿಯನ್ನು ಡಿಪಾಸಿಟ್ ಮಾಡಿದ್ದೆನ್ನಲಾದ ವಿಜ[illegible] ಬ್ಯಾಂಕ್ ಚಲನ್‌ನ್ನೂ ಲಗತ್ತಿಸಿದ್ದರು. ಬಿಡಿಎ ಕಮೀಷ[illegible] ಬರೆದಿದ್ದೆನ್ನಲಾದ ಆ ಪತ್ರದಲ್ಲಿ 1/ಎ, 1/ಬಿ, 1/ಸಿ, 2/ಎ1 [illegible] ಎ2 ಸಂಖ್ಯೆಯ ನಿಮ್ಮ ಸಿಎ ಸೈಟುಗಳಿಗೆ ತಗು[illegible] ರೂ.5,46,552 ರೂಪಾಯಿಯನ್ನು ಮೂವತ್ತು ದಿ[illegible] ಒಳಗಾಗಿ ಪಾವತಿ ಮಾಡಿ ಎಂಬ ಒಕ್ಕಣೆಯಿದೆ. ಸಿ[illegible] ವ್ಯವಹಾರದ ಮಿನಿಮಮ್ ಕಾಮನ್‌ಸೆನ್ಸ್ ಇರುವ ಎಂ[illegible] ಕೂಡಾ ಆ ಪತ್ರವನ್ನು ನೋಡಿದ ಕೂಡಲೇ ಅದೊ[illegible] ಫ್ಯಾಬ್ರಿಕೇಟೆಡ್ ಡಾಕ್ಯುಮೆಂಟ್ ಎಂದು ಹೇಳಿಬಿಡು[illegible] ಯಾಕೆಂದ್ರೆ 1984ರಲ್ಲಿ ಜಾರಿಗೆ ಬಂದ ಬಿಡಿಎ ತಿದ್ದು[illegible] ಕಾಯ್ದೆ ಅಷ್ಟು ಸ್ಪಷ್ಟವಾಗಿ ಸಿಎ ಸೈಟುಗಳನ್ನು ಸಾರ್ವ[illegible] ಉಪಯೋಗಕ್ಕಲ್ಲದೆ ಬೇರೆ ಬಳಕೆಗೆ ಕೊಡಬಾರದು [illegible] ಉಲ್ಲೇಖಿಸಿದ್ದರೂ 1985ರಲ್ಲಿ ಪತ್ರ ಬರೆಯುವ ಕಮೀಷ[illegible] ರಾಜಾರೋಷವಾಗಿ ಸಿಎ ಸೈಟುಗಳಿಗೆ ಹಣ ಕಟ್ಟಿ ಎನ್ನುತ್ತಾರೆ[illegible] ಯಾರಾದರು ನಂಬಲು ಸಾಧ್ಯವೇ?

ಇನ್ನು ಆ ಪತ್ರದಲ್ಲಿ ಕಮೀಷನರ್ ಸಾಹೇಬರು ಆ ಮೊ[illegible] ಸ್ಪಷ್ಟವಾಗಿ ನಮೂದಿಸಿದ್ದಾರಾದರು ಆ ಮೊತ್ತವನ್ನು ಯ[illegible] ಆಧಾರದಲ್ಲಿ ಹೇಗೆ ನಿರ್ಧರಿಸಿದ್ದಾರೆಂಬುದನ್ನೇ ಉಲ್ಲೇಖಿ[illegible] ಸಾರಾಸಗಟು ಭಾಷೆಯಲ್ಲಿ ಸೈಟ್ ನಂಬರ್‌ಗಳನ್ನು [illegible] ಆರಂಕಿಯ ಮೊತ್ತ ಗೀಚಿರೋದು ಮತ್ತೊಂದು ಅನು[illegible] ಮೂಡಿಸುತ್ತೆ ಇವೆಲ್ಲಕ್ಕಿಂತ ಗಮನಾರ್ಹ ಸಂಗತಿಯೆಂದರೆ ಬಿ[illegible] ಆಯುಕ್ತರು ವಿಶ್ವಭಾರತಿ ಸೊಸೈಟಿಗೆ ಪತ್ರ ಬರೆಯುತ್ತಾರೆ[illegible] ಅದರ ಒಂದು ಕಡತ ಮತ್ತು ಮೂಲಪ್ರತಿ, ಚಲನ[illegible] ಅವರು ಹಣ ಪಾವತಿಸಿದ ತರುವಾಯ ಅದು ಸ್ವೀಕೃತಿಯ[illegible] ಬಗ್ಗೆ ಸೂಕ್ತ ಬಿಲ್‌ಗಳು ಬಿಡಿಎ ಬಳಿ ಇರಬೇಕಲ್ಲವೇ? ತಾನು ಗೀಚಿದ ಅರ್ಜಿಯಲ್ಲಿ ಸ್ಪಷ್ಟವಾಗಿ ಬಿಡಿಎ ಟಿಪಿ[illegible] 436/85-86 ಎಂಬ ಫೈಲ್ ನಂಬರನ್ನು ಉಲ್ಲೇಖಿ[illegible] ಆದ್ರೆ ತನಿಖೆಯ ವೇಳೆ ಆ ಕಡತವನ್ನು ಹಾಜರುಪ[illegible] ಅಂತ ಕೇಳಿದರೆ ಅವ್ಯಾವುವೂ ನಮ್ಮ ಬಳಿ ಇಲ್ಲ, [illegible] ಸೈಟ್‌ಗಳ ವಿಚಾರವಾಗಿ ಆ ಫೈಲ್ ಹೈಕೋರ್ಟ್[illegible] ಇದೆ ಎನ್ನುವ ಹಾರಿಕೆ ಉತ್ತರ ಬಿಡಿಎ ಅಧಿಕಾರಿಗ[illegible] ಲಿಖಿತ ರೂಪದಲ್ಲಿ ಹೊರಬಿದ್ದಿತ್ತು! ಕಡೇಪಕ್ಷ ಯ[illegible] ಕೇಸ್‌ನ ಕಾರಣಕ್ಕೆ ಆ ಕಡತ ನ್ಯಾಯಾಲಯದಲ್ಲಿದೆ[illegible] ಕೇಸ್ ನಂಬರ್ ಏನು ಎಂಬ ವಿವರವನ್ನೂ ಅ[illegible] ನಮೂದಿಸಿರಲಿಲ್ಲ!!


ಎನ್‌ಒಸಿ ಕೊಟ್ಟೇ ಬಿಟ್ಟರು

ಎರಡನೇ ಸಲ ಅರ್ಜಿ ಬಂದಾಗಲೂ ನಗರ ಯೋ[illegible]



This Document is issued Under "Right to Information Act 2005"

2010ರಲ್ಲಿ ಎನ್‌ಒಸಿ ಕೊಡಲು ನಿರಾಕರಿಸಿದ್ದ ಬಿಡಿಎ ಪತ್ರ



Annexure - 4

BANGALORE DEVELOPMENT AUTHORITY

No. [illegible] /85-86.

Road, Block XII
Kumarapark West Extension
Bangalore-560 020

Dated 6-4-1985

To

The President,
Vishwa Bharathi HBCS, Ltd.,
35, Rathna Vilas Road,
Basavanagudi,
Bangalore.560004.

This Document is issued Under "Right to Information Act 2005"


Sir,

Sub: Execution of the Relinquishment deed in respect of the I Phase of the VishwaBharathi Housing Complex Layout, GiriNagar, B'lore.85.

Ref: Your letter No.VHBCS/B10/84-85 dt.29.11.84.

You are hereby intimated to remit Rs.5,46,552/- (Rs.Five lakhs forty six thousand five hundred & fifty two only) towards the cost of the civic amenity site Nos.1/A, 1/B, & 1/C, 2/A1, 2/A2 which have been utilised by the society within thirty days from the date of receipt of this letter for taking further action in the matter.


ಮಠ ಹಾಜರುಪಡಿಸುತ್ತಿದ್ದ 1985ರ ಬಿಡಿಎ ಆಯುಕ್ತರ ಅನುಮಾನಸ್ಪದ ಪತ್ರ



ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

000015


ಮಠದ ನಿವೇಶನದಲ್ಲಿ ಅಕ್ರಮ ಕಂಡುಬಂದಿದ್ದು ತನಿಖೆ ನಡೆಸುವಂತೆ ಹಿಂದಿನ ಬಿಡಿಎ ಆಯುಕ್ತರ ಆದೇಶ


ಮಾಜಿ ಆಯುಕ್ತ ಶ್ಯಾಂಭಟ್

ವಿಭಾಗವು ಕಡತಗಳನ್ನು ಪರಿಶೀಲಿಸಿ, ಮಠವಿರುವ ಜಾಗವು ಸಿಎ ನಿವೇಶನವಾಗಿರೋದ್ರಿಂದ ವಿಶ್ವಭಾರತಿ ಸಂಘದವರು ಆ ನಿವೇಶನವನ್ನು ಮಠಕ್ಕೆ ಸಿಎ ನಿವೇಶನಗಳ ಹಂಚಿಕೆ ನಿಯಮಾವಳಿಯಂತೆ ಸರಿಯಾದ ಕ್ರಮದಲ್ಲಿ ವರ್ಗಾವಣೆ ಮಾಡಿದ್ದಾರೋ ಇಲ್ಲವೋ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿಲ್ಲವಾದ್ದರಿಂದ ಈ ಬಗ್ಗೆ ಕಾನೂನು ಅಧಿಕಾರಿಗಳ ಅಭಿಪ್ರಾಯ ಪಡೆದ ನಂತರ ಮುಂದುವರೆಯತಕ್ಕದ್ದು ಎಂಬ ಟಿಪ್ಪಣಿ ಬರೆದಿತ್ತು. ಆದರೆ ಅಷ್ಟೊತ್ತಿಗಾಗಲೇ ಬಿಡಿಎ ಅಧಿಕಾರಿಗಳಿಗೆ ರಾಘವನ ಟೀಮು ಪ್ರಸಾದವನ್ನು ತಲುಪಿಸಿಯಾಗಿತ್ತು. ಹಾಗಾಗಿ ಕಾನೂನು ಸಲಹೆಯ ಟಿಪ್ಪಣಿಯನ್ನು ಲೆಕ್ಕಿಸದ ಬಿಡಿಎ ಉಪಕಾರ್ಯದರ್ಶಿ 2011ರಲ್ಲಿ ಸಿಎ ಸೈಟುಗಳಿಗೆ ಎನ್‌ಒಸಿ ಕೊಟ್ಟೇ ಬಿಟ್ಟರು!

ಆ ಪತ್ರ ಕೈಸೇರಿದ್ದೇ ತಡ ಅದನ್ನು ಬಿಬಿಎಂಪಿ ಮುಂದೆ ಹಾಜರುಪಡಿಸಿದ ಮಠ ಖಾತಾ ರೆಜಿಸ್ಟರ್ ಮಾಡಿಸಿಕೊಂಡಿದ್ದಲ್ಲದೆ ಆ ಜಾಗದಲ್ಲಿ ಎರಡಂತಸ್ತಿನ ಕಟ್ಟಡ ನಿಲ್ಲಿಸಲು ಪ್ಲಾನ್ ಅಪ್ರೂವಲ್ ಕೂಡಾ ಗಿಟ್ಟಿಸಿಕೊಂಡಿತ್ತು. ತಡ ಮಾಡಿದರೆ ಎಲ್ಲಿ ಸೈಟು ಕೈಬಿಟ್ಟುಹೋಗುತ್ತೋ ಎನ್ನುವ ಧಾವಂತದಲ್ಲೇ ಬಿಲ್ಡಿಂಗ್ ನಿರ್ಮಾಣಕ್ಕೂ ರಾಘವನ ಟೀಮ್ ಕೈ ಹಾಕಿತ್ತು. ಆಗಲೇ ನೋಡಿ ಗಿರಿನಗರದ ನಿವಾಸಿಗಳಿಗೆ ರಾಮಚಂದ್ರಾಪುರದ ಮಠದ ಹಕೀಕತ್ತು ಸ್ಪಷ್ಟವಾಗಿ ಅರ್ಥವಾಗಲು ಶುರುವಾದದ್ದು. ಅಸಲಿಗೆ ಮಠದ ಕಟ್ಟಡವಿದ್ದುದ್ದೇ ಸಿಎ ಸೈಟಿನಲ್ಲಿ, ಅಂದ್ರೆ ಈಗಿನ ವಿವೇಕಾನಂದ ಪಾರ್ಕಿಗೆ ಸೇರಬೇಕಿದ್ದ ಜಾಗದಲ್ಲಿ, ಏನೋ ನಿಯಮಾವಳಿಯಂತೆ ಸರ್ಕಾರವೇ ಆ ಜಾಗವನ್ನು ಮಠಕ್ಕೆ ಬಿಟ್ಟುಕೊಟ್ಟಿರಬಹುದೆಂದು ಜನ ತೆಪ್ಪಗಿದ್ದರು. ಆದರೆ ಯಾವಾಗ ಪಕ್ಕದ ಪಾರ್ಕ್ ಜಾಗದಲ್ಲೂ ಮಠ ತನ್ನ ಬಂಗಲೆ ಎಬ್ಬಿಸಲು ಮುಂದಾಯ್ತೋ ಆಗ ಜನ ಸೈಟಿನ ಮೂಲ ಕೆದಕಲು ಮುಂದಾದರು. ಪವನ್ ಪ್ರಸಾದ್ ಎಂಬುವವರು ತುಸು ಮುತುವರ್ಜಿ ವಹಿಸಿ ಬಿಬಿಎಂಪಿ, ಬಿಡಿಎಗಳಿಗೆ ಆರ್‌ಟಿಐ ಅರ್ಜಿ ಬರೆದು ಸಂಗ್ರಹಿಸಿದ ದಾಖಲೆಗಳು ಮಠದ ಭೂಭಾನ್ಗಡಿಯನ್ನು ಬಿಚ್ಚಿಟ್ಟು ಶಾಕ್ ಕೊಟ್ಟಿದ್ದವು.

ಕೂಡಲೇ ಅವರು ಬಿಡಿಎ ಮತ್ತು ಬಿಎಂಟಿಎಫ್‌ಗೆ


ವಿವಾದಿತ ಲೇಔಟ್‌ನ ನಕ್ಷೆ

ಕಂಪ್ಲೆಂಟ್ ಬರೆದು ಮಠ ನಡೆಸಿರುವ ಅಕ್ರಮಕ್ಕೆ ಬ್ರೇಕ್ ಹಾಕುವಂತೆ ಅವಲತ್ತುಕೊಂಡಿದ್ದರು. ಆಗಿನ್ನು ಶ್ಯಾಂ ಭಟ್ಟರು ಬಿಡಿಎ ಆಯುಕ್ತರ ಹುದ್ದೆಯಲ್ಲಿದ್ದರು. ದಾಖಲೆಗಳನ್ನು ಪರಿಶೀಲಿಸಿದ ಅವರಿಗೂ ವ್ಯವಹಾರದಲ್ಲಿ ಅಕ್ರಮದ ವಾಸನೆ ಬಡಿದಿತ್ತು. ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಬಿಎಂಟಿಎಫ್ ತಂಡಕ್ಕೆ ಆದೇಶಿಸಿದ್ದರು. ಯಾವಾಗ ತಮ್ಮ ಸಂಸ್ಥೆಯಿಂದ ಎನ್‌ಒಸಿ ನೀಡಿದ್ದ ಜಾಗ ವಿವಾದಕ್ಕೀಡಾಯಿತೊ ಆಗ ಎಚ್ಚೆತ್ತುಕೊಂಡ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜಗೋಪಾಲ್ ಬಿಬಿಎಂಪಿಗೆ ಪತ್ರ ಬರೆದು ಸಿಎ ನಿವೇಶನ ಸಂಖ್ಯೆ 2/ಎ ತನಿಖೆಗೆ ತುತ್ತಾಗಿರೋದ್ರಿಂದ ಅಲ್ಲಿ ಕಟ್ಟಡ ನಿರ್ಮಿಸಲು ನೀಡಿದ್ದ ಪ್ಲಾ?ನಿಂಗ್ ಅಪ್ರೂವಲ್ಲನ್ನು ರದ್ದು ಮಾಡುವಂತೆ ತಿಳಿಸಿದ್ದರು. ಈ ಹಂತದಲ್ಲಿ ಬಿಬಿಎಂಪಿ ಒಂದು ಯಡವಟ್ಟು ಮಾಡಿಬಿಟ್ಟಿತು. ತಾನು ಕೊಟ್ಟಿದ್ದ ಪ್ಲಾ?ನ್ ಅನುಮೋದನೆಯನ್ನು ರದ್ದು ಮಾಡುವುದಕ್ಕು ಮುನ್ನ ಅದು ಪಾರ್ಟಿಗೆ ಒಂದು ನೋಟಿಸ್ ಕೊಡಬೇಕಿತ್ತು. ಆದರೆ ಆತುರಗೇಡಿ ಬಿಬಿಎಂಪಿ ಅಧಿಕಾರಿಗಳು ಹಾಗೆಮಾಡದೆ ಏಕಾಏಕಿ ಪ್ಲಾನ್ ರದ್ದು ಮಾಡಿದ ಆದೇಶವನ್ನು ಮಠಕ್ಕೆ ರವಾನಿಸಿದರು.


ಕಾದಿದೆ ಗ್ರಹಚಾರ

ಬಿಬಿಎಂಪಿ ಮಾಡಿದ ಆ ಒಂದು ಯಡವಟ್ಟೇ ರಾಘವನ ಪಟಾಲಮ್ಮಿಗೆ ಲೀಗಲ್ ಅಸ್ತ್ರವಾಯ್ತು. ತನಗೆ ನೋಟಿಸ್ ನೀಡದೆ ಏಕಾಏಕಿ ಪ್ಲಾನ್ ರದ್ದು ಮಾಡಿದ್ದರ ವಿರುದ್ಧ ರಾಘವನ ಪಟಾಲಮ್ಮು ನೇರ ಹೈಕೋರ್ಟ್ ಮೆಟ್ಟಿಲೇರಿತು. ವಿಚಾರಣೆ ನಡೆಸಿದ ಕೋರ್ಟ್ ಸಹ ನೋಟಿಸ್ ನೀಡದೆ ಪ್ಲಾನ್ ರದ್ದು ಮಾಡಿದ್ದು ತಪ್ಪೆಂದು ತೀರ್ಪಿತ್ತಿತ್ತಲ್ಲದೆ ಬಿಬಿಎಂಪಿಯ ಆದೇಶವನ್ನೇ ರದ್ದು ಮಾಡಿತು. ಇಲ್ಲಿ ನ್ಯಾಯಾಲಯ ಬಿಬಿಎಂಪಿ ಯಡವಟ್ಟನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಪು ನೀಡಿತ್ತೆ ವಿನಾಃ ಆ ಜಾಗದ ಕುರಿತು ಎದ್ದ ಅವ್ಯವಹಾರದ ವಿಚಾರಣೆಯನ್ನು ಅದು ಮಾಡಿರಲಿಲ್ಲ. ಹಾಗಾಗಿ ಬಿಬಿಎಂಪಿ ಆದೇಶವನ್ನು ರದ್ದು ಮಾಡಿ ಮಠದ ಪರವಾಗಿ ತೀರ್ಪು ಪ್ರಕಟಿಸಿದ್ದರೂ ಜಾಗದ ಅವ್ಯವಹಾರದ ಕುರಿತು ತನಿಖೆ ನಡೆಸಲು ಬಿಬಿಎಂಪಿ ಸ್ವತಂತ್ರವಾಗಿದೆ ಎಂಬ ಅಂಶವನ್ನೂ ಉಲ್ಲೇಖಿಸಿತ್ತು. ಆದರೆ ಅರ್ಧಸತ್ಯವನ್ನು ಮರೆಮಾಚಿದ ರಾಘವನ ಟೀಮು ನ್ಯಾಯಾಲಯ ತಮ್ಮ ಪರವಾಗೇ ತೀರ್ಪು ನೀಡಿರೋದ್ರಿಂದ ಸೈಟಿನ ಲೀಗಲ್ ಯಜಮಾನಿಕೆಯೂ ತನಗೆ ಸಿಕ್ಕಿಬಿಟ್ಟಿದೆ ಎಂದು ಪುಕಾರೆಬ್ಬಿಸಿತು.

ಇತ್ತ ಬಿಬಿಎಂಪಿ ಮತ್ತು ಬಿಡಿಎ ಅಧಿಕಾರಿಗಳನ್ನು ಪಳಗಿಸುವ ಕೆಲಸಕ್ಕೂ ಕೈಹಾಕಿತು. ಮಠದ ಪ್ರಸಾದಕ್ಕೆ ಕೃತಾರ್ಥರಾದ ಬಿಡಿಎ ಅಧಿಕಾರಿಗಳು ಇದ್ದ ದಾಖಲೆಗಳನ್ನೆಲ್ಲ ತಿರುಚಿ ನ್ಯಾಯಾಲಯದ ದಿಕ್ಕುತಪ್ಪಿಸಲು ಸಜ್ಜಾದರು. ಈ ಮೊದಲು 1985ರಲ್ಲಿ ಬಿಡಿಎ ಆಯುಕ್ತರು ವಿಶ್ವಭಾರತಿ ಸೊಸೈಟಿಗೆ ಬರೆದಿದ್ದ ಪತ್ರ ಹಾಜರುಪಡಿಸಿ ಎಂದು ಕೇಳಿದಾಗ ಅದು ತನ್ನ ಬಳಿ ಇಲ್ಲ ಎಂದಿದ್ದ ಬಿಡಿಎ ಅಧಿಕಾರಿಗಳು ಈಗ ನ್ಯಾಯಾಲಯದ ದಿಕ್ಕು ತಪ್ಪಿಸುವ ಸಲುವಾಗಿ ಮಠ ತನ್ನ ಅರ್ಜಿಯ ಜೊತೆ ಲಗತ್ತಿಸಿದ್ದ ಜೆರಾಕ್ಸ್ ಪ್ರತಿಯನ್ನೇ ತನ್ನ ಬಳಿಯಿರುವ ದಾಖಲೆ ಅಂತ ಹಾಜರುಪಡಿಸಿದ್ದಾರೆ. ಸರ್ಕಾರಿ ಅಧಿಕಾರಿಗಳ ಇದೆಲ್ಲಾ ಅಂಧಾದುಂಧಿಯನ್ನು ಕೋರ್ಟ್ ಗಮನಿಸುತ್ತಲೇ ಇದೆ. ಹಿಂದೆ ತನಿಖೆ ನಡೆಸಿದ್ದ ಬಿಬಿಎಂಪಿ ಆಯುಕ್ತರೇ ಸಿಎ ನಿವೇಶನದ ಹಂಚಿಕೆ ಮತ್ತು ಖಾತೆ ನೋಂದಾಯಿಸಲು ಎನ್‌ಒಸಿ ಕೊಟ್ಟದ್ದು ನಿಯಮಬದ್ಧವಾಗಿಲ್ಲ ಎಂದು ದಾಖಲೆಸಹಿತ ರುಜುವಾತು ಪಡಿಸಿರುವ ಕೇಸನ್ನೇ ಈಗ ರಾಘವನ ಟೀಮು ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಬುಡಮೇಲು ಮಾಡುವ ಭ್ರಮೆಯಲ್ಲಿದೆ. ಮಠದ ಭಾನ್ಗಡಿ ಸ್ಪಷ್ಟವಾಗಿ ಕಣ್ಣಿಗೆ ರಾಚುವಂತಹ ಬಲು ನಾಜೂಕಿನ ಕೇಸ್ ಇದು. ಕೊಂಚ ಎಚ್ಚೆತ್ತುಕೊಂಡು ವ್ಯವಹರಿಸದಿದ್ದರೆ ರೇಪಿಸ್ಟ್ ರಾಘವನ ಮಸಿ ಭೂಬಿತ್ತುವರಿ ತೆರವು ವಿಶೇಷ ಜಿಲ್ಲಾಧಿಕಾರಿ ಮುಖಕ್ಕೆ ಮೆತ್ತಿಕೊಂಡರೂ ಅಚ್ಚರಿಪಡಬೇಕಿಲ್ಲ. ಈಗಾಗಲೇ ಮಠದ ಆವರಣದಿಂದಲೇ ಅಂತ ಗಾಳಿಸುದ್ದಿಗಳು ತೇಲಿಬರುತ್ತಿವೆ. ರಾಘವನ ಜೊತೆಜೊತೆಗೆ ಆತನೊಟ್ಟಿಗೆ ಕೈಜೋಡಿಸಿದ ಸರ್ಕಾರಿ ಮಿಕಗಳಿಗೂ ಸದ್ಯದಲ್ಲೇ ಗ್ರಹಚಾರ ಕಾದಿರುವುದಂತೂ ಸುಳ್ಳಲ್ಲ...

■ ವರದಿಗಾರ

ಬಸವಧರ್ಮ ಮಾಡಿಕಳದು ಲಿಂಗಾಯತ್ರ ಹಕ್ಕು ಕಂಡ್ಳ


• ಬಿ.ಚಂದ್ರೇಗೌಡ
ಕಟ್ಟೆಪುರಾಣ

ಮಳೆಗಾಗಿ ಕಾದ ಮನಸ್ಸುಗಳು ಮಬ್ಬುಗೊಂಡಿದ್ದಾಗ, ಎಲ್ಲರ ಕಿವಿಗಳು ನೆಟ್ಟಗಾಗುವಂತಹ ಸುದ್ದಿಯನ್ನು ವಾಟಿಸ್ಸೆ ಹೊತ್ತು ತಂದ.

"ದ್ವಡಪ್ಪ ದ್ವಡಪ್ಪವ್."

"ಏನ್ಲ?"

"ಮ್ಯಾಟ್ರು ಗೊತ್ತಾಯ್ತೆ?"

"ಯಾವುದ್ಲ?"

"ಲಿಂಗಾಯುತ್ರು ಹಿಂದೂ ಧರ್ಮ ಬುಟ್ಟು ಹೋದರಂತೆ."

"ಎಲ್ಲಿಗೋದರೂ?"

"ಲಿಂಗಾಯತ ಧರ್ಮ ಮಾಡಿಕಂಡು ಹೋದರಂತೆ."

"ಅಸಿಸಿ, ಈಗಿದ್ದಿದ್ದೆ ಅದರೊಳಗಲವೇನ್ಲ?"

"ಇದ್ರು ಸರಿ ದೊಡಪ್ಪ ಆದ್ರೆ ಈ ಎಡೂರಪ್ಪನಂಥೋರ್ಯೆಲ್ಲ ಸೇರಿಕಂಡು ವಿಶ್ವಹಿಂದೂ ಪರಿಷತ್‌ಗೆ ಮತ್ತೆಯಿಟ್ಟುಬುಟ್ಟಿದ್ರು. ಅದೋಗ್ಲಿ, ಅವುರೇಳಿದಂಗೆ ಕೇಳಿಕಂಡು ಲಿಂಗಾಯತರ ಧರ್ಮನೆ ಮರತುಬುಟ್ಟಿದ್ರು. ಹಿಂಗೇ ಆದ್ರೆ ಬಸವಣ್ಣನ ಧರ್ಮ ಕರಿಗೋಯ್ತದೆ ಅಂತ ಹೆದರಿಕಂಡೋರ್ಯೆಲ್ಲ ಸೇರಿ ನಾವು ಬ್ಯಾರೆ ಹೋಯ್ತಿವಿ ಅಂತ ಕುಂತವುರೆ."

"ಈಗ ಚನ್ನಾಗ್ಯದೆ ಕಣಯ್ಯ ರಾಜಕಾರಣ" ಎಂದ ಉಗ್ರಿ.

"ಇದರಲ್ಯಂತ ರಾಜಕಾರಣವುಲ?"

"ನೋಡು ಮಾವ, ಈ ಸಿದ್ದರಾಮಯ್ಯ ಎಡೂರಪ್ಪನ್ನ ಲಿಂಗಾಯುತ್ರ ಆಚೆಗೋಡಸಂಗೆ ಮಾಡಿದ್ದನಂತೆ" ಎಂದ ಉಗ್ರಿ.

"ಆ ಜನಾಂಗದ ಲೀಡ್ರು, ಕಂಡ್ಳ ಅವುನು. ಆಚೆಗ್ಯಂಗಾಕ್ತರೆ?"


"ಹಾಕದೆಯಿದ್ರು ಅವ್ರುನೇ ಹೋಗಂಗಾಗ್ಯದೆ ದೊಡಪ್ಪ"

"ಅದ್ಯಂಗ್ಲ?"

"ಈಗ ಮದ್ಲಿಂದ ಲಿಂಗಾಯಿತ ಲೀಡ್ರು, ಸ್ವಾಮಿಗಳು ಇದ್ರು ಬ್ಯಾರೆ ಧರ್ಮ ಮಾಡಿಕತ್ತಿವಿ ಮಾನ್ಯತೆ ಕೊಡಿ ಅಂತಿದ್ರು. ಈಗ ಸಿದ್ದರಾಮಯ್ಯ ಆಯ್ತು ನಾನು ಶಿಫಾರಸ್ಸು ಮಾಡ್ತಿನಿ ಅಂದುಬುಟ್ಟವುನೆ. ಆ ಮಾತಿಗೆ ಎಡೂರಪ್ಪನ ತೊಳ್ಳೆ ನಡಿಗೋಗ್ಯದೆ."

"ಯಾಕೆ?"

"ಅವ್ರುನೀಗ ಬಿಜೆಪಿ ಲೀಡ್ರು. ಅಂದ್ರೆ ಆರ್‌ಎಸ್‌ಎಸ್ ಕೊಡ ಮಾನ್ಯತೆ ಕಡದಿರೊ ಲೀಡ್ರು. ಇಂತ ಟೈಮಲ್ಲಿ ಆರ್‌ಎಸ್‌ಎಸ್ ಲೀಡ್ರು ಅನ್ನದಾದೆ, ಲಿಂಗಾಯುತ್ರು ಬಿಡಬೇಕಾಯ್ತದೆ. ಇಲ್ಲ ನಾನು ಲಿಂಗಾಯುತ ಧರ್ಮದ ಲೀಡ್ರು ಅಂದ್ರೆ ಆರ್‌ಎಸ್‌ಎಸ್ ಬುಟ್ಟು ಮನೇಲಿರೊ ಚಡ್ಡಿ ಅಂಗಿ, ಲಾಠಿ ಯಸ್ದು ಬರಬೇಕಾಯ್ತದೆ. ಅಂಥದೊಂದು ಸ್ಥಿತಿ ತಂದು ಮಡಗಿದ್ದನಂತೆ ಈ ಸಿದ್ದರಾಮಯ್ಯ."



"ಸಿದ್ದರಾಮಯ್ಯನೂ ಪರವಾಗಿಲ್ಲ ಕಂಡ್ಳ. ವಳಗೇ ಮಾಡಿದ ಗಳಗೆ ಸಿದ್ಧ ಅಂತ ಏನೇನೊ ಮಾಡುತ್ನೆ ಅವುನೆ" ಎಂದು ಸೀರ ಸಿದ್ದರಾಮಯ್ಯನ ಕೆಲಸಗಳನ್ನೆಲ್ಲಾ ಹಗುರವಾಗಿ ಗ್ರಹಿಸಿ ನಕ್ಕ.

"ಚಿಗಪ್ಪ, ಇದು ರಿಲಿಜಿಯಸ್ ಮ್ಯಾಟ್ರು. ನಿನಿಗ್ಗೊತ್ತಾಗದಿಲ್ಲ, ಸುಮ್ಮನಿರು. ಲಿಂಗಾಯತ ಧರ್ಮದ ಬಗ್ಗೆ ನಿನಿಗೇನು ಗೊತ್ತು?" ಎಂದ ವಾಟಿಸ್ಸೆ.

"ಲಿಂಗಾಯಿತ್ರ ನನಿಗ್ಗೊತ್ತಿಲವೇನ್ಲ, ಅವುರು ನಮ್ಮಂಗೆ ಮನಸ್ರು. ನಮ್ಮಂಗೆ ಉಣ್ತರೆ, ತಿಂತರೆ, ಯವಸಾಯ ಮಾಡ್ತರೆ. ದನ, ಆಡು, ಕುರಿ ಸಾಕ್ಯವುರೆ. ಸಂತೆ ಬಂಗ ಮಾಡ್ತರೆ. ಅದರೊಳಗೆಂತೆದಪ್ಪ ಲಿಂಗಾಯತ ಧರ್ಮ" ಎಂದ ಸೀರ.

"ನಮ್ಮೂರಲ್ಲಿರೊ ಐದೊಕ್ಲು ಲಿಂಗಾಯತರ ನೋಡಿ ಮಾತಾಡಬ್ಯಾಡ. ಇವ್ರುಗ್ಯಲ್ಲ ನಿನ್ನಂಗಿರೋರೆಯ. ಆದ್ರೆ ಬಸವಣ್ಣ ಬದುಕಿದ್ದ ನೋಡು ಅಲ್ಲಿಗೋದ್ರೆ ನಿನಿಗೆ ಲಿಂಗಾಯತ ಧರ್ಮ ಅಂದ್ರೇನು ಅನ್ನದು ಗೊತ್ತಾಯ್ತದೆ. ಅವುರದೆ ಆದ ಊಟ ಆದೆ. ಅಂದ್ರೆ ವೆಜಿಟೇರಿಯನ್ ಮೀಲ್ಸ್. ಮದುವೆ, ಹಬ್ಬ, ನಡುವಳಿಕೆ, ಮಡಿಸ ಸಾಯಿತ್ಯ, ಶವಸಂಸ್ಕಾರ, ತಿಥಿ ಇವುಸ್ಯಲ್ಲ ಒಂದು ಕಡಿಕೆ ಮಡಗಿ ನೋಡಿದ್ರೆ ಲಿಂಗಾಯುತ ಧರ್ಮ ಏನು ಅನ್ನದು ಗೊತ್ತಾಯ್ತದೆ. ಈ ಬ್ರಾಂಬ್ರು ಧರ್ಮ ಯಾವುದು ಅನ್ನದೂ ತಿಳಿತದೆ. ಜನಾಂಗದ ರಾಜಕಾರಣಿಗಳು ಬಿಜೆಪಿ ಸವಾಸ ಮಾಡೀ ಬಸವಧರ್ಮ ಬಡಕಲಾಗೀ, ಪೇಜಾವರನ ಧರ್ಮ ಬ್ಯಳೆತಾ ಆದೆ ಅಂತ ಬ್ಯಾರೆ ವಂಟಿವುರೆ."

"ಎಲ್ಲೆ ಹೋದ್ರು ತಪ್ಪಿಸಿಗಳಕ್ಯಾಗದಿಲ್ಲ ಕಂಡ್ಳ" ಎಂದ ಕಾಳಮಾವ.

"ಆಗದಿಲ್ಲ ಗೊತ್ತು ದೊಡಪ್ಪ, ಈಗ ಶ್ರವಣಬೆಳಗೊಳದ ಮಸ್ತಕಾಭಿಶೇಕವ ಬರೀ ಜ್ಯೆನರೆ ಮಾಡ್ಯರೆ. ನಾವ್ಯಲ್ಲ ಸೇರೆ ಮಾಡ್ತಿವಿ. ಅಂಗೆ ಲಿಂಗಾಯಿತ್ರ ಬ್ಯಾರೆ ಹೋದ್ರು ಬಸವಣ್ಣ ಜಯಂತಿ ಮಾಡೋರು ನಾವೆಯ. ಆದ್ರು ಅದೊಂದು ಧರ್ಮ ಇರಬೇಕು. ಇಲ್ಲ ಅಂದ್ರೆ ಅವು ಜಾತಿಯಾಗಿ ಬದುಕಬೇಕಾಯ್ತದೆ."

"ಲಿಂಗಾಯುತ್ರ ಬ್ಯಾರೆ ಹೋದ್ರೆ ನಾಳೆ ಒಕ್ಕಲಿಗರೂ, ಕುರುಬ್ರು ಹೋಯ್ತಿವಿ ಅಂದ್ರೇನು ಮಾಡ್ತಿರೀ ಅಂದವುನಲ್ಲ ಕುಮಾರಣ್ಣ ಇದಕೇನೇಳ್ತಿಲ" ಎಂದ ಸೀರ.

"ಆ ಕುಮಾರಸ್ವಾಮಿ ತಲಿಗೆ ಇಂತ ಯೋಚನೆನೆ ಚಿಗಪ್ಪ ಹ್ವಳಿಯದು. ಅವುನಿಗೆ ಜಾತಿಗೂ ಧರ್ಮಕ್ಕೂ ಯೆತ್ಯಾಸನೆ ಗೊತ್ತಿಲ್ಲ, ಕುಟುಂಬದ ವಿಷಯ ಗೊತ್ತಷ್ಟೆ. ಅವುನ ಮಾತ ನೀನು ಸೀರಿಯಸ್ಸಾಗಿ ತಗತಿ."

"ಅವುನೇಳಿದ್ರುಲ್ಲು ನಿಜದೆ ಕಂಡ್ಳ."

"ಅಂದ್ರೆ ಒಕ್ಕಲಿಗರು ಜಾತಿ ಬುಟ್ಟು ಧರ್ಮ ಕೇಳ್ತರೆ ಅಂತಿಯಾ?"

"ಲಿಂಗಾಯುತ್ರ ಕೇಳದಾದ್ರೆ, ನಾವ್ಯಾಕ ಕೇಳಬಾರ್ದು?"

"ಲಿಂಗಾಯುತ್ರ ಕೇಳಕ್ಕೆ ಹಕ್ಕದೆ ಕಣ ಚಿಗಪ್ಪ, ಎಂಟುನೂರು ವರ್ಷದ ಹಿಂದೆ ಬಂದು ಬಸವಣ್ಣ, ಹಿಂದೂ ಭೂಮಿ ಬುಟ್ಟು ಬಗರ್ ಹುಕುಂ ಸಾಗುವಳಿ ಮಾಡಿ ಹೋಗ್ಯವನೆ. ಅವ ಖಾತೆ ಮಾಡಿಕೊಡಿ ಅಂತ ಈಗಿನೋರು ಕೇಳ್ತ ಕುಂತವುರೆ. ಅಂತೆದು ನಮಿಗೆಲ್ಲಿದ್ದತೂ" ಎಂದ ವಾಟಿಸ್ಸೆ.

"ಕುಯೆಂಪು ಹಿಡಕಂಡು ನಾವು ಕೇಳಬವುದೇನಪ್ಪ" ಎಂದು ಉಗ್ರಿ ನಕ್ಕ.

"ಕುವೆಂಪು ಹಿಡಕಳಕ್ಕೆ ಅವುರು ಸಿಕ್ಕದರತಾನೆಯ?"

"ಅದ್ಯಾಕ್ ಸಿಕದಿಲವುಲ?"

"ಯಲ್ಲ ವಿಶ್ವ ಮಾನವರಾಗಿ ಅಂದವ್ರುರೆ, ನೀವು ನೋಡಿದ್ರೆ ಇನ್ನೂ ನಿಮ್ಮ ಕೇರಿನೆ ಬುಟ್ಟು ಈಚೆಗೆ ಬಂದಿಲ್ಲ. ಏನು ಚಿಗಪ್ಪ ನೂರು ದೇವರನೆಲ್ಲಾ ನೂಕಾಚೆ ದೂರ ಅಂದವುರೆ. ಅವುರ ಮಾತಿನಂಗೆ ನೀನು ನ್ಯಡಕಳದೆ ಆದ್ರೆ ಮದ್ಲು ಈ ದೊಡ್ಡಮ್ಮ, ಹರಿನಮ್ಮ, ಕುಂಟಬೋರಪ್ಪ ಕ್ಯಾಂಚರಾಯ, ಹುನ್ನಿ ಕಲ್ಲಪ್ಪ... ಈ ಮನಿಯಾಳ ದೇವರನ್ಯಲ್ಲ ಊರಾಚೆಗೆ ಕಳಸಬೇಕು."

"ಅದ್ಯಾಕ್ಲ ಆ ದೇವರನ್ಯಲ್ಲ ಬ್ಯೆತಿ" ಎಂದಳು ಜುಮ್ಮಿ.

"ನೋಡು ದೇವರ ಬೋದಾಗ ನಮ್ಮಕ್ಕ ಬಾಯಿ ಬುಟ್ಲು. ಅವುಳಿಗೆ ಜಾತಿ ಧರ್ಮ ಆಗಲೇಯಿಲ್ಲ ಅಲವೇನಕ್ಕ."

"ಅದ್ಯಾವ ಸೂಳೆ ಮಗ ಮಾಡಿದುನ್ಲ ಹಾಳು ಜಾತಿಯ."

"ಅದಪ್ಪ ಮಾತು, ನಿಜಕ್ಕು ವಿಶ್ವ ಮಾನವರು ಆಡೊ ಮಾತಿದು. ಅಂತೂ ನಮ್ಮಕ್ಕನಿಗೆ ಇಷ್ಟು ದಿನಕಾರ ಜಾತಿಯಿಂದ ತೊಂದ್ರೆ ಆಗ್ಯದೆ ಅಂತ ಗೊತ್ತಾಯ್ತು. ಏನಾದ್ರು ಪರಸೋನಲ್ ಪ್ರಾಬ್ಲಂ ಆಗ್ಯದೇನಕ್ಕ? ಕಮಾನ್ ಟೆಲ್ ಮಿ."

"ಆಗ್ದಲೆ ಅಂತ ಮಾತಂದಳೇನೊ" ಎಂದ ಉಗ್ರಿ.

"ಏನಕ್ಕ ನಿನ್ನ ಪ್ರಾಬ್ಲಮ್ಮು?"

"ಏನು ಇಲ್ಲ ಕಣೊ. ಮಗಳು ಬ್ಯಾರೆ ಜಾತಿ ಹುಡುಗನ್ನ ಲವ್ವು ಮಾಡ್ಯವುಳೆ. ಆ ಹುಡುಗ ಚನ್ನಾಗ್ಯವುನೆ. ಇಂಥೋನು ನಮ್ಮ ಜಾತಿ ಆಗಿದ್ರೆ ಎಷ್ಟು ಚನ್ನಾಗಿತ್ತು, ಅದ್ಯಾವ ಮುಂಡೆ ಮಗ ಈ ಜಾತಿ ಮಾಡಿದೋನು ಅಂತ ಅಗ್ನಿಂದ ಸಿಟ್ಯಾಗ್ಯವುಳೆ."

"ಹೆದರಬ್ಯಾಡ ಕಣಕ್ಕ, ಇನ್ನೇನು ಕೆಲವೇ ದಿವಸದಲ್ಲಿ ಲಿಂಗಾಯತ ಧರ್ಮ ಬತ್ತದೆ. ಆಗ ಇಬ್ರಿಗೂ ಲಿಂಗ ಕಟ್ಟಿ, ಆ ಧರ್ಮಕ್ಕೆ ಸೇರಿಸಿಬುಡನ. ಬೆನಿಫಿಟ್ ಸಿಗದಾದ್ರೆ ನಾವ್ರೂ ಹೋಗನ." ■

"?!"

ಹಳಿಯಾಳ: ಮರಾಠರ ಮೀಸಲಾತಿ ರಾಜಕೀಯಕ್ಕೆ ದಿಕ್ಕೆಟ್ಟ ದೇಶಪಾಂಡೆ


ಸುನಿಲ್ ಹೆಗಡೆ

ಹಳಿಯಾಳದ ಮುದಿ ಹುಲಿ ರಘುನಾಥ ವಿಶ್ವನಾಥರಾವ್ ದೇಶಪಾಂಡೆ ಬೆಚ್ಚಿಬಿದ್ದಿದ್ದಾರೆ! ಎಲ್ಲವನ್ನು ರಾಜಕೀಯದ ಲಾಭ-ನಷ್ಟದ ತಕ್ಕಡಿಯಲ್ಲಿಟ್ಟು ತೂಗಿ ನೋಡುವ ಜಾಯಮಾನದ ಈ ಕೊಂಕಣಿ ವರ್ತಕ ವಂಶದ ಕುಡಿ ತಾನು ಗಣಪತಿ ಮಾಡಲು ಹೋಗಿ ಅವನಪ್ಪ ಈಶ್ವರನನ್ನು ತಯಾರು ಮಾಡಿದೆನಾ ಎಂಬ ಕನ್‌ಫ್ಯೂಸನ್‌ಗೆ ಬಿದ್ದಿದ್ದಾರೆ. ಹಳಿಯಾಳ-ಜೋಯಿಡಾ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು-ಕಮ್ಮಿ ಮುಕ್ಕಾಲು ಪಾಲಿನಷ್ಟಿರುವ ಮರಾಠ ಮತದಾರರಿಗೆ ತನ್ನ ಬಗ್ಗೆಗಿರುವ ತಾತ್ಸಾರ-ತಿರಸ್ಕಾರ ತಹಬಂದಿಗೆ ತರಲು ಆ ಸಮುದಾಯದ ಒಳಗೇ 'ಜಾತಿ ಜಾಗೃತಿ' ಆಟ ಆರಂಭಿಸಿದ್ದ ದೇಶಪಾಂಡೆಗೆ ಈಗದೇ ಭೂಮ್‌ರಾಂಗ್ ಆಗಿದೆ.

1983 ರಲ್ಲಿ ರಾಮಕೃಷ್ಣ ಹೆಗಡೆಜೀ ಕೃಪೆಯಿಂದ ಅಧಿಕಾರ ರಾಜಕಾರಣ ಶುರು ಹಚ್ಚಿಕೊಂಡ ದೇಶಪಾಂಡೆ ಆ ನಂತರದ ಮೂರು ದಶಕದಲ್ಲಿ ಒಂದು ಬಾರಿ ಮಾತ್ರ ಸೋತಿದ್ದಾರೆ. 2008 ರಲ್ಲಿ ದೇಶಪಾಂಡೆ ತಾನೇ ಸಾಕಿ ಬೆಳೆಸಿದ ಜಾತ್ಯಸ್ಥ ಕೊಂಕಣಿ ಪೋರ ಸುನಿಲ್ ಹೆಗಡೆಗೆ ಶರಣಾಗಿದ್ದರು. ಅಂದರೆ ಹಳಿಯಾಳ ಕಾಂಗ್ರೆಸ್ ಶಾಸಕನಾಗಿದ್ದ ಮರಾಠರ ಘಾಡಿ ಮಾಸ್ತರ್ ನಂತರ ಸತತವಾಗಿ ತೀರಾ ಸಣ್ಣ ಜಾತಿಯಾದ ಜಿಎಸ್‌ಬಿ (ಕೊಂಕಣಿ) ಪುಢಾರಿಗಳ ಪಾರುಪತ್ಯಕ್ಕೆ ಸಿಲುಕುತ್ತಲೇ ಬಂದಿದೆ. ಬಹುಸಂಖ್ಯಾತ ಮರಾಠರ ಬಡತನ, ಅಸಂಘಟನೆ, ಅಮಾಯಕತೆಯನ್ನು ಈ ದೋಷಪಾಂಡೆ ಮತ್ತು ಸೋಗಲಾಡಿ ಸುನಿಲ್ ಹೆಗಡೆ ವ್ಯವಸ್ಥಿತವಾಗಿ ಬಳಸಿಕೊಂಡು ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ತಾವು ಒಂದಾಗದಂತೆ ಒಡೆದಾಳಿ ಅಧಿಕಾರ ಕಾಣುತ್ತಿರುವ ಸಮಯಸಾಧಕ ದೇಶಪಾಂಡೆ-ಹೆಗಡೆಗಳ ಹಿಕಮತ್ತು ಈಗೀಗ ಮರಾಠರ ಯುವಪೀಳಿಗೆಗೆ ಅರ್ಥವಾಗತೊಡಗಿದೆ. ಮರಾಠರಲ್ಲಿ ಮೂಡಿರುವ ಜಾಗೃತಿಗೆ ದೇಶಪಾಂಡೆ-ಹೆಗಡೆ ಕಂಗಾಲಾಗಿ ಹೋಗಿದ್ದಾರೆ.


ಎಲ್. ಘೋಟನೇಕರ್

ಸದ್ದುಗದ್ದಲ ಇಲ್ಲದೆ ಸಂಘಟಿತರಾದ ಮರಾಠರು ಕಳೆದ ಜನವರಿಯಲ್ಲಿ ತಮ್ಮ 'ಮೌನಕ್ರಾಂತಿ'ಯ ವಿರಾಟ್ ದರ್ಶನ ನೀಡಿದ್ದರು. ತಮ್ಮನ್ನು ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ 2A ಗುಂಪಿಗೆ ಸೇರಿಸಬೇಕೆಂದು ಒತ್ತಾಯಿಸಿ ರ್‍ಯಾಲಿ ನಡೆಸಿದ್ದ ಮರಾಠರ ಸಂಘಟನಾ ಸಾಗರ ಇತಿಹಾಸವನ್ನೇ ಬರೆದುಬಿಟ್ಟಿದೆ. ಅಂದು ಕೇಸರಿ ಬಾವುಟ-ಶಿವಾಜಿ ಭಾವಚಿತ್ರ ಹಿಡಿದು ಬೀದಿಗೆ ಬಂದಿದ್ದ ಮರಾಠರು ತಮ್ಮನ್ನು ನಿರಂತರವಾಗಿ ಶೋಷಿಸಿ ಅಧಿಕಾರ ಗದ್ದುಗೆಯಲ್ಲಿ ಮೆರೆಯುತ್ತ ಬಂದಿರುವ ದೇಶಪಾಂಡೆ-ಹೆಗಡೆಗೆ ಪರೋಕ್ಷ ಎಚ್ಚರಿಕೆ ಸಂದೇಶ ರವಾನಿಸಿದ್ದರು. ಈಗ 3B ವರ್ಗದಲ್ಲಿರುವ ಮರಾಠರು 2A ರಾಜಕೀಯ ಹೋರಾಟ ಆರಂಭಿಸಿರುವ ಒಳ ಉದ್ದೇಶ ರಾಜಕೀಯ ಅಧಿಕಾರ ಎಂಬುದೀಗ ಬಹಿರಂಗ ಗುಟ್ಟು!


ಹಳಿಯಾಳದ ಮಟ್ಟಿಗೆ ಕೊಂಕಣಿ ಜಾತಿ ಸೂಕ್ಷ್ಮದರ್ಶಕದಲ್ಲಿ ಇಟ್ಟು ನೋಡಬೇಕಾದಷ್ಟು ಸಣ್ಣ ಸಮುದಾಯ. ಆದರೆ ಈ ಜಾತಿಯ ಬೆರಕಿ ಪುಢಾರಿಗಳಾದ ದೇಶಪಾಂಡೆ ಸುನಿಲ್ ಹೆಗಡೆ-ವಿ.ಡಿ. ಹೆಗಡೆ ಬಹುಸಂಖ್ಯಾತ ಮರಾಠರ ಮೇಲೆ ರಾಜಕೀಯ ಸವಾರಿ ನಡೆಸಿದ್ದಾರೆ. ಮಗನನ್ನು ಕೆನರಾ ಕ್ಷೇತ್ರದಿಂದ ಲೋಕಸಭಾ ಎಲೆಕ್ಷನ್‌ಗೆ ನಿಲ್ಲಿಸಿ ಮುಖಭಂಗಿತನಾಗಿರುವ ದೇಶಪಾಂಡೆ ಹಳಿಯಾಳವನ್ನು ವಂಶಪಾರಂಪರ್ಯದ ಜಹಗೀರು ಮಾಡಿಕೊಳ್ಳುವ ತಂತ್ರಗಾರಿಕೆಯಲ್ಲಿದ್ದಾರೆ. ಇದು ಸಹಜವಾಗೇ ಮರಾಠರಲ್ಲಿ ಸ್ವಾಭಿಮಾನ ಕೆರಳಿಸಿದೆ. ಜನವರಿಯ ಮೌನಕ್ರಾಂತಿ ಹೋರಾಟದಿಂದ ಉತ್ಸಾಹಿತರಾಗಿರುವ ಮರಾಠರು ಹಳ್ಳಿ-ಹಳ್ಳಿಗಳಲ್ಲಿ ಸಂಘಟನಾ ಸಭೆ, ಬೈಠಕ್ ಮಾಡುತ್ತಿದ್ದಾರೆ. ಈ ಜಾತಿ ಜಾಗೃತಿ ಮರಾಠರಲ್ಲಿ ದೊಡ್ಡ ಮಟ್ಟದ ಪರಿವರ್ತನೆ ತಂದಿದೆ. ಒಬ್ಬರ ಮುಸುಡಿ ಕಂಡರೆ ಮತ್ತೊಬ್ಬನಿಗೆ ಆಗದ ಮರಾಠ ನಾಯಕರೀಗ ಈಗೋ ಬಿಟ್ಟು ಒಂದೆಡೆ ಸೇರುತ್ತಿದ್ದಾರೆ. ತಮ್ಮ ಸಮುದಾಯದಲ್ಲಿ ರಾಜಕೀಯ ಎಚ್ಚರಿಕೆ ಮೂಡಿಸುತ್ತಿದ್ದಾರೆ.

ಆರಂಭದಲ್ಲಿ 2A ಮೀಸಲಾತಿ ನೆಪದಲ್ಲಿ ಶುರುವಾದ ಮರಾಠ ಸಂಘಟನೆ ಈಗ ರಾಜಕೀಯ ಬಿರುಗಾಳಿಯಾಗಿ ಮಾರ್ಪಡುತ್ತಿದೆ! ಅಮ್ಚಾ ಪೌನಾ, ಅಮ್ಚಾ ಮಾನುಸ್, ಮರಾಠ ಮಾನುಸ್ (ನಮ್ಮ ನೆಂಟ, ನಮ್ಮ ಮನುಷ್ಯ, ಮರಾಠ ಮನುಷ್ಯ) ಎಂಬ ಭಾವನಾತ್ಮಕ ಕೆಚ್ಚು ಕೆರಳಿಸಲಾಗುತ್ತಿದೆ. ಮರಾಠರ ಯುವ ಸಂಘಟನೆ ಬಲಗೊಳಿಸಲಾಗುತ್ತಿದೆ. ಹಳ್ಳಿಗಳಿಗೆ ಮರಾಠ ಮುಖಂಡರು ಹೋಗಿ ಮರಾಠರಲ್ಲಿ ಮೂಡಿರುವ ಸ್ವಾಭಿಮಾನಕ್ಕೆ ರಾಜಕೀಯ ಪ್ರಜ್ಞೆಯ ಸ್ವರೂಪ ನೀಡಲು ನೋಡುತ್ತಿದ್ದಾರೆ. ದಿನವೂ ಸಂಜೆ ಹಳ್ಳಿಗಳಲ್ಲಿ ಮರಾಠರು ಒಂದಾಗಿ ಸಭೆ-ಚರ್ಚೆ ನಡೆಸುತ್ತಿದ್ದಾರೆ. ಈಗ ಮರಾಠರ ಸಾಮಾನ್ಯ ಜನರೇ ಒಗ್ಗಟ್ಟಾಗಿ ತಮ್ಮ ಸಮುದಾಯದ ವಿವಿಧ ಪಕ್ಷದಲ್ಲಿರುವ ಮುಂದಾಳುಗಳು ಅಸೂಯೆ, ಪೂರ್ವಾಗ್ರ, ಅಹಂ ಬಿಟ್ಟು ಸಮಾಜದ ಬ್ಯಾನರಿನಡಿ ಒಂದಾಗುವಂತೆ ಒತ್ತಡ ಹಾಕುತ್ತಿದ್ದಾರೆ. ಮರಾಠ ಜಾತಿಯ ಕೊನೆಯ ಮಾನುಸ್ ರಾಜಕೀಯ-ಸಾಮಾಜಿಕ ಬದಲಾವಣೆಗಾಗಿ ತಮ್ಮ ಮುಖಂಡರ ಅಣಿಗೊಳಿಸುತ್ತಿರುವುದು ಸಹಜವಾಗೇ ಪಟ್ಟಭದ್ರ ದೋಷಪಾಂಡೆ, ಆತನ ಮಾಜಿ ಶಿಷ್ಯನೂ ಹಾಲಿ ಎದುರಾಳಿಯೂ ಆಗಿರುವ ಸುನಿಲ್ ಹೆಗಡೆ ತಂಡದ ನಿದ್ದೆಗೆಡಿಸುತ್ತಿದೆ!


2018 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಹಳಿಯಾಳದ ಶಾಸಕ ಮರಾಠ ಮಾನುಸ್ ಆಗಬೇಕೆಂಬ ಹಠ ಮರಾಠರದು. ಅದೇ ಪಡಪೋಸಿ ದೋಷಪಾಂಡೆ, ವಿ.ಡಿ. ಹೆಗಡೆ, ಸುನಿಲ್ ಹೆಗಡೆಗಳ ನೋಡಿ-ನೋಡಿ ಹಳಿಯಾಳಿಗರಿಗೆ ಜಿಗುಪ್ಸೆ ಮೂಡಿಬಿಟ್ಟಿದೆ. ಹಿಂದೆಯೂ ಮರಾಠ ಮನುಷ್ಯ ಶಾಸಕನಾಗಬೇಕೆಂಬ ಒಳತುಡಿತ ಮರಾಠರಲ್ಲಿ ಬಂದಿದ್ದೂ ಇದೆ. ಆದರದು ದೇಶಪಾಂಡೆ ಸಾಮ-ಭೇದ-ದಂಡ ಷಡ್ಯಂತ್ರದ ಎದುರು ವಿಫಲ ಪ್ರಯತ್ನವಾಗಿತ್ತು. ಬೂಟಾಟಿಕೆಯ ಸುನಿಲ್ ಹೆಗಡೆಯೂ ದೇಶಪಾಂಡೆ ಭೂತ ತೋರಿಸಿ ಮರಾಠರು ಒಂದಾಗದಂತೆ ನೋಡಿಕೊಂಡಿದ್ದ. ಎಸ್.ಕೆ. ಗೌಡ, ಉಡಚಪ್ಪ ಬೋಬಾಟೆ, ಬಸ್ಣಾ ಪಟ್ಟೇಗಾರ್, ವೀರೇಂದ್ರ ಜಾಧವ ಜಾತಿ ಬಲವಿದ್ದೂ ಗೆಲ್ಲಲಾಗದೇ ಹೋದರು. ಇದಕ್ಕೆ ಮುಖ್ಯಕಾರಣ ಎಲೆಕ್ಷನ್ ಹೊತ್ತಲ್ಲಿ ದೇಶಪಾಂಡೆ-ಸುನಿಲ್ ಹೆಗಡೆಗಳ ವ್ಯಾಪಾರಿ ತಂತ್ರಗಳು ಪ್ರಬಲ ಮರಾಠರನ್ನು ಒಡೆದು ಚದುರಿಸಿದ್ದೇ ಆಗಿತ್ತು. ಆದರೆ ಈ ಬಾರಿ ಮರಾಠರಲ್ಲಿ ಮೂಡಿರುವ ರಾಜಕೀಯ ರೊಚ್ಚು ಮೊದಲಿನದ್ದಕ್ಕಿಂತ ಭಿನ್ನವೆಂದೇ ವ್ಯಾಖ್ಯಾನಿಸಲಾಗುತ್ತಿದೆ.

ಕಳೆದೊಂದು ವರ್ಷದಲ್ಲಿ ಎರಡೆರಡು ಸಮಾವೇಶ, ಪ್ರತಿಭಟನಾ ರ್‍ಯಾಲಿ ನಡೆಸಿರುವ ಮರಾಠರು ತಮ್ಮ ಬಲ-ಪ್ರಾಮುಖ್ಯತೆ ಎರಡನ್ನೂ ತೋರಿಸಿಕೊಂಡಿದ್ದಾರೆ. ಚುನಾವಣೆ ಕಾಲದಲ್ಲಿ ತೋಳ್ಬಲ, ಹಣ ಬಲದಿಂದ ತಮ್ಮ ಸಮುದಾಯವನ್ನು ಬಳಸಿಕೊಳ್ಳುವುದು ಮೊದಲಿನಷ್ಟು ಸಲೀಸಲ್ಲ ಎಂಬುದನ್ನು ಮರಾಠೇತರ ರಾಜಕಾರಣಿಗಳಿಗೆ ಪರೋಕ್ಷವಾಗಿ ಸ್ಪಷ್ಟಪಡಿಸಿದ್ದಾರೆ. ಆದರೆ ಮರಾಠರಿಗೆ ಸಮರ್ಥ ನಾಯಕನ್ಯಾರು ಎಂಬುದೇ ದೊಡ್ಡ ಪ್ರಶ್ನೆಯಾಗಿದೆ. ಹಾಗೆ ನೋಡಿದರೆ ಈಗ ಪ್ರಬಲವಾಗಿರುವ ಮರಾಠ ಸಂಘಟನೆಗೆ ಬೀಜ ಹಾಕಿದ್ದು ಎಮ್ಮೆಲ್ಸಿ ಎಸ್.ಎಲ್. ಘೋಟನೇಕರ್. ಗುರು ದೋಷಪಾಂಡೆಗೆ ಬ್ಲ್ಯಾಕ್‌ಮೇಲ್ ಮಾಡಲೆಂದು ಕಟ್ಟಿದ ಮರಾಠ ಸಂಘಟನೆ ಈಗ ಆತನ ಹಿಡಿತ ತಪ್ಪಿಹೋಗಿದೆ! ಎರಡನೇ ಬಾರಿ ತನಗೆ ದೇಶಪಾಂಡೆ ಉತ್ತರ ಕನ್ನಡದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಎಮ್ಮೆಲ್ಸಿ ಆಗಲು ಅವಕಾಶ ಕೊಡದಿದ್ದರೆ ಮರಾಠ ಬಲ ತೋರಿಸಿ ಹೆದರಿಸುವ ಉದ್ದೇಶ ಆತನದಾಗಿತ್ತು. ಆದರಲ್ಲಿ ಆತ ಯಶಸ್ವಿಯೂ ಆಗಿಬಿಟ್ಟ. ಜಾತಿಬಲವಿಲ್ಲದೆ ದೇಶಪಾಂಡೆ ಒಮ್ಮೆ ಸೋತು ಭೀತಿಗೆ ಬಿದ್ದಿದ್ದಾರೆ. ಇಂಥ ಸಂಕಷ್ಟದ ಸಮಯದಲ್ಲಿ ಬಹುಸಂಖ್ಯಾತ ಮರಾಠರ ಮುಖಂಡಮಣಿ ಘೋಟನೇಕರ್‌ನ ಎದುರುಹಾಕಿಕೊಳ್ಳುವ ಧೈರ್ಯ ಆತನಿಗೆ ಬರಲಿಲ್ಲ.

ತನ್ನ ಸ್ವಾಹಾ ಸರ್ಕಲ್ಲಿನ ಹುಡುಗನಾಗಿದ್ದ ಸುನಿಲ್ ಹೆಗಡೆ ತಿರುಗಿಬಿದ್ದಾಗ ಆದಂಥದ್ದೇ ಅನಾಹುತ ಘೋಟನೇಕರ್ ಸೆಟೆದುನಿಂತರೆ ಆಗುತ್ತದೆಂಬ ಅರಿವು ದೇಶಪಾಂಡೆಗಿತ್ತು. ಹಾಗಾಗಿ ಯಾರಿಗೂ ಎರಡನೇ ಬಾರಿ ಎಮ್ಮೆಲ್ಸಿ ಚಾನ್ಸ್ ಕೊಡದ ದೇಶಪಾಂಡೆ ಹಿತಶತ್ರು ಘೋಟನೇಕರ್‌ಗೆ ಆ ಭಾಗ್ಯ ಕೊಡುವಂತಾಯ್ತು. ಮತ್ತೆ ಎಮ್ಮೆಲ್ಸಿ ಆಗಿದ್ದೇ ತಡ, ಘೋಟನೇಕರ್ ಸ್ವ-ಜಾತಿ ಮರಾಠರ ನಂಬಿಕೆಗೆ ದ್ರೋಹ ಮಾಡಿಬಿಟ್ಟ. ಮರಾಠರು ಘೋಟನೇಕರ್ ದೇಶಪಾಂಡೆಗೆ ಮಣಿಸುವ ಮುಖಂಡನಾಗಬೇಕೆಂದು ಬಯಸಿದ್ದರು. ಆದರೆ ಅಧಿಕಾರಸ್ಥ ದೇಶಪಾಂಡೆಯಿಂದ ಸಿಗುವ ಲಾಭ-ಸೌಲಭ್ಯ-ಸುಖ-ಸಂತೋಷದ ಎದುರು ಮರಾಠರ ಅಭಿಮಾನ-ಪ್ರೀತಿ-ನಂಬಿಕೆ-ಕೃತಘ್ನ ಘೋಟನೇಕರ್‌ಗೆ ಲೆಕ್ಕಕ್ಕೇ ಬರಲಿಲ್ಲ! ತನ್ನ ಕಲ್ಲು ಕ್ರಶರ್, ಟ್ರ್ಯಾಕ್ಟರ್ ಕಳ್ಳ ಬಿಸ್ನೆಸ್, ಹೊಟೇಲು-ಬಾರು ದಂಧೆ, ಅಕ್ರಮ ಸರ್ಕಾರಿ ಗುತ್ತಿಗೆಗೆ ದೇಶಪಾಂಡೆ ದಯೆಬೇಕೆಂಬ ಕಾರಣಕ್ಕೆ ಆತ ಮರಾಠರ ಮುಂದಾಳಾಗಲು ಒಲ್ಲೆ ಎಂದುಬಿಟ್ಟ! ಆದರೆ ಬಂದಂತೂ ಖರೆ, ದೇಶಪಾಂಡೆ ಎರಡನೇ ಬಾರಿ ಘೋಟನೇಕರ್‌ಗೆ ಎಮ್ಮೆಲ್ಸಿ ಮಾಡದಿದ್ದರೆ ಆಗಾತ ಮರಾಠರ ನಾಯಕಾಗ್ರೇಸನಾಗಿ ರೂಪಾಂತರಗೊಳ್ಳುತ್ತಿದ್ದ.


ಜೆ.ಆರ್. ಪಾಟೀಲ್

ದೇಶಪಾಂಡೆ-ಘೋಟನೇಕರ್-ಸುನಿಲ್ ಹೆಗಡೆ-ವಿ.ಡಿ. ಹೆಗಡೆಗೆಲ್ಲಾ ಹಳಿಯಾಳ ರಾಜಕಾರಣದ ಆಡಂಬೋಲದಲ್ಲಿ ಸಮಯಸಾಧಕತನವೇ ಸಿದ್ಧಾಂತ! ಯಾವಾಗ ಘೋಟನೇಕರ್ ಬೆನ್ನು ಹಾಕಿಹೋದನೋ, ಆಗ ಹೊಸ ಶಕ್ತಿಶಾಲಿ ಜಾತಿ ಬಂಧುವಿನ ಹುಡುಕಾಟಕ್ಕೆ ಮರಾಠರು ಬಿದ್ದರು. ಪ್ರಮೋಟಿ ಎಸ್‌ಪಿಯಾಗಿ ನಿವೃತ್ತನಾಗಿದ್ದ ಜೆ.ಆರ್. ಪಾಟೀಲ್ ಎಂಬ ಮಾಜಿ ಪೊಲೀಸಪ್ಪ ಬಿ.ಕೆ.ಗೌಡ... ವಗೈರೆಗಳಿಗೆ ಕಾಣಿಸಿತು. ಈ ಪಾಟೀಲ ಬಿಜೆಪಿ ಸೇರಿದ್ದೇ ದೇಶಪಾಂಡೆ ಕಿತಾಪತಿಯಿಂದ ಎಂಬ ಗುಸುಗುಸು ಹಳಿಯಾಳ-ಜೋಯಿಡಾದ ರಾಜಕೀಯ ಪಡಸಾಲೆಯಲ್ಲಿದೆ. ಬಹುಸಂಖ್ಯಾತ ಮರಾಠ ಕೋಮಿನ ಪಾಟೀಲ ತನಗೇ ಬಿಜೆಪಿ ಟಿಕೆಟ್ ಬೇಕೆಂದು ಹಠ ಹಿಡಿದರೆ ತನ್ನ ಪ್ರಬಲ ಎದುರಾಳಿ ಮಾಜಿ ಶಾಸಕ ಸುನಿಲ್ ಹೆಗಡೆಗೆ ಗಂಡಾಂತರ ಎಂಬ ದೂ(ದು)ರಾಲೋಚನೆ ದೇಶಪಾಂಡೆ ಸಾಹೇಬರು ಹಾಕಿದ್ದರು. ಆದಕ್ಕಾಗಿ ಪಾಟೀಲ್‌ರನ್ನು ಖುದ್ದು ದೇಶಪಾಂಡೆಯೇ ಬಿಜೆಪಿ ಒಳಗೆ ಬಿಟ್ಟಿದ್ದಾರೆಂದು ಹೇಳೋರೂ ಇದ್ದಾರೆ. ಇದೆಲ್ಲ ಅಂತೆ-


ದೇಶಪಾಂಡೆ

ಕಂತೆ ಏನೇ ಇರಲಿ; ತಾನೇ ಬಿಜೆಪಿ ಕ್ಯಾಂಡಿಡೇಟೆಂ... ಬೀಗುತ್ತಿದ್ದ ಸುನಿಲ್ ಹೆಗಡೆ ನೆಮ್ಮದಿಗೆಟ್ಟಿದ್ದಾರೆ ಪಾಟೀ... ಪಕ್ಷ ಪ್ರವೇಶದಿಂದ.

2A ಮೀಸಲಾತಿಗಾಗಿ ಹೋರಾಡುತ್ತಿರುವ, ... ಮೂಲಕ ರಾಜಕೀಯ ಅಸ್ತಿತ್ವ ಪ್ರದರ್ಶನಕ್ಕೆ ಪ್ರಯ... ನಡೆಸಿರುವ ಮರಾಠರ ಸಂಘಟನೆಯ ಮುಂಚೂಣಿಯ... ತನ್ನ ಚೇಲ ಘೋಟನೇಕರ್ ಇರುವಂತೆ ನೋಡಿಕೊಂಡಿದ... ಡಾನ್ ದೇಶಪಾಂಡೆ. ಎಲೆಕ್ಷನ್ ಹೊತ್ತಲ್ಲಿ ಮರಾಠರ ಒಡೆ... ಓಟು ಪಡೆಯುವ ಕುತಂತ್ರಗಾರಿಕೆಯಿದು. ಇದು ಮರಾಠ... ಅರ್ಥವೂ ಆಗಿದೆ. ಹಾಗಾಗಿ ಜೆ.ಆರ್. ಪಾಟೀಲ್‌ರ... ತಮ್ಮ ನಾಯಕನಾಗಿ ಮಾಡಿಕೊಳ್ಳ... ಮರಾಠರೀಗ ಪ್ಲಾನು ಹಾಕಿದ್ದ... ಬಿಜೆಪಿಯೊಳಗಿನ ಹಳಬ... ಜೆಡಿಎಸ್‌ನಿಂದ ವಲಸೆ ಬಂದಿರು... ಸುನಿಲ್ ಹೆಗಡೆಗೆ ಅಡ್ಡಗಾಲು ಹಾ... ಕುಂತಿದ್ದಾರೆ. ರಾಜೂ ಧೂಳಿಯ... ಚೆಡ್ಡಿ ಪ್ರಚಂಡರು ಜೆ.ಆರ್. ಪಾಟೀಲ... ಗಟ್ಟಿ ಹುರಿಯಾಳೆಂದು ಹೈಕಮಾಂ... ಮಟ್ಟದಲ್ಲಿ ವಕಾಲತ್ತು ನಡೆಸಿದ್ದಾ... ಜೆ.ಆರ್. ಪಾಟೀಲ್ ಬಿಜೆಪಿ ಮ... ಮರಾಠ ಸಮುದಾಯದ... ಸಿಗುತ್ತಿರುವ ಪ್ರೋತ್ಸಾಹದಿಂದ ... ರಾಜಕಾರಣಿ ದೀಕ್ಷೆ ಪಡೆದುಕೊಂಡು ಹಳಿಯಾ... ಜೋಯಿಡಾದ ಉದ್ದಗಲಕ್ಕೆ ಅಂಡಲೆಯಲಾರಂಭಿಸಿದ್ದಾ...

ಈಗ ದೇಶಪಾಂಡೆ ಪರಿಸ್ಥಿತಿ ಭಸ್ಮಾಸುರನ ಸೃ... ದಂತಾಗಿದೆ. ಸುನಿಲ್ ಹೆಗಡೆ ಸಂಹಾರಕ್ಕಾಗಿ ಬಿಜೆಪಿಯೊ... ಕಳಿಸಿದ್ದ ಜೆ.ಆರ್. ಪಾಟೀಲ್ ತನಗೇ ಪ್ರತಿಸ್ಪ... ಯಾಗುತ್ತಾನೆಂದು ಆತ ಕನಸಲ್ಲೂ ಎಣಿಸಿರಲಿಲ್ಲ. ಪಾ... ಅಕಸ್ಮಾತ್ ಜೆ.ಆರ್. ಪಾಟೀಲ ಬಿಜೆಪಿ ಅಭ್ಯರ್ಥಿಯಾ... ದೇಶಪಾಂಡೆಗೆ ಟಕ್ಕರ್ ತಪ್ಪಿದ್ದಲ್ಲ! ಅತ್ತ ಸುನಿಲ್ ಹೆ... ಜೆಡಿಎಸ್‌ನ ಕಿಂಗ್‌ಗಳ ಸಂಪರ್ಕ ನವೀಕರಣ... ಹವಣಿಸುತ್ತಿದ್ದಾನೆ. ಬಿಜೆಪಿಯ ಚೆಡ್ಡಿಪಡೆ ಕೈಕೊಟ್ಟರೆ ತಕ್ಷ... ಜೆಡಿಎಸ್ ಕ್ಯಾಂಡಿಡೇಟಾಗುವ ಯೋಚನೆ ಆತನದು. ಬಿ... ಕ್ಯಾಂಡಿಡೇಟಾದರೆ ಯಡ್ಡಿ ಸರ್ಕಾರ ಬಂದಾಗ ಮರಾ... 2A ಗೆ ಸೇರಿಸ್ತೇನೆಂದು ನಂಬಿಸಿ ಓಟು ಪಡೆಯು... ಯೋಜನೆ ಸುನಿಲ್ ಹಾಕಿದ್ದಾನೆ. ಆ ಮಾತನ್ನು ಯಡ್ಡಿಯ... ಸದ್ಯದಲ್ಲಿ ಕರೆಸಿ ಹೇಳಿಸುವ ತಂತ್ರ ಆತನ... ಘೋಟನೇಕರ್‌ನ ಮುಂದಿಟ್ಟು ಮರಾಠ ಸಂಘಟನೆ ಹೈಜಾ... ಮಾಡುವ ಮಸಲತ್ತು ದೋಷಪಾಂಡೆಯದು.


ಪದೇಪದೇ ಮರಾಠರು 2A ಮೀಸಲಾತಿ ಸೌಲ... ಅಟ್ರಾಸಿಟಿ ಭೂತ, ಮತಾಂತರದಂಥ ಸೂಕ್ಷ್ಮಭಾ... ಸಂಗತಿಗಳನ್ನು ಮುಂದಿಟ್ಟು ಬೀದಿಗೆ ಇಳಿಯುತ್ತಿರು... ಹಳಿಯಾಳದ ರಾಜಕೀಯ ಕೆಮಿಸ್ಟ್ರಿಯನ್ನು ದಿನಕ್ಕೊಂದರ... ಬದಲಿಸುತ್ತಿದೆ; ಮಾಜಿ ಪೊಲೀಸಪ್ಪ ಜೆ.ಆರ್. ಪಾಟೀ... ಪಾಲಿಟಿಕಲ್ ಎಂಟ್ರಿಯೂ ಹಳಿಯಾಳ-ಜೋಯಿಡಾ... ಎಲೆಕ್ಷನ್ ಸಮೀಕರಣಗಳನ್ನು ಹೆಚ್ಚು-ಕಮ್ಮಿ ಮಾಡುತ್ತಿ... ಹಳಿಯಾಳದ ಮೇಲಿನ ಹಿಡಿತ ತಪ್ಪುವ ಆತಂಕದಿ... ದೇಶಪಾಂಡೆ-ಸುನಿಲ್ ಹೆಗಡೆ ತಮ್ಮ ಲಾಗಾಯ... ತಂತ್ರಗಾರಿಕೆ ಬದಲಿಸಬೇಕಾಗಿ ಬಂದಿದೆ. ಮರಾ... ಸ್ವಾಭಿಮಾನದ ಧ್ವನಿಗೆ ಎಮ್ಮೆಲ್ಲೆ ಆಕಾಂಕ್ಷಿಗಳು ಬೆ... ಬೆರಗಾಗಿರುವುದಂತೂ ಖರೆ.

ಮರಾಠರು ತಮ್ಮ ಹೋರಾಟವನ್ನು ಈ ಬಾರಿ... ಎಲೆಕ್ಷನ್‌ನಲ್ಲಾದರೂ ತಾರ್ಕಿಕ-ನಿರ್ಣಾಯಕ ಹಂ... ಒಯ್ಯುವರಾ? ಅಥವಾ ಪ್ರತಿ ಚುನಾವಣೆಯಲ್ಲಿ ದೋ... ಪಾಂಡೆ ನಡೆಸುವ ಡೆಡ್ಲಿ ಕಾರ್ಯಾಚರಣೆಗೆ ಕೊನೆಗಳಿಗೆಯ... ಬಲಿ ಬೀಳುವರಾ?

■ ವರದಿಗಾ...


ಮರಾಠರ ಮೀಸಲಾತಿ ಹೋರಾಟ

ಬಿಜೆಪಿಯ ಆಶಾಸೌಧಕ್ಕೆ ಸಿದ್ದು ಇಟ್ಟ ಕೊಳ್ಳಿ...



ರೊಟ್ಟಿ ಜಾರಿ ತುಪ್ಪಕ್ಕೆ ಬೀಳುವುದು ಅನ್ನೋದು ಇದೇ! ಮೊನ್ನೆ ಜೂನ್ 14ರಂದು ರಾಜಧಾನಿಯ ಅರಮನೆ ಮೈದಾನದಲ್ಲಿ ವೀರಶೈವ ಮಹಾಸಭಾದ ಅಭಿನಂದನಾ ಸಮಾವೇಶವನ್ನುದ್ದೇಶಿಸಿ 'ಸ್ವತಂತ್ರ ಧರ್ಮ'ದ ಪ್ರಸ್ತಾಪವನ್ನಷ್ಟೇ ಮಾಡಿದ್ದ ಸಿದ್ದರಾಮಯ್ಯಗೆ ತನ್ನ ರೊಟ್ಟಿ ಜಾರಿ ತುಪ್ಪಕ್ಕೆ ಬೀಳುತ್ತಿದೆಯೆಂಬ ಸಣ್ಣದೊಂದು ವಿಚಾರವೂ ಇದ್ದಿರಲಿಕ್ಕಿಲ್ಲ.

ಅದು ಮಹಿಳಾ ವಿವಿಗೆ ಶಿವಶರಣೆ ಅಕ್ಕ ಮಹಾದೇವಿಯ ಹೆಸರಿಟ್ಟಿದ್ದಕ್ಕಾಗಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರದ ಅಳವಡಿಕೆಗಾಗಿ ಸರ್ಕಾರ ಹೊರಡಿಸಿದ್ದ ಆದೇಶದ ಕೃತಜ್ಞತೆಗಾಗಿ ಅಖಿಲ ಭಾರತ ವೀರಶೈವ ಮಹಾಸಭಾ ಹಮ್ಮಿಕೊಂಡಿದ್ದ ಅಭಿನಂದನಾ ಸಮಾವೇಶವಷ್ಟೇ. ಸಹಜವಾಗೇ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಿದ್ದರಾಮಯ್ಯ ಬೇರೆ ಯಾವುದೇ ಸಾರ್ವಜನಿಕ ಭರವಸೆಯಷ್ಟೇ ಸಹಜವಾಗಿ ಭರವಸೆಯೆಂಬಂತೆ "ವೀರಶೈವ-ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವನ್ನಾಗಿ ಘೋಷಿಸುವಂತೆ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲಿದೆ" ಎಂಬ ಮಾತನ್ನು ತೇಲಿಸಿಬಿಟ್ಟರು.

ಹಾಗೆ ಹೇಳುವಾಗಲೂ ತಾನೆಂಥಾ ಜೇನುಗೂಡಿಗೆ ಕೈ ಹಾಕುತ್ತಿದ್ದೇನೆಂಬ ಪರಿಕಲ್ಪನೆ ಕೂಡಾ ಅವರಿಗಿರಲಿಲ್ಲ. ಸಚಿವರಾದ ಶಾಮನೂರು ಶಿವಶಂಕರಪ್ಪ, ಎಂ.ಬಿ. ಪಾಟೀಲ್, ಎಸ್.ಎಸ್. ಮಲ್ಲಿಕಾರ್ಜುನ್, ಹೆಚ್.ಕೆ. ಪಾಟೀಲ್, ವಿನಯ್ ಪಾಟೀಲ್, ಬಸವರಾಜರಾಯರೆಡ್ಡಿ ಸೇರಿದಂತೆ ಇಡೀ ಸಂಪುಟದ ಬಹುತೇಕ ಲಿಂಗಾಯತ ಮಂತ್ರಿಗಳು, ಶಾಸಕರು ಮತ್ತು ಆ ಜನಾಂಗದ ನಾಯಕರುಗಳೆಲ್ಲ ಜಮಾಯಿಸಿದ್ದ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದು ಪ್ರತಿಷ್ಠಿತ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು. ಅಂದರೆ ಹೆಚ್ಚೂಕಮ್ಮಿ ಸಮಸ್ತ ವೀರಶೈವ-ಲಿಂಗಾಯತ ಸಮೂಹದ ಶಕ್ತಿ ಕೇಂದ್ರದಲ್ಲೇ ಸಿದ್ದು 'ಪ್ರತ್ಯೇಕ ಧರ್ಮ'ದ 'ಕಿಡಿ' ಹೊತ್ತಿಸಿಬಿಟ್ಟಿದ್ದರು. ಅದೇನು ಉದ್ದೇಶಪೂರ್ವಕವಾಗಿ ಸಿದ್ದು ಹಚ್ಚಿದ ಬತ್ತಿಯಾಗಿರಲಿಲ್ಲ. ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದಲೆ ಸಲ್ಲಿಸಿದ್ದ ಬೇಡಿಕೆಗಳ ಪಟ್ಟಿಯೊಳಗಿದ್ದ ಬೇಡಿಕೆಗಳಲ್ಲೊಂದಾಗಿತ್ತು.

ಬಹುಶಃ ತಾನಿಟ್ಟಿದ್ದ ಬೇಡಿಕೆಗಳ ಪಟ್ಟಿಯ ಈ ಸಲ್ಲಿಕೆ ರಾಜಕೀಯವಾಗಿ ಸಾಂಸ್ಕೃತಿಕವಾಗಿ ಅದೆಂಥಾ ಪಲ್ಲಟ ಹುಟ್ಟುಹಾಕಬಹುದೆಂಬ ಸಣ್ಣದೊಂದು ಪರಿಕಲ್ಪನೆ ಕೂಡ ಲಿಂಗಾಯತ ನಾಯಕರಿಗಿರಲಿಲ್ಲವೇನೊ. ಅದನ್ನು ಮನ್ನಿಸಿದ ಸಿದ್ದರಾಮಯ್ಯ ಕೂಡ ಮುಂದೊಂದು ದಿನ ಇದು ಕರ್ನಾಟಕದ ಸಾಂಸ್ಕೃತಿಕ ಲಕ್ಷಣವನ್ನೇ ಅಲ್ಲಾಡಿಸಿ ಹಾಕಬಹುದೆಂಬ ಸಣ್ಣದೊಂದು ನಿರೀಕ್ಷೆಯನ್ನೂ ಮಾಡಿರಲಿಕ್ಕಿಲ್ಲ. ಕ್ವಚಿತ್ತಾಗಿ ಮುಖ್ಯಮಂತ್ರಿಯ ಬಾಯಿಂದ ಹೊರಬಿದ್ದ 'ಸ್ವತಂತ್ರ ಧರ್ಮದ' ಪ್ರತಿಪಾದನೆಯೆಂಬುದು ಕಾಲನ ಲೀಲೆಯೋ ಎಂಬಂತೆ ಕಾಕತಾಳೀಯವಾಗಿ ಘಟಿಸಿಹೋಗಿತ್ತು. ಖುದ್ದು ವೀರಶೈವ ಮಹಾಸಭಾದ ನಾಯಕರೇ ಬೆಸ್ತು ಬೀಳುವಂತೆ ಆವತ್ತಿನಿಂದ ನಡೆಯುತ್ತಿರುವ ಸಂಘರ್ಷಗಳೇನು, ತಲ್ಲಣಗಳೇನು? ಬಿದ್ದ ಬೆಂಕಿಯ ಕಾವೇನು?


ಜುಲೈ 19ರಂದು ಬೀದರ್‌ನಲ್ಲಿ ಜರುಗಿದ ಪ್ರತ್ಯೇಕ ಧರ್ಮ ಸಮಾವೇಶಕ್ಕೆ ಸೇರಿದ್ದು ಹೆಚ್ಚೂಕಮ್ಮಿ ಎರಡು ಲಕ್ಷ ಮಂದಿ ಶಿವಶರಣರು!

ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆದ ಪ್ರತ್ಯೇಕ ಧರ್ಮ ಅಗ್ರಹಾಧಿವೇಶನಕ್ಕೆ ಆ ಭಾಗದ ಬಹುತೇಕ ಲಿಂಗಾಯತ ಶಾಸಕರೂ, ಭಾಲ್ಕಿ ಪಟ್ಟದ ದೇವರು, ಶರಣೆ ಅನ್ನಪೂರ್ಣಮ್ಮ ಸೇರಿದಂತೆ ಇಪ್ಪತ್ತಕ್ಕೂ ಅಧಿಕ ಶಿವಶರಣರು ಮಾತ್ರವಲ್ಲದೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಶರಣ ಸಮೂಹವೇ ನೆರೆದಿತ್ತು. ಜೂನ್ 14ರಂದು ಅರಮನೆ ಮೈದಾನದಲ್ಲಿ ಸಿದ್ದು ಪ್ರತ್ಯೇಕ ಧರ್ಮಕ್ಕೆ 'ಸರ್ಕಾರಿ ಸಮರ್ಥನೆ' ಕೊಟ್ಟ ನಂತರ ಸಾಂಸ್ಕೃತಿಕವಾಗಿ ಸಂಭವಿಸುತ್ತಿರುವ ತಲ್ಲಣವಾದರೂ ಎಂಥಾದ್ದು?

ಅದು ಕೇವಲ ಲಿಂಗಾಯತ ಅಥವಾ ವೀರಶೈವ ಸಮೂಹಕ್ಕಷ್ಟೇ ಸೀಮಿತವಾಗುಳಿದಿಲ್ಲ. ಕೇವಲ ಉತ್ತರ ಕರ್ನಾಟಕದ ಮಟ್ಟಿಗಾಗಲಿ, ಒಂದು ಜಾತಿ, ಧರ್ಮದ ಪ್ರಶ್ನೆಯಾಗಷ್ಟೆ ಉಳಿಯಲೂ ಇಲ್ಲ. ಆ ಕಾಲದಿಂದಲೂ ಲಿಂಗಾಯತರನ್ನು ತನ್ನ ಓಟ್‌ಬ್ಯಾಂಕ್‌ನ ಭದ್ರಕೋಟೆಯೆಂಬಂತೆ ಪಳಗಿಸಿಕೊಂಡೇ ಬಂದ ಬಿಜೆಪಿ ವ್ಯವಸ್ಥಿತವಾಗಿ ಲಿಂಗಾಯತರನ್ನು ಕೇಸರೀಕರಣಗೊಳಿಸಿಕೊಂಡೇ ಬಂದಿತ್ತು. ಪ್ರತ್ಯಕ್ಷವೋ ಪರೋಕ್ಷವೋ ಯಾವ ಹಿತಾಸಕ್ತಿಗಳು ಬಸವಣ್ಣನನ್ನು ಕೊಂದಿದ್ದವೋ(!) ಅಂಥ ವೈದಿಕ ವ್ಯವಸ್ಥೆಯ ಆಧಾರಸ್ತಂಭಗಳಾಗಿ ಕರ್ನಾಟಕದ ಲಿಂಗಾಯತ ಸಮೂಹ ರೂಪುಗೊಂಡ ಮಾನವೀಯ ದುರಂತಕ್ಕೆ ಕನ್ನಡ ತಾಯಿಯೇ ತುತ್ತಾಗಬೇಕಾಯಿತು. ಬಸವಣ್ಣ ತನ್ನ ನಖಶಿಖಾಂತ ವಿರೋಧಿಸಿಕೊಂಡೇ ಬಂದಿದ್ದ ಬ್ರಾಹ್ಮಣಶಾಹಿಯನ್ನೇ ಕರ್ನಾಟಕದ ಲಿಂಗಾಯತ ಸಮೂಹ ರಾಜಕೀಯವಾಗಿ ಬೆಂಬಲಿಸಲಾರಂಭಿಸಿದ್ದರ ಫಲಶ್ರುತಿಯೇ ಯಡಿಯೂರಪ್ಪ!

ಇಂಥ ಯಡ್ಡಿ ಬಿಜೆಪಿಯಿಂದ ಹೊರಬಿದ್ದು ತನ್ನದೇ ಪ್ರತ್ಯೇಕ ಕೆಜೆಪಿ ಸ್ಥಾಪಿಸಿದಾಗ ಸಹಜವಾಗೇ ಲಿಂಗಾಯತ ಸಮೂಹ ಯಡ್ಡಿ ಬೆನ್ನಿಗೆ ನಿಂತಿತ್ತು. ಇದರ ಫಲವಾಗೇ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಆದರೆ ಮತ್ತೆ ಯಡ್ಡಿ ಬಿಜೆಪಿ ಸೇರಿದಾಗ ಸಹಜವಾಗೇ ಬ್ರಾಹ್ಮಣಶಾಹಿ ಬಿಜೆಪಿ ಇನ್ನೇನು ಅಧಿಕಾರ ಸಿಕ್ಕೇಬಿಟ್ಟಂತೆ ಕೇಕೆ ಹಾಕಲಾರಂಭಿಸಿತ್ತು. ಹೆಚ್ಚೂ ಕಮ್ಮಿ 40 ಕ್ಷೇತ್ರಗಳಲ್ಲಿ ಕೆಜೆಪಿಯಿಂದಾಗಿ ಬಿಜೆಪಿ ಠೇವಣಿ ಕಳೆದುಕೊಂಡದ್ದು ಕರ್ನಾಟಕದ ಮಟ್ಟಿಗೆ ಬ್ರಾಹ್ಮಣಶಾಹಿಗಾದ ದೊಡ್ಡ ಪೆಟ್ಟೇ ಸರಿ. ಅಂಥಾದ್ದರಲ್ಲಿ ಬಿಜೆಪಿಯ ತೆಕ್ಕೆಯಿಂದ ಲಿಂಗಾಯತರನ್ನು ಸಾಧ್ಯವಾದಷ್ಟು ಹೊರತರಲು ಸಿದ್ದು ಒಳಗೊಳಗೇ ಹೆಣಗುತ್ತಲೇ ಬಂದಿದ್ದು ಸುಳ್ಳೇನಲ್ಲ. ಕೆಪಿಸಿಸಿಗೆ ಲಿಂಗಾಯತರನ್ನು ತರುವುದರಿಂದ ಹಿಡಿದು, ಆರು ಮಂದಿ ಲಿಂಗಾಯತ ಮಂತ್ರಿಗಳು, ಮಹಿಳಾ ವಿವಿಗೆ ಅಕ್ಕ ಮಹಾದೇವಿ ಹೆಸರು, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ ಇತ್ಯಾದಿಗಳ್ಯಾವುದೂ ಯಡ್ಡಿಯ ಜಾತಿ ನೆಂಟಸ್ತಿಕೆಯ ಮುಂದೆ ಅಷ್ಟೊಂದು ಪರಿಣಾಮಕಾರಿಯೆನ್ನಿಸಿರಲಿಲ್ಲ.

ಅಂಥಾದ್ದರಲ್ಲಿ ವೀರಶೈವ ಮಹಾಸಭಾ ಹಮ್ಮಿಕೊಂಡಿದ್ದ ಅಭಿನಂದನಾ ಸಮಾವೇಶವೆಂಬುದು ಸಿದ್ದು ಪಾಲಿಗೆ ಕಾಲವೇ ಕಲ್ಪಿಸಿಕೊಟ್ಟ ಸುವರ್ಣಾವಕಾಶವಾಗಿ ಬದಲಾಯಿತು. 'ಸ್ವತಂತ್ರ ಧರ್ಮ'ದ ಸರ್ಕಾರಿ ಸಮರ್ಥನೆಯಿಂದಾಗಿ ಸಂಘಪರಿವಾರ ಆತನಕ ತನ್ನ ಹುತ್ತವನ್ನಾಗಿ ಮಾಡಿಕೊಂಡಿದ್ದ ಲಿಂಗಾಯತ ಓಟ್‌ಬ್ಯಾಂಕೇ ಅಲ್ಲಾಡುವಂತಾಯ್ತು. ಸ್ವತಂತ್ರ ಧರ್ಮದ ಘೋಷಣೆಯೆಂದರೆ ಹಿಂದೂ ಧರ್ಮದಿಂದಲೇ ಪ್ರತ್ಯೇಕವಾಗುವ ತಾರ್ಕಿಕ ಅಂತ್ಯವಿದ್ದಂತೆ. ಸ್ವತಃ ವೀರಶೈವರೇ ಬಯಸದೇ ಹೋದರೂ ಅವರೊಳಗಿನಿಂದಲೇ ಲಿಂಗಾಯತ



ರೆಂಬ ಬಸವಾನುಯಾಯಿಗಳು ತಿರುಗಿಬೀಳಲೇಬೇಕಾದ ಅನಿವಾರ್ಯವೊಂದು ತನ್ನಿಂತಾನೇ ಸೃಷ್ಟಿಯಾಗಿಬಿಟ್ಟಿತ್ತು.


ಇದು ಯಡ್ಡಿಯನ್ನು ಮುಂದಿಟ್ಟುಕೊಂಡು ಬಸವಣ್ಣನ ಕ್ರಾಂತಿಯನ್ನು ಇನ್ನಿಲ್ಲದಂತೆ ಮಣ್ಣುಗೂಡಿಸ ಹೊರಟಿದ್ದ ಬ್ರಾಹ್ಮಣಶಾಹಿಗೆ ಆದ ಮರ್ಮಾಘಾತ. ಇಲ್ಲದೇ ಹೋಗಿದ್ದರೆ 'ಪ್ರತ್ಯೇಕ ಧರ್ಮ'ದ ವಿರುದ್ಧ ತನ್ನದೇ ಸಮೂಹದ ಹಿತಾಸಕ್ತಿಗೆ ವಿರುದ್ಧವಾಗಿ ಏಕೆ ಯಡಿಯೂರಪ್ಪ ವೈದಿಕದ ಪರ ಬೊಬ್ಬೆ ಹಾಕುತ್ತಿದ್ದ? ಪ್ರತ್ಯೇಕ ಧರ್ಮವಾಗದೆ ಲಿಂಗಾಯತರು ಹಿಂದೂ ಧರ್ಮದಲ್ಲೇ ಉಳಿಯಬೇಕೆಂಬ ಯಡ್ಡಿಯ ಹತಾಶೆಗೂ ವೈದಿಕರ ಆರ್ತನಾದಕ್ಕೂ ಹೆಚ್ಚು ವ್ಯತ್ಯಾಸವೇನಿಲ್ಲ. ಅದು ಬಿಜೆಪಿಯ ಓಟ್‌ಬ್ಯಾಂಕ್‌ಗೆ ಸಿದ್ದು ಮೂಲಕ ಬಂದೊದಗಿದ ಆಪತ್ತಿನ ಪರಿಣಾಮ ಕೂಡ.

ಒಂದೆಡೆ ಪ್ರತ್ಯೇಕ ಕನ್ನಡ ಧ್ವಜ ಮತ್ತೊಂದೆಡೆ ಪ್ರತ್ಯೇಕ ಧರ್ಮ ಮಗದೊಂದೆಡೆ ಕೋಮುಗಲಭೆಗಳ ಮೂಲಕ ಹಿಂದೂ ಓಟ್‌ಬ್ಯಾಂಕ್ ದುಸ್ಸಾಹಸಕ್ಕೆ ಕೈಯಿಟ್ಟ ಬಿಜೆಪಿ-ಸಂಘಪರಿವಾರಕ್ಕೆ ಸಿದ್ದು ಪೆಟ್ಟಿನ ಮೇಲೆ ಪೆಟ್ಟು ಹಾಕುತ್ತಿರುವ ಪರಿಯಿದು.

ಒಂದಂತೂ ಸತ್ಯ, ಬಿಜೆಪಿ ಪರವಿದ್ದ ಲಿಂಗಾಯತರ ಓಟ್‌ಬ್ಯಾಂಕಿಗೆ ಸಿದ್ದು ಹಚ್ಚಿದ ಕಿಡಿಯೇನೂ ಸಣ್ಣದಲ್ಲ. ಕೆಜೆಪಿ ಪ್ರಾಬಲ್ಯ ಸಾಧಿಸಿದ್ದ ಕನಿಷ್ಠ 40 ಕ್ಷೇತ್ರಗಳ ಪೈಕಿ ಅರ್ಧಕ್ಕರ್ಧದಷ್ಟು ಲಿಂಗಾಯತರು ಪ್ರತ್ಯೇಕ ಧರ್ಮಕ್ಕೆಂದು ಹಠಕ್ಕೆ ನಿಂತರೂ ಸಾಕು; ಬಿಜೆಪಿಯ ಆಶಾಸೌಧಕ್ಕೆ ಬೆಂಕಿಬಿದ್ದಂತೆಯೇ...!

■ರಾ.ಸೋಮನಾಥ್

ಮಾತಾಜಿ ಅವರಿಗೊಂದು ಬಹಿರಂಗ ಪತ್ರ



ಪೂಜ್ಯ ಮಾತಾಜಿ ಅವರಿಗೆ,
ಶರಣು ಶರಣಾರ್ಥಿ

ಇತ್ತೀಚೆಗೆ 'ಲಿಂಗಾಯತ ಧರ್ಮ ಸ್ವತಂತ್ರ ಧರ್ಮ' ಎಂಬ ಘೋಷಣೆಯೊಂದಿಗೆ ಲಕ್ಷಾಂತರ ಜನರು ಬೀದರ್‌ನಲ್ಲಿ ಲಿಂಗಾಯತ ಶಕ್ತಿ ಪ್ರದರ್ಶನ ಮಾಡಿದ್ದು ಅಭೂತಪೂರ್ವ ಎನಿಸಿತು. ಲಿಂಗಾಯತ ಧರ್ಮಕ್ಕೆ ಸೇರಿದ ಮಠಗಳು, ಸಂಘಟನೆಗಳು, ಸಮಿತಿಗಳು, ಸಂಸ್ಥೆಗಳು ಮತ್ತು ವ್ಯಕ್ತಿಗಳು ಒಗ್ಗಟ್ಟಿನಿಂದ ಪ್ರಯತ್ನ ಮಾಡಿದ್ದರಿಂದ ಇದು ಸಾಧ್ಯವಾಯಿತು. ಆ ಮಹಾಸಭೆಯಲ್ಲಿ ಭಾಗವಹಿಸಿದ್ದ ಬಹುಪಾಲು ಲಿಂಗಾಯತರು ಗ್ರಾಮೀಣ ಭಾಗದವರಾಗಿದ್ದು ವಿಭೂತಿ ಮತ್ತು ಇಷ್ಟಲಿಂಗ ಮಾತ್ರ ಅವರ ಬದುಕಿನ ಧಾರ್ಮಿಕ ಸಂಕೇತಗಳಾಗಿದ್ದವು. ಉಳಿದಂತೆ ಅವರೆಲ್ಲ ಬಡ ಕೃಷಿಕರು ಮತ್ತು ಇತರೆ ಚಿಕ್ಕಪುಟ್ಟ ಉದ್ಯೋಗ ಮಾಡಿಕೊಂಡು ಕಷ್ಟದ ಜೀವನ ಸಾಗಿಸುವವರೇ ಆಗಿದ್ದರು. ಅಂಥ ಜನರು ಬಂದದ್ದು ತಮ್ಮ ಸ್ವಂತ ಹಣದಿಂದ ಮತ್ತು ಸ್ವಯಂಪ್ರೇರಣೆಯಿಂದ ಎಂಬುದನ್ನು ಕೂಡ ನಾವು ಗಮನಕ್ಕೆ ತೆಗೆದುಕೊಂಡಾಗ ಲಿಂಗಾಯತ ಜನಶಕ್ತಿಯ ಅರಿವಾಗುವುದು.

ಇಂಥ ಬಡ ಲಿಂಗಾಯತರ ಬಗ್ಗೆ ಕಾಳಜಿ ಇಲ್ಲದವರು, ಲಿಂಗಾಯತವನ್ನು ಸ್ವತಂತ್ರ ಧರ್ಮ ಮಾಡುವುದಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ. ವಚನಾಂಕಿತ ತಿದ್ದಿದ ಘಟನೆಯನ್ನು ಮತ್ತೆ ಜೀವಂತಗೊಳಿಸುತ್ತಿದ್ದಾರೆ. ಈ ಕುರಿತು ವಿವಿಧ ಕಡೆಗಳಲ್ಲಿ ಸಭೆಗಳಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿ ಭಾವಿಸುತ್ತೇನೆ. ಅಷ್ಟೇ ಅಲ್ಲದೆ ತಾವು ಹಿಂದೊಮ್ಮೆ ಲಿಂಗಾಯತ, ವೀರಶೈವ ಮತ್ತು ಹಿಂದೂ ಎಂಬುವು ಒಂದೇ ಎನ್ನುವ ರೀತಿಯಲ್ಲಿ ಬರೆದ ಹಾಡೊಂದು ಎಲ್ಲೆಡೆ ಹರಡುವಂತೆ ಮಾಡುವುದಕ್ಕಾಗಿ ಯುದ್ಧೋಪಾದಿಯಲ್ಲಿ ಕಾರ್ಯೋನ್ಮುಖರಾಗಿದ್ದಾರೆ.

ಈಗ ನೀವು ಯಾವುದನ್ನು ಒಪ್ಪಿದ್ದೀರಿ ಎಂಬುದು ನನಗೆ ಬಹಳ ಮುಖ್ಯ. ಲಿಂಗಾಯತ ಎಂಬುದು ವೀರಶೈವ ಅಲ್ಲ, ಹಿಂದೂ ಕೂಡ ಅಲ್ಲ ಎಂಬ ನಿರ್ಧಾರಕ್ಕೆ ತಾವು ಬಂದಿದ್ದೀರಿ. ಇದು ಬಹಳ ಸ್ವಾಗತಾರ್ಹವಾಗಿದೆ. "ಒಂದು ವಿಷಯಕ್ಕೆ ಸಂಬಂಧಿಸಿದಂತೆ ನಾನು ಮೊದಲಿಗೆ ಹೇಳಿದ್ದು ನಂತರ ಹೇಳಿದ್ದಕ್ಕೆ ವಿರುದ್ಧವಾಗಿದ್ದರೆ, ಆ ನಂತರ ಹೇಳಿದ್ದನ್ನೇ ತೆಗೆದುಕೊಳ್ಳಿರಿ" ಎಂದು ಗಾಂಧೀಜಿಯವರು ತಿಳಿಸಿದ್ದರು. ತಾವು ಕೂಡ ಅಂಥದೇ ಬದ್ಧತೆ ಉಳ್ಳವರಾಗಿದ್ದೀರಿ.

ಈಗ ನಮ್ಮ ಮುಂದೆ ಎರಡು ಸಮಸ್ಯೆಗಳಿವೆ. ಮೊದಲನೆಯದು 12ನೇ ಶತಮಾನದಲ್ಲೇ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ದೊರಕಿಸುವುದಕ್ಕಾಗಿ ಅಹಿಂಸಾತ್ಮಕ ಹೋರಾಟವನ್ನು ವ್ಯವಸ್ಥಿತವಾಗಿ ಹಮ್ಮಿಕೊಳ್ಳುವುದು. ಎರಡನೆಯದಾಗಿ ಬಡ ಲಿಂಗಾಯತರನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ರಕ್ಷಿಸುವುದು. ಇವೆರಡೂ ಏಕಕಾಲಕ್ಕೇ ನಡೆಯುವಂಥವು. ಈ ಮಹಾಕಾರ್ಯದ ಸಾಧನೆಗಾಗಿ ನಾವೆಲ್ಲ ಒಂದಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಇಲ್ಲಿ ಯಾರೂ ದೊಡ್ಡವರಿಲ್ಲ, ಯಾರೂ ಸಣ್ಣವರಿಲ್ಲ, 'ಎಲ್ಲರೂ ಬಸವಣ್ಣನ ಅನುಯಾಯಿಗಳು' ಎಂಬುದನ್ನು ಹೋರಾಟದ ಮೌಲ್ಯವಾಗಿ ರೂಪಿಸಿಕೊಂಡರೆ ಖಂಡಿತವಾಗಿಯೂ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಕೂಡ ಈ ಹೋರಾಟಕ್ಕೆ ನೈತಿಕ ಬೆಂಬಲ ನೀಡುತ್ತಾರೆ.

ಈ ಹೋರಾಟವು ನಮ್ಮ ರಾಜ್ಯದ ಸರ್ವಧರ್ಮ ಸಮಭಾವದ ಜನಸಮುದಾಯಕ್ಕೂ ಉಪಯುಕ್ತವಾಗಿದೆ. ಹಿಟ್ಲರ್‌ಶಾಹಿ ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳಿಗೆ ಈ ಚಳವಳಿಯಿಂದ ಖಂಡಿತವಾಗಿಯೂ ಹಿನ್ನಡೆ ಉಂಟಾಗುವುದು.

ಕರ್ನಾಟಕದ ಬಂಡವಾಳಶಾಹಿ ಪಕ್ಷಗಳಲ್ಲಿ ಸಿದ್ದರಾಮಯ್ಯ ಅವರನ್ನು ಮೀರಿಸುವ ಸಂವೇದನಾಶೀಲ ವ್ಯಕ್ತಿ ಇನ್ನೊಬ್ಬರಿಲ್ಲ ಎಂಬುದನ್ನು ತಾವು ಬಲ್ಲಿರಿ. ಸತ್ಯಾಸತ್ಯತೆಗಳ ಆಧಾರದ ಮೇಲೆ ಅವರು ಲಿಂಗಾಯತಕ್ಕೆ ಒಲವು ತೋರಿದ್ದಾರೆ ಹೊರತಾಗಿ ವೀರಶೈವ-ಲಿಂಗಾಯತ ಸಮಸ್ಯೆಯಲ್ಲಿ ಅವರು ಎಂದೂ ಮೂಗು ತೂರುವ ಕೆಲಸ ಮಾಡಿಲ್ಲ. ಅವರ ನಿಲುವನ್ನು ತಾವು ದಿಟ್ಟತನದಿಂದ ಬೆಂಬಲಿಸಿದ್ದು ಅಭಿನಂದನಾರ್ಹವಾಗಿದೆ.

ಈಗ ಮತ್ತೆ ವಚನಾಂಕಿತ ತಿದ್ದಿದ ವಿಷಯಕ್ಕೆ ಬರುವೆ. ಈ ಕುರಿತು ನಾನು ತಮ್ಮ ಜೊತೆ ಕಳೆದ ಹತ್ತಾರು ವರ್ಷಗಳಿಂದ ಪದೆ ಪದೆ ಚರ್ಚಿಸುತ್ತಲೇ ಬಂದಿದ್ದೇನೆ. ಬಹಳ ವರ್ಷಗಳ ಹಿಂದೆ ನಾವಿಬ್ಬರು 'ಬಸವಮಂಟಪ'ದಲ್ಲಿ ಈ ವಿಚಾರದಲ್ಲಿ ಗಂಭೀರ ಚರ್ಚೆ ಮಾಡಿದ್ದನ್ನು ತಾವು ಮರೆತಿಲ್ಲ ಎಂದು ಭಾವಿಸಿದ್ದೇನೆ. "ಈ ಧೈರ್ಯ ಎಲ್ಲಿಂದ ಬಂತು" ಎಂದು ನಾನು ತಮಗೆ ಕೇಳಿದ್ದೆ. "ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಓದಿದಾಗ" ಎಂದು ತಾವು ನನಗೆ ತಿಳಿಸಿದ್ದೀರಿ. ಆ ಪೈಗಂಬರರ ಬದುಕಿನ ಒಂದು ಘಟನೆಯನ್ನು ತಮಗೆ ತಿಳಿಸಬಯಸುತ್ತೇನೆ:


ಮೆಕ್ಕಾವಾಸಿಗಳ ಕಿರಿಕಿರಿಯಿಂದಾಗಿ ಪೈಗಂಬರರು ಮೆಕ್ಕಾದಿಂದ ಮದೀನಾಗೆ ವಲಸೆ ಬಂದನಂತರ ಮದೀನಾದ ಬಹುಪಾಲು ಜನ ಪೈಗಂಬರರನ್ನು ಮತ್ತು ಅವರ ಅನುಯಾಯಿಗಳನ್ನು ಆದರದಿಂದ ಬರಮಾಡಿಕೊಂಡರು ಹಾಗೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಇದರಿಂದ ಮೆಕ್ಕಾದ ಜನ ಕುಪಿತಗೊಂಡರು. ಏಕೆಂದರೆ ಅವರೆಲ್ಲ ಇಸ್ಲಾಂ ಧರ್ಮವನ್ನು ವಿರೋಧಿಸುತ್ತಿದ್ದರು. ಮದಿನಾದ ಮುಸ್ಲಿಮರು ಮೆಕ್ಕಾಗೆ ಬಂದಾಗ ಅವರ ಮೇಲೆ ಹಲ್ಲೆ ಮಾಡುತ್ತಿದ್ದರು. ಪೈಗಂಬರರಿಗೆ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ಅವರು ಮೆಕ್ಕಾದ ಜನರ ಜೊತೆ ಒಂದು ಒಪ್ಪಂದವನ್ನು 'ಹುದೇಬಿಯಾ' ಎಂಬ ಸ್ಥಳದಲ್ಲಿ ಮಾಡಿಕೊಂಡರು. ಈ ಒಪ್ಪಂದ 'ಸುಲಾಹಾವಾ ಹುದೇಬಿಯಾ' ಎಂದು ಪ್ರಸಿದ್ಧವಾಗಿದೆ. ಆ ಒಪ್ಪಂದದಿಂದ ಹೆಚ್ಚಿನ ಲಾಭ ವಿರೋಧಿಗಳಿಗೇ ಆಗುತ್ತಿತ್ತು. ಆದರೂ ಪೈಗಂಬರರು ಒಪ್ಪಿದರು! ನಿರಕ್ಷರಿಗಳಾದ ಅವರು ಅಂಕಿತಕ್ಕಾಗಿ 'ಅಲ್ಲಾ ರಸೂಲ್ ಮುಹಮ್ಮದ್' ಎಂದು ಕೆತ್ತಿದ ಮೊಹರನ್ನು ಬಳಸುತ್ತಿದ್ದರು. ಒಪ್ಪಂದಕ್ಕೆ ಆ ಮೊಹರ ಅನ್ನು ಬಳಸಿದಾಗ ಮೆಕ್ಕಾದವರು ರಸೂಲ್ (ಅಲ್ಲಾಹನ ಸಂದೇಶವಾಹಕ) ಶಬ್ದಕ್ಕೆ ತಕರಾರು ತೆಗೆದರು. ರಸೂಲ್ ಆಗಿದ್ದ ಮುಹಮ್ಮದರು ಆ ಶಬ್ದವನ್ನು ತೆಗೆದುಹಾಕಿದರು. ಇಂಥ ಘಟನೆಗಳಿಂದ ಮತ್ತು ಒಪ್ಪಂದದಲ್ಲಿ ವಿರೋಧಿಗಳ ಕೈ ಮೇಲಾಗಿದ್ದರಿಂದ ಅವರ ಅನುಯಾಯಿಗಳಿಗೆ ಬೇಸರವಾಗಿತ್ತು. "ಮುಂದಿನ ದಿನಗಳಲ್ಲಿ ಎಲ್ಲ ಒಳ್ಳೆಯದಾಗುತ್ತದೆ" ಎಂದು ಪೈಗಂಬರರು ಸಮಾಧಾನ ಪಡಿಸಿದರು. ಅವರ ಶಾಂತಿ ಮತ್ತು ಸಹನೆಯಿಂದಾಗಿ ಈ ಒಪ್ಪಂದವಾಯಿತು. ಮುಂದೆ ಈ ಎರಡೂ ಕೋಮುಗಳ ಮಧ್ಯೆ ಯುದ್ಧ ಮತ್ತು ಹೊಡೆದಾಟಗಳು ನಿಂತವು. ನಂತರದ ದಿನಗಳಲ್ಲಿ ಮೆಕ್ಕಾದ ಬಹುಪಾಲು ಜನರು ಪೈಗಂಬರರ ವ್ಯಕ್ತಿತ್ವಕ್ಕೆ ಮಾರುಹೋಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಲಿಂಗಾಯತ ಧರ್ಮದ ಉಳಿವಿಗಾಗಿ ತಾವು ಕೂಡ ತಮ್ಮ ಸಂಶೋಧನೆಯ ಫಲವನ್ನು 'ಮುಂದೆ ಒಳ್ಳೆಯದಾಗುವುದು ಮತ್ತು ಜನ ನಮ್ಮ ಸಂಶೋಧನೆಯನ್ನು ಸ್ವೀಕರಿಸುವರು' ಎಂಬ ನಂಬಿಕೆಯೊಂದಿಗೆ ತಾವು ತ್ಯಾಗ ಮಾಡುವುದು ಅವಶ್ಯವಾಗಿದೆ. ಇಲ್ಲದಿದ್ದರೆ ವಚನಾಂಕಿತ ತಿದ್ದಿದ್ದನ್ನೇ ಮುಂದೆ ಮಾಡಿಕೊಂಡು ಪಟ್ಟಭದ್ರರು ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂದು ಸಂವಿಧಾನದ ಮಾನ್ಯತೆ ಪಡೆಯುವುದನ್ನು ತಪ್ಪಿಸುವಲ್ಲಿ ಸಫಲರಾಗುವರು. 2021ನೇ ಜನಗಣತಿಯಲ್ಲಿ ಮತ್ತೆ ಯಥಾಪ್ರಕಾರ 'ಲಿಂಗಾಯತ' ನಗಣ್ಯವಾಗುವುದು.

ಲಿಂಗಾಯತವು ಸಂವಿಧಾನಾತ್ಮಕ ಸ್ವತಂತ್ರ ಧರ್ಮವಾಗುವುದಕ್ಕೆ ಇದು ಕೊನೆಯ ಅವಕಾಶ. ಪ್ರತಿಯೊಬ್ಬರು ಈ ಕರೆಗೆ ಮಾತ್ರ ಗಮನ ಹರಿಸುವುದು ಕಾಲದ ಕರೆಯಾಗಿದೆ.

ಶರಣುಗಳೊಂದಿಗೆ,
● ರಂಜಾನ್ ದರ್ಗಾ

ಲಿಂಗಾಯತವು ಸ್ವತಂತ್ರ ಧರ್ಮವಲ್ಲವೆಂಬ ಚಿಮೂ ವಾದಕ್ಕೆ ಉತ್ತ





ಜುಲೈ 1, 2017ರಂದು ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕೀಯ ಪುಟದಲ್ಲಿ 'ಲಿಂಗಾಯತವು ಪ್ರತ್ಯೇಕ ಸ್ವತಂತ್ರ ಧರ್ಮವೇ?' ಎಂಬ ನನ್ನ ಲೇಖನ ಪ್ರಕಟವಾಗಿತ್ತು, ಅದಕ್ಕೆ ಪ್ರತಿಕ್ರಿಯೆ ಎನ್ನುವಂತೆ ಡಾ ಚಿದಾನಂದ ಮೂರ್ತಿಯವರು 13 ಪುಟಗಳ ಒಂದು ಲೇಖನವನ್ನು ನನಗೆ ಕಳಿಸಿದ್ದಾರೆ. ಅದು 21 ಜೂನ್ 2017ರಂದು ಮುಖ್ಯಮಂತ್ರಿಗಳ ಹೇಳಿಕೆಯನ್ನು ಖಂಡಿಸಿ ಅವರು ನಡೆಸಿದ ಪತ್ರಿಕಾಗೋಷ್ಠಿಯ ಲಿಖಿತ ಪ್ರತಿಯಾಗಿದೆ. ನನ್ನ ಲೇಖನಕ್ಕಿಂತ ಮೊದಲೇ ಅದರ ಅಂಶಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಅದರ ತಲೆಬರಹ 'ವೀರಶೈವರು ಹಿಂದೂಗಳಲ್ಲ ಎಂಬುದು ಅವಿವೇಕದ ವಾದ' ಎಂದಿದೆ. ಅದರಲ್ಲಿನ 'ಅವಿವೇಕ'ದಂತಹ ಪದಪ್ರಯೋಗವು ಡಾ.ಚಿದಾನಂದ ಮೂರ್ತಿಯವರಂಥ ಎತ್ತರದ ವ್ಯಕ್ತಿಗೆ ಶೋಭೆ ತರುವಂಥದಲ್ಲ. ಹಿಂದೊಮ್ಮೆ ವಿಧಾನಸೌಧದಲ್ಲಿ ಸರ್ಕಾರದಿಂದ ದೇವರ ದಾಸಿಮಯ್ಯನ ಜಯಂತಿಯನ್ನು ಆಚರಿಸುತ್ತಿದ್ದಾಗ ಅದನ್ನು ವಿರೋಧಿಸಿ ತುಂಬಿದ ಸಭೆಯಲ್ಲಿ ಮೂರ್ತಿಗಳು ಹುಚ್ಚರಂತೆ ಘೋಷಣೆ ಕೂಗಿದ್ದನ್ನು ಸಾರ್ವಜನಿಕರು ಮರೆತಿಲ್ಲ.

ಚಿದಾನಂದ ಮೂರ್ತಿಯವರು ಪಂಚಪೀಠಗಳ ಮುಖವಾಣಿಯಂತೆ ವರ್ತಿಸುತ್ತಿದ್ದಾರೆ. ಲಿಂಗಾಯತ ಮತ್ತು ವೀರಶೈವದ ನಡುವಿನ ತಿಕ್ಕಾಟಕ್ಕೆ ಸಂಬಂಧಿಸಿ 1998ರಲ್ಲಿ 'ವಚನಶೋಧ' ಎಂಬ ತಮ್ಮ ಗ್ರಂಥದಲ್ಲಿ ಸಿದ್ಧಾಂತ ಶಿಖಾಮಣಿಯ ಕಾಲಮಾನದ ಬಗ್ಗೆ ಬರೆಯುತ್ತಾ "ಸಿದ್ಧಾಂತ ಶಿಖಾಮಣಿಯ ಕಾಲ ಕ್ರಿ.ಶ. 1160-80ಕ್ಕಿಂತ ನಿಶ್ಚಿತವಾಗಿಯೂ ಹಿಂದೆಯಲ್ಲ, ಬಹುಶಃ 13-14ನೇ ಶತಮಾನದ ಕೃತಿ" ಎಂದು ಬರೆದಿದ್ದರು. ಮರುವರ್ಷ 1999ರಲ್ಲಿ ಅವರ ಗುರುಗಳೂ, ಪಂಚಪೀಠಗಳಲ್ಲಿ ಒಂದಾದ ಕಾಶೀ ಪೀಠದ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಯವರು 'ಸಿದ್ಧಾಂತ ಶಿಖಾಮಣಿ ಸಮೀಕ್ಷಾ' ಎಂಬ ತಮ್ಮ ಪಿಎಚ್.ಡಿ. ಪ್ರಬಂಧವನ್ನು ಪ್ರಕಟಿಸಿ ಸಿದ್ಧಾಂತ ಶಿಖಾಮಣಿಯು ರಾಮಾಯಣಕ್ಕಿಂತ ಹಳೆಯ ಗ್ರಂಥ ಎಂಬ ಅಭಿಪ್ರಾಯವನ್ನು ತೇಲಿಬಿಟ್ಟರು. ಆಗ ಪೇಚಿಗೆ ಸಿಲುಕಿದ ಚಿದಾನಂದ ಮೂರ್ತಿಯವರು 2000ದಲ್ಲಿ 'ವೀರಶೈವಧರ್ಮ: ಭಾರತೀಯ ಸಂಸ್ಕೃತಿ' ಎಂಬ ಇನ್ನೊಂದು ಗ್ರಂಥವನ್ನು ಬರೆದರು. ಅದರಲ್ಲಿ ಅವರ ಅಭಿಪ್ರಾಯ ಹೀಗಿದೆ: "ನಾನೇನೋ ಸಿದ್ಧಾಂತ ಶಿಖಾಮಣಿಯ ಕರ್ತೃ ಬಸವನ ಹಿರಿಯ ಸಮಕಾಲೀನನೆಂದು, ಅದು ಬಸವನ ಕಾಲದಲ್ಲೇ ರಚಿತವಾಗಿದ್ದು, ಬಸವನ ಅಧ್ಯಯನಕ್ಕೆ ಲಭ್ಯವಾಗಿತ್ತೆಂದು ಸಾಧಾರಣವಾಗಿ ತರ್ಕಿಸಿದ್ದೇನೆ". ಹೀಗಿದೆ ಅವರ ಬೌದ್ಧಿಕ ಪ್ರಾಮಾಣಿಕತೆ! ಉಪಜಾತಿಯ ಅಭಿಮಾನ ಮತ್ತು ಗುರುಸೇವಾ ಭಾವನೆಗಳು ಅವರು ಉಲ್ಟಾಹೊಡೆಯಲು ಕಾರಣವಾಗಿರಬಹುದು! 2003ರಲ್ಲಿ ಕಾಶೀ ಶ್ರೀಗಳ ಮತ್ತು ಚಿದಾನಂದ ಮೂರ್ತಿಯವರ ಬದಲಾದ ಅಭಿಪ್ರಾಯವು ಸಂಪೂರ್ಣವಾಗಿ ಸತ್ಯಕ್ಕೆ ದೂರವೆಂದು ಕುಂದೂರಿನ ಇಮ್ಮಡಿ ಶಿವಬಸವ ಶ್ರೀಗಳು ತಮ್ಮ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ: ನಿಜದ ನಿಲುವು' ಎಂಬ ಗ್ರಂಥದಲ್ಲ ಸಿದ್ಧಪಡಿಸಿದ್ದಾರೆ!

ಚಿದಾನಂದ ಮೂರ್ತಿಯವರ ವಾದಗಳಿಗೆ ಉತ್ತರಿಸದಿದ್ದರೆ ಅವನ್ನು ನಾನು ಒಪ್ಪಿದ್ದೇನೆಂದು ಅರ್ಥೈಸುವ ಸಾಧ್ಯತೆಯಿದೆ. ಅವರು ಕನ್ನಡ ಸಾಹಿತ್ಯದ ಮಹಾನ್ ಸಂಶೋಧಕರು. ಆದ್ದರಿಂದ ಸಾರ್ವಜನಿಕರು ಅವರ ವಾದವು









ಸತ್ಯವೆಂದು ತಿಳಿಯುವ ಸಾಧ್ಯತೆಯೂ ಇದೆ. ತದ್ವಿರುದ್ಧವಾಗಿ, ಅವರ ವಾದದ ಪ್ರತಿಯೊಂದು ಬಿಂದುವೂ ಸತ್ಯಕ್ಕೆ ಮಾಡುತ್ತಿರುವ ಘೋರ ಅನ್ಯಾಯವಾಗಿದೆ. 2000ದಿಂದ ಬಸವಣ್ಣನ ಬಗ್ಗೆ ಅವರು ಅದೇ ತರಹದ ವಾದಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸುಳ್ಳೊಂದನ್ನು ಪದೇ ಪದೇ ನೂರಾರು ಸಲ ಹೇಳಿದರೆ ಅದನ್ನು ಜನರು ಸತ್ಯವೆಂದು ನಂಬುತ್ತಾರೆ ಎಂದು ಅವರು ನಂಬಿದಂತಿದೆ.

ಡಾ.ಎಸ್.ಎಂ. ಜಾಮದಾರ,
ಐ.ಎ.ಎಸ್ (ನಿವೃತ್ತ)

ಡಾ. ಚಿದಾನಂದ ಮೂರ್ತಿಯವರು ನನಗೆ ಕಳಿಸಿದ ಪತ್ರದಲ್ಲಿ ಅವರ ಸ್ವತಂತ್ರವಾದ ವಾದಗಳೇ ಇಲ್ಲ! ಬದಲಿಗೆ ಅದರ ಎರಡುಮೂರಾಂಶ ಭಾಗವು ಮಠಾಧಿಪತಿಗಳ ಮತ್ತು ಕೆಲವು ಪ್ರಸಿದ್ಧ ವ್ಯಕ್ತಿಗಳ ಅಭಿಪ್ರಾಯಗಳನ್ನು ಹೊಂದಿದೆ. ಪ್ರಮುಖ ಮಠಾಧಿಪತಿಗಳಲ್ಲಿ ರಂಭಾಪುರಿ ಪೀಠದ ಪೂಜ್ಯ ಪ್ರಸನ್ನ ರೇಣುಕರ ಹೇಳಿಕೆ, ಕೇದಾರ ಪೀಠದ ಪೂಜ್ಯ ರಾವಲ್ ಭೀಮಾಶಂಕರ ಸ್ವಾಮಿಗಳ ಹೇಳಿಕೆ, ಕಾಶೀ ಪೀಠದ ಪೂಜ್ಯ ಚಂದ್ರಶೇಖರ ಶಿವಾಚಾರ್ಯರ ಹೇಳಿಕೆ, ಶ್ರೀಶೈಲ ಪೀಠದ ಪೂಜ್ಯ ಉಮಾಪತಿ ಪಂಡಿತಾರಾಧ್ಯರ ಹೇಳಿಕೆ, ದಾವಣಗೆರೆ ಪೂಜ್ಯ ಸದ್ಯೋಜಾತ ಸ್ವಾಮಿಗಳ ಹೇಳಿಕೆ, ಪೂಜ್ಯ ಲಿಂಗೈಕ್ಯ ಹಾನಗಲ್ ಕುಮಾರಸ್ವಾಮಿಗಳ ಹೇಳಿಕೆ, ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳ ಹೇಳಿಕೆ, ದಿವಂಗತ ಸಿದ್ಧಯ್ಯ ಪುರಾಣಿಕರ ಹೇಳಿಕೆಗಳಿವೆ. ಇವರೆಲ್ಲರೂ ಪಂಚಪೀಠಗಳಿಗೆ ಸಂಬಂಧಿಸಿದವರೆಂದು ಬೇರೆ ಹೇಳಬೇಕಿಲ್ಲ, ಅವರೇ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂದು ಹೇಳುವವರು. ಪಂಚಾಚಾರ್ಯರೇ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರೆಂದೂ, ಲಿಂಗಾಯತವು ಹಿಂದೂ ಧರ್ಮದ ಒಂದು ಭಾಗವೆಂದೂ, ಲಿಂಗಾಯತರು ವೇದ, ಆಗಮ, ಉಪನಿಷತ್ತು, ಬ್ರಾಹ್ಮಣಕ, ಅರಣ್ಯಕಗಳನ್ನು ಒಪ್ಪುತ್ತಾರೆಂದೂ ವಾದಿಸುವವರು ಮತ್ತು ಉಪಜಾತಿಯಿಂದ ಜಂಗಮರು. ಚಿದಾನಂದ ಮೂರ್ತಿಗಳು ಅದೇ ಗುಂಪಿನವರೆಂಬುದು ಬಹುತೇಕರಿಗೆ ಗೊತ್ತಿದೆ. ಇದು ಓತಿಕಾಟದ ಜಗಳದಲ್ಲಿ ಬೇಲಿಯೇ ಓತಿಕಾಟಿಗೆ ಸಾಕ್ಷಿಯೆಂಬಂತೆ ಭಾಸವಾಗುತ್ತಿದೆ!

ವೀರಶೈವ/ಲಿಂಗಾಯತರಲ್ಲದ ಕೆಲವು ಗಣ್ಯರ ಹೇಳಿಕೆಗಳನ್ನೂ ಮೂರ್ತಿಯವರು ನೀಡಿದ್ದಾರೆ. ಬಹಳ ವಿಚಿತ್ರವೆಂದರೆ ಸ್ವಾಮಿ ವಿವೇಕಾನಂದರ ಹೇಳಿಕೆ, ಗಾಂಧೀಜಿಯವರ ಹೇಳಿಕೆ, ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರ ಹೇಳಿಕೆ, ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಹೇಳಿಕೆ, ಪೂಜ್ಯ ಶ್ರೀ ಪೇಜಾವರ ಸ್ವಾಮಿಗಳ ಹೇಳಿಕೆ, ಶ್ರೀ ಶಿವರಾಮ ಕಾರಂತರ ಹೇಳಿಕೆ, ಶ್ರೀ ಆಲೂರ ವೆಂಕಟರಾವ್ ಅವರ ಹೇಳಿಕೆ, ರಾಮಕೃಷ್ಣ ಆಶ್ರಮದ ಸ್ವಾಮಿ ಹರ್ಷಾನಂದ ಅವರ ಹೇಳಿಕೆಗಳು ಯಾವುದೇ ರೀತಿಯಲ್ಲಿ ಲಿಂಗಾಯತಕ್ಕೆ ಅಥವಾ ವೀರಶೈವಕ್ಕೆ ಅಥವಾ ಹಿಂದೂ ಧರ್ಮ ... ಲಿಂಗಾಯತದ ನಡುವಿನ ಸಂಬಂಧಕ್ಕೆ ಸಂಬಂಧಿ... ಇಲ್ಲ, ಅವರೆಲ್ಲ ಕೇವಲ ಹಿಂದೂ ಧರ್ಮದ ವಿಶೇಷ... ಬೇರೆ ಬೇರೆ ಸಂದರ್ಭಗಳಲ್ಲಿ ಹಾಡಿಹೊಗಳಿದ... ಹೊರತು ಲಿಂಗಾಯತ/ವೀರಶೈವ ಧರ್ಮ ಮತ್ತು ... ಧರ್ಮಗಳನ್ನು ಕುರಿತು ತುಲನಾತ್ಮಕವಾಗಿ ಅವ... ಚಕಾರ ಶಬ್ದವನ್ನೂ ಎತ್ತಿದ್ದು ಆ ಉದ್ಧರಣಗಳಲ್ಲಿ ... ಇಲ್ಲ! ಆದ್ದರಿಂದ ಅವುಗಳ ವಿಶ್ಲೇಷಣೆ ಅನಗತ್ಯ...


ಆದರೆ ಮುಖ್ಯ ಪ್ರಶ್ನೆಗಳಿಗೆ ಸಂಬಂಧವೇ ... ಇಂತಹ ಉದ್ಧರಣಗಳನ್ನು ಚಿದಾನಂದ ಮೂರ್ತಿ... ಏಕೆ ನೀಡಿದ್ದಾರೆ? ಉತ್ತರ ಬಹಳ ಸರಳ: ತಮ್ಮ ಅಪಾ... ಓದಿನ ಪ್ರದರ್ಶನ ಮತ್ತು ಅಮಾಯಕರನ್ನು ದಾರಿ ತ... ಉದ್ದೇಶ ಅದರಲ್ಲಿದೆ ಎನ್ನದೇ ಗತಿಯಿಲ್ಲ, ಲ... ಭಾಷೆಯಲ್ಲಿ ಇಂಥ ವಾದಕ್ಕೆ 'ಆರ್ಗ್ಯುಮೆಂಟಮ್ ... ಹಾಮಿನಮ್' ಎನ್ನುತ್ತಾರೆ. ಅಭಿಪ್ರಾಯವನ್ನು ವಿ... ಅರ್ಥೈಸಿ ಒಪ್ಪಬೇಕೇ ಹೊರತು ಯಾರ ಅಭಿಪ್ರಾಯ... ಎಂಬುದನ್ನು ನೋಡಿ ಒಪ್ಪುವುದು ಅಥವಾ ತಿರಸ್ಕರಿಸ... ಬುದ್ಧಿವಂತರ ಲಕ್ಷಣವಲ್ಲ.

ವೀರಶೈವವು ಪಂಚಾಚಾರ್ಯರು ಹೇಳುವಂತೆ ... ಧರ್ಮದ ಭಾಗವಾಗಿದ್ದರೆ ಅದು ಎ... ಲಿಂಗಾಯತವಾಗದು. ಲಿಂಗಾಯತ-ವೀರಶೈವ ... ಸಮಸ್ಯೆ ಇಂದು ನಿನ್ನೆಯದಲ್ಲ; ಅದು ಆರು ಶತಮಾನ... ಅಂತ್ಯ ಕಾಣದ ಸಮಸ್ಯೆ. ಆ ಸಮಸ್ಯೆಯನ್ನು ಸೃಷ್ಟಿಸಿ... ವಿವಿಧ ಪ್ರಕಾರದ ಹಿಂದೂ ಶೈವ ಪಂಥಗಳಿಂದ ... ಬಸವಣ್ಣನ 'ಲಿಂಗಾಯತ'ವನ್ನು ಸೇರಿದ ಜನರು. ... ಕಾಳಾಮುಖಿಗಳು, ಪಾಶುಪತ್ಯರು, ಕಾಪಾ... ಲಕುಲೀಶರು, ಕೆಲವು ನಾಥಪಂಥಿಗಳು ಮತ್ತು ... ಆರಾಧ್ಯ ಶೈವ ಬ್ರಾಹ್ಮಣರು ಪ್ರಮುಖರು. ಆದರೆ 1... ಶತಮಾನದ ಅಂತ್ಯದ ಸುಮಾರಿಗೆ ಮೇಲೆ ... ಮೊದಲನೆಯ ಐದು ಪಂಥಿಕರು ಬಹುತೇಕ ಬಸವ... ಸಂಪೂರ್ಣ ಒಪ್ಪಿಕೊಂಡು ತಮ್ಮ ಮೂಲ ರೂ... ಕಳೆದುಕೊಂಡು ಲಿಂಗಾಯತದ ಇಂದಿನ 'ವಿರಕ್ತ ಮಠ... ಪರಿವರ್ತನೆಗೊಂಡರು. ಆದ್ದರಿಂದಲೇ ವಿರಕ್ತ ಮ... ಹೆಚ್ಚಾಗಿ ಬಸವಣ್ಣನ ತತ್ವಗಳನ್ನು ಪಾಲಿಸುತ್ತಿವೆ ... 'ವೀರಶೈವ'ರ ಪಂಚಾಚಾರವನ್ನು ಆದಷ್ಟು ... ಬದಿಗಿಡಲು ಪ್ರಯತ್ನಿಸುತ್ತವೆ. ಆದರಿಂದಲೇ ಉದ್ಭವ... ಗುರು-ವಿರಕ್ತರ ಸಮಸ್ಯೆ!

ಆದರೆ ಆಂಧ್ರದ ಆರಾಧ್ಯ ಬ್ರಾಹ್ಮಣರು ತಮ್ಮ ... ಬ್ರಾಹ್ಮಣ್ಯವನ್ನೂ ಬಿಡದೇ, ಬಸವಣ್ಣ ಮತ್ತು ಶರಣರು ... 'ಲಿಂಗಾಯತ'ವನ್ನೂ ಪರಿಪೂರ್ಣವಾಗಿ ಪಾಲಿಸದೇ ... ಸೇರಿಸಿ ಬಸವ ಧರ್ಮವನ್ನು ಹದಗೆಡಿಸಿಬಿಟ್ಟರು. ... ಪ್ರಾಬಲ್ಯವನ್ನು ಸಾಧಿಸಲು ಯಾವುದೇ ಐತಿಹಾಸಿಕ ಆಧಾ... ಕಟ್ಟುಕತೆಗಳನ್ನು ಆಧರಿಸಿದ ಪಂಚಪೀಠಗಳನ್ನು ಸೃಷ್ಟಿ... 'ವೀರಶೈವ'ವೆಂಬ ಹೊಸ ವಾದವನ್ನು ನಿರ್ಮಿಸಿ... ಸಮಸ್ಯೆಯನ್ನು ಸೃಷ್ಟಿಸಿದ್ದಾರೆ. ವಿರಕ್ತ ಮಠಗಳ ಯತಿ... ದಾರಿತಪ್ಪಿಸುವ ಕಾರ್ಯಗಳನ್ನು ಇಪ್ಪತ್ತನೆಯ ಶತ... ಆದಿಯಿಂದ ಪಂಚಪೀಠದ ಪ್ರವರ್ತಕರು ಪ್ರಾರಂಭ... ಅದು ಹೇಗೆ ಎಂಬುದನ್ನು ಮುಂದೆ ವಿಶ್ಲೇಷಿಸಲಾಗಿದೆ. ... ನಿರ್ಮಿಸಿದ ಆಧ್ವಾನಗಳು ಹೇಗಿವೆ ನೋಡಿ:

(1) "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳ... ಆಗಮದ ಮೂಗು ಕೊಯ್ಯುವೆ" ಎಂದವನು ಬ... ಮುಂದುವರೆದು "ವೇದವೆಂಬುದು ಓದಿನ ... ಪುರಾಣವೆಂಬುದು ಪುಂಡರ ಗೋಷ್ಠಿ" ಎಂದ... ಶರಣರೇ. "ಸ್ಮೃತಿಗಳು ಸಮುದ್ರದ ಪಾಲಾಗಲಿ, ಶ್ರು... ವೈಕುಂಠವ ಸೇರಲಿ, ಆಗಮಗಳು ವಾಯುವ ಹೊ... ಎಮ್ಮ ನುಡಿ ಮಹಾಲಿಂಗದ ಗ್ರಂಥಿಯಾಗಲಿ" ... ಸಿದ್ಧರಾಮಯ್ಯನ ಧರ್ಮದಲ್ಲಿ ವೇದ, ಆಗಮ,





...ರಾಣ, ಉಪನಿಷತ್ತುಗಳನ್ನು ಪಂಚಪೀಠಗಳು ಸೇರಿಸಿ ...ದ್ದವು. ಆದ್ದರಿಂದಲೇ ವೇದ ಮತ್ತು ಶೈವಾಗಮಗಳನ್ನು ...ಧರಿಸಿದ ಸಿದ್ಧಾಂತ ಶಿಖಾಮಣಿಯನ್ನು ತಮ್ಮ ...ಮೂಲಗ್ರಂಥವೆಂದು ಅವರು ವಾದಿಸುತ್ತಿದ್ದಾರೆ. ಅದು ...ನೆಯ ಶತಮಾನದಲ್ಲಿ ಬರೆದ ಗ್ರಂಥವೆಂಬುದಕ್ಕೆ ಆ ...ಥದಲ್ಲಿ ಅದರ ಲೇಖಕನು ನೀಡಿದ ಆಧಾರಗಳೇ ಸಾಕು!

(2) 'ವರ್ಣಾಶ್ರಮ' ಸಿದ್ಧಾಂತವನ್ನು ಆಧರಿಸಿದ 'ಜಾತಿ' ...ದ್ಧತಿಯನ್ನೂ, ಜಾತಿಯನ್ನು ಆಧರಿಸಿದ ಕರ್ಮ ...ದ್ಧಾಂತವನ್ನೂ, ಕರ್ಮ ಸಿದ್ಧಾಂತವನ್ನು ಆಧರಿಸಿದ 'ಪಾಪ' ...ತ್ತು 'ಪುಣ್ಯ'ಗಳನ್ನೂ, ಪಾಪ-ಪುಣ್ಯಗಳನ್ನು ಆಧರಿಸಿದ ...ರ್ಗ' ಮತ್ತು 'ನರಕ'ಗಳನ್ನೂ, ಸ್ವರ್ಗ-ನರಕಗಳನ್ನು ಆಧರಿಸಿದ ...ನ್ಮ-ಪುನರ್ಜನ್ಮಗಳನ್ನೂ ಲಿಂಗಾಯತವು ಸಂಪೂರ್ಣವಾಗಿ ...ಸ್ಕರಿಸುತ್ತದೆ. ಇವುಗಳಿಗೆ ಸಂಬಂಧಿಸಿದ ಶರಣರ ಭಾಷೆ ...ಗಿದೆ ನೋಡಿ: "ಮರ್ಮವನ್ನು ಅರಿದವಂಗೆ ಕರ್ಮವಿಲ್ಲ" ...ಬುದು ಚೆನ್ನಬಸವಣ್ಣ, "ಮನದೊಳಗೆ ಘನ ವೇದ್ಯವಾದ ...ಳಿಕ ಪುಣ್ಯವಿಲ್ಲ ಪಾಪವಿಲ್ಲ" ಎಂಬುದು ಅಲ್ಲಮನ ...ವಾಚ. ಬಸವಣ್ಣ ಹೇಳಿದ್ದು: "ಇಹಲೋಕ ಪರಲೋಕ ...ಬೇರಿಲ್ಲ ಕಾಣಿರೊ, ಸತ್ಯವ ನುಡಿವುದೇ ಸ್ವರ್ಗಲೋಕ, ...ಸತ್ಯವ ನುಡಿವುದೇ ನರಕಲೋಕ". "ಇಹಲೋಕವೆಂದೇನು ...ಪರಲೋಕವೆಂದೇನು...ನಾನು ನೀನಾದ ಬಳಿಕ" ಎಂಬುದು ...ದ್ದಾಮನ ನಂಬಿಕೆ. "ಇಹಲೋಕ ಪರಲೋಕ ತಾನಿರ್ದಲ್ಲಿ" ...ಎಂಬುದು ಮತ್ತೆ ಅಲ್ಲಮನ ಮಾತು. "ಹುಟ್ಟುವಾತ ...ನಲ್ಲವಯ್ಯಾ, ಹೊಂದುವಾತ ನಾನಲ್ಲವಯ್ಯಾ, ನಿಜನರಿದ ...ಳಿಕ ಮತ್ತೆ ಹುಟ್ಟಲುಂಟೇ?" ಎಂಬುದು ಆದಯ್ಯನ ...ವಾದ. ಹೀಗೆ ಶರಣರು ಹಿಂದೂ ಧರ್ಮದ ಮೂಲ ...ತತ್ವಗಳನ್ನೇ ತಿರಸ್ಕರಿಸಿದವರು. ಅವರೇ ಲಿಂಗಾಯತದ ...ಸಂಸ್ಥಾಪಕರು!

ಆದರೆ ವೇದ ಪುಣೀತ ವರ್ಣಾಶ್ರಮ ಧರ್ಮದಿಂದ ...ಹುಟ್ಟಿದ ಕರ್ಮ ಸಿದ್ಧಾಂತವನ್ನು, ಅದರಿಂದ ಹುಟ್ಟಿದ ...ಜಾತಿ ಪದ್ಧತಿಯನ್ನು, ಕರ್ಮ ಸಿದ್ಧಾಂತದಿಂದ ಹುಟ್ಟಿದ ...ಪಾಪ ಪುಣ್ಯಗಳನ್ನು, ಪಾಪ-ಪುಣ್ಯಗಳಿಂದ ಹುಟ್ಟಿದ ಸ್ವರ್ಗ ...ನರಕಗಳನ್ನು, ಸ್ವರ್ಗ-ನರಕಗಳಿಂದ ಹುಟ್ಟಿದ ...ಜನ್ಮ-ಪುನರ್ಜನ್ಮಗಳನ್ನು ನಂಬುವ ಹಿಂದೂ ಧರ್ಮವು ...ಮತ್ತು ಅವೆಲ್ಲವುಗಳಿಗೆ ಆಧಾರವಾದ ವೇದ ಆಗಮಗಳು ...ವೀರಶೈವರಿಗೆ ಸರ್ವಮಾನ್ಯವಾಗಿವೆ ಎಂದು ನಮ್ಮ ಘನ ...ವಿದ್ವಾಂಸರಾದ ಚಿದಾನಂದ ಮೂರ್ತಿಯವರು ಮತ್ತು ...ಶ್ರೀಪರ ಪಂಚಪೀಠಾಧ್ಯಕ್ಷರುಗಳೂ ಬಹಳ ಭಾವುಕರಾಗಿ ...ವಾದಿಸುತ್ತಾರೆ. ಹಾಗಾದರೆ ಲಿಂಗಾಯತ ಮತ್ತು ವೀರಶೈವ ...ಎರಡೂ ಒಂದೇ ಎಂಬುದು ಹೇಗೆ ಸಾಧ್ಯ? ಇದು ...ಪೂರ್ವ-ಪಶ್ಚಿಮಗಳನ್ನು ಒಂದುಗೂಡಿಸುವಂತೆ ಕಾಣುತ್ತದೆ! ...ಹಿನ್ನೆಲೆಯಲ್ಲಿ ಬಸವಣ್ಣನ ಶುದ್ಧ ಲಿಂಗಾಯತವನ್ನು ...ಕಲುಷಿತಗೊಳಿಸಿದವರು ಯಾರು? ಆ ಮೂಲಕ ಈಗಿನ ...ಸಾಮಾಜಿಕ ವೈರುಧ್ಯಗಳಿಗೆ ಗೊಂದಲಗಳಿಗೆ ಕಾರಣರಾದವರು ...ಯಾರು ಎಂಬುದು ಸ್ಪಷ್ಟವಾಗಬಹುದಲ್ಲವೇ?

...ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚಿದಾನಂದ ...ಮೂರ್ತಿಯವರು "1904ರಷ್ಟು ಹಿಂದೆಯೇ ವೀರಶೈವ ...ಮಹಾಸಭೆಯು 'ವೀರಶೈವರು ಹಿಂದೂಗಳು' ಎಂಬ ...ನಿರ್ಣಯ ತೆಗೆದುಕೊಂಡಿತ್ತು... ಆದರೆ 1940ರಲ್ಲಿ ಅದೇ ...ಮಹಾಸಭೆಯು ಉಲ್ಟಾಹೊಡೆದು ವೀರಶೈವರು ...ಹಿಂದೂಗಳಲ್ಲವೆಂದು ನಿರ್ಣಯ ಕೈಗೊಂಡಿತು" ಎಂದು ...ಬರೆದಿದ್ದಾರೆ. ಹೌದು, 1904ರ ನಿರ್ಣಯಕ್ಕೆ ಯಾರು ...ಕಾರಣರು ಮತ್ತು ಯಾಕೆ ಎಂಬುದನ್ನು ಐತಿಹಾಸಿಕ ...ದಾಖಲೆಗಳ ಮಾಹಿತಿಯೊಂದಿಗೆ ಮುಂದೆ ವಿವರ ...ನೀಡಿದ್ದೇನೆ.

...ಮುಂದುವರೆದು, ಚಿದಾನಂದ ಮೂರ್ತಿಯವರು ...ಸಮಾಜ ಸಮಾಜದವರು, ಶಿವಾಚಾರದ ನಗರ್ತರು, ...ಸಾದಿಸ ಪೆಲ್ಲಾಳ ಗೌಡರು, ವಾಲ್ಮೀಕಿ ಸಮಾಜದ

▶▶| 10


'ಲಿಂಗಾಯತರು ಹಿಂದೂಗಳಲ್ಲವೇ ಅಲ್ಲ!' - ಪಂಡಿತಾರಾಧ್ಯ ಸ್ವಾಮಿ

ಬೀದರನಲ್ಲಿ ಇತ್ತೀಚೆಗೆ ನಡೆದ ಬಸವ ಧರ್ಮ ರ‍್ಯಾಲಿಯಿಂದ ಕರ್ನಾಟಕದ ಬಹುತೇಕ ಲಿಂಗವಂತ ಮಠಾಧೀಶರು ಒಳಗೊಳಗೆ ಸಂಭ್ರಮಿಸಿದ್ದಾರೆ. ಜನ ಸಾಮಾನ್ಯ ತಾವೇ ತಾವಾಗಿ ಒಂದು ಕಡೆ ಸಂಕಲನಗೊಂಡು ಬಸವಾದಿ ಶರಣರ ವಿಚಾರದ ತಳಹದಿಯ ಮೇಲೆ ರೂಪಿತಗೊಂಡ ಚಳವಳಿಯ ಭಾಗವಾಗಿ ಮುಂದುವರೆಯುತ್ತಿರುವುದು ಸಂತೋಷವನ್ನುಂಟುಮಾಡಿವೆ. ಈ ಸಂಗತಿ ವಿರಕ್ತ ಪರಂಪರೆಯ ಬಹುತೇಕ ಮಠಾಧೀಶರಿಗೆ ಸಂತೋಷವನ್ನುಂಟುಮಾಡಿದೆಯಾದರೂ ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳಿಗೆ ಹೆಚ್ಚಿನ ಆನಂದವನ್ನುಂಟುಮಾಡಿದೆ. ಅವರೊಂದಿಗೆ ಪತ್ರಿಕೆ ಮಾತಾಡಿದಾಗ:

ಪತ್ರಿಕೆ: ಲಿಂಗಾಯತರು ಮತ್ತು ವೀರಶೈವರು ಭಿನ್ನಭಿನ್ನವೆಂಬ ಮಾತು ಎಷ್ಟು ಸತ್ಯ?

ಪಂಡಿತಾರಾಧ್ಯ ಸ್ವಾಮಿ: ವೀರಶೈವಕ್ಕೆ ಶೈವವೇ ಮೂಲ. ಲಿಂಗಾಯತಕ್ಕೆ ಬಸವಾದಿ ಶರಣರ ವಚನಗಳ ತಳಹದಿಯೆ ಮೂಲ ಗಂಗೋತ್ರಿ. ವೀರಶೈವದಲ್ಲಿನ ಆಚಾರವಿಚಾರಗಳು ಸೈದ್ಧಾಂತಿಕವಾಗಿ ಹಾಗೂ ಆಚರಣೆಯಲ್ಲೂ ತುಂಬಾ ಭಿನ್ನಭಿನ್ನವಾಗಿವೆ. ದೇಹವೆ ದೇವಾಲಯ, ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಲಿಂಗಾಯತ ಧರ್ಮ ಸಾರಿದರೆ ವೀರಶೈವರು ಸ್ಥಾವರ ಆರಾಧಕರು. ಗುಡಿ ಗುಂಡಾರಗಳನ್ನು ಕಟ್ಟುವುದಕ್ಕೆ ಉತ್ಸಾಹ ತೋರುವವರು. ಕರ್ಮಠ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು.

ಪ್ರಶ್ನೆ: ಲಿಂಗಾಯತರು ಹಿಂದೂಗಳಲ್ಲವೆ?



ಪಂಡಿತಾರಾಧ್ಯ ಸ್ವಾಮಿ: ಖಂಡಿತವಾಗಿಯೂ ಅಲ್ಲ. ಲಿಂಗಾಯತರಿಗೂ ಹಿಂದೂಗಳಿಗೂ ಎತ್ತಣೆಂದೆತ್ತ ಸಂಬಂಧ? ಒಂದು ಪೂರ್ವ, ಇನ್ನೊಂದು ಪಶ್ಚಿಮ. ಒಂದು ಅಖಂಡ ಕತ್ತಲು. ಇನ್ನೊಂದು ಪ್ರಜ್ವಲಿಸುವ ಬೆಳಕು. ಜಾತಿಯತೆ, ವರ್ಗಭೇದ, ವರ್ಣ ಭೇದಗಳನ್ನು ಹೇಳುವುದು ಹಿಂದೂ ಧರ್ಮ. ಆ ಧರ್ಮದಲ್ಲಿ ಹೆಣ್ಣು ಮಕ್ಕಳಿಗೆ ಪುರುಷ ಸಮಾನವಾದ ಸ್ಥಾನಮಾನಗಳು ಇಲ್ಲ. ಇವತ್ತಿನವರೆಗೂ ಮಹಿಳೆ ಅಸ್ಪೃಶ್ಯಳು. ತಾವೇ ಕಟ್ಟಿದ ಗುಡಿಯಲ್ಲಿ ತಮ್ಮ ಮನೆಯ ಹೆಣ್ಣುಮಗಳೆ ಹೋಗಿ ಪೂಜೆ ಮಾಡುವ ಅಧಿಕಾರ ಅವಳಿಗೆ ಇಲ್ಲ, ಪುಣ್ಯ ಪಾಪ ಪಂಚಾಂಗ ರಾಹು ಕಾಲ ಗುಳಿಕ ಕಾಲಗಳ ಆರ್ಭಟ ಅದರಲ್ಲಿ.

ಆದರೆ ಲಿಂಗಾಯತ ಧರ್ಮ ಸ್ವತಂತ್ರ ವಿಚಾರಗಳ ತಳಹದಿಯ ಮೇಲೆ ನಿಂತಿರುವ ಧರ್ಮ. ಇಲ್ಲಿ ವರ್ಗ ವರ್ಣಗಳ ಭೇದವಿಲ್ಲ. ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂಬುದು ಇದರ ಸಿದ್ಧಾಂತ. ಮಹಿಳೆಯೂ ಇಲ್ಲಿ ಯಾವ ಭೇದಗಳಿಗೆ ಗುರಿಯಾಗಿಲ್ಲ, ಆಕೆಯೂ ಇಷ್ಟಲಿಂಗಧಾರಿಯಾಗಿ ಪೂಜೆ ಮಾಡಬಲ್ಲಳು. ಇಲ್ಲಿ ಪಂಚಾಂಗ ಕಾಲ ದಿನ ತಿಥಿ ಮಿಥಿ ಅವರನ್ನು ಕಾಡಿಸಲಾರದು.

ಪ್ರಶ್ನೆ: ಹಾಗಾದರೆ ಇಂದಿನ ಲಿಂಗಾಯತರು ಹಿಂದೂಗಳಲ್ಲವಾದರೆ ಅದರ ಟೊಂಗೆಯಾದ ವೀರಶೈವದ ಎಲ್ಲಾ ಆಚರಣೆಗಳನ್ನು ತಮ್ಮಲ್ಲಿ ರೂಢಿಸಿಕೊಂಡು ಬಂದಿದ್ದಾರಲ್ಲ!?

ಪಂಡಿತಾರಾಧ್ಯ ಸ್ವಾಮಿ: ಹಾಗೆ ನೋಡಿದರೆ ಇಂದಿನ ಬಹುತೇಕ ಲಿಂಗಾಯತರು ಕರ್ಮಠರೆ ಆಗಿದ್ದಾರೆ. ವೀರಶೈವದ ಎಲ್ಲಾ ಆಚರಣೆಗಳನ್ನು ರೂಢಿಸಿಕೊಂಡು ತಮ್ಮತನವನ್ನು ಮರೆತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರಿಗೆ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಅವರ ಅಜ್ಞಾನವನ್ನು ಬಂಡವಾಳ ಮಾಡಿಕೊಂಡ ಮಠೀಯ ಪರಂಪರೆ ಅವರನ್ನು ಶೋಷಣೆ ಮಾಡುತ್ತ ನಡೆದಿದೆ. ವಚನ ಸಾಹಿತ್ಯದ ಅಧ್ಯಯನ ಮಾತ್ರ ಅವರನ್ನು ಕತ್ತಲಿನಿಂದ ಬೆಳಕಿನೆಡೆಗೆ ಕರೆದುಕೊಂಡು ಹೋಗಬಲ್ಲುದು. ಅವರ ಅರಿವು ಅವರಿಗೆ ಗುರುವಾದಾಗ ಮಾತ್ರ ಇದು ಸಾಧ್ಯ.

'ಪ್ರತ್ಯೇಕ ಧರ್ಮ ಹೋರಾಟಕ್ಕೆ ನಾವೂ ಧುಮುಕುತ್ತೇವೆ'-ನಿಜಗುಣ ಸ್ವಾಮಿ

ತಮ್ಮ ಪ್ರಖರ ಚಿಂತನೆಗಳ ಮೂಲಕ ನಾಡಿನಾದ್ಯಂತ ಬಸವ ಪರಿಮಳವನ್ನು ಪಸರಿಸುವ ಸ್ವಾಮೀಜಿಗಳಲ್ಲಿ ಒಬ್ಬರಾದ ಪೂಜ್ಯ ಶ್ರೀ ನಿಜಗುಣ ಸ್ವಾಮೀಜಿ ನಾಡಿನ ವಿಚಾರವಾದಿಗಳಲ್ಲಿ ಒಬ್ಬರು. ಅವರ ಮಾತೂ ಸಹ ಈ ಸಂದರ್ಭದಲ್ಲಿ ಅತ್ಯಂತ ಸೂಕ್ತ ಎಂಬುದು ಅರಿತ ಪತ್ರಿಕೆ ಅವರನ್ನು ಚಿಕ್ಕದಾಗಿ ಸಂದರ್ಶಿಸಿತು:

ಪತ್ರಿಕೆ: ಲಿಂಗಾಯತರು ಹಿಂದೂಗಳಲ್ಲವೆ?

ನಿಜಗುಣ ಸ್ವಾಮಿ: ಖಂಡಿತ ಅಲ್ಲ. ಅದೊಂದು ಪ್ರದೇಶ ವಾಚಕ ಪದ. ಆ ದೃಷ್ಟಿಯಿಂದ ನೋಡಿದರೆ ಭಾರತದಲ್ಲಿ ವಾಸವಾಗಿರುವ ಮುಸ್ಲಿಂರೂ ಹಿಂದೂಗಳೆ. ಲಿಂಗಾಯತರು ಹಿಂದೂಗಳಾಗಲು ಸಾಧ್ಯವೆ ಇಲ್ಲ. ಹಿಂದೂಗಳ ಪರಂಪರೆಗೂ ಲಿಂಗಾಯತ ಧರ್ಮದ ತತ್ವಗಳಿಗೂ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತದೆ. ಯಾವುದನ್ನು ಹಿಂದೂ ಧರ್ಮ ನಂಬಿಕೆಗಳನ್ನಿಟ್ಟುಕೊಂಡು ಮುನ್ನಡೆದಿದೆಯೋ ಅದನ್ನು ಲಿಂಗಾಯತ ಧರ್ಮ ಸಾರಾಸಗಟಾಗಿ ತಿರಸ್ಕರಿಸುತ್ತದೆ.

ಲಿಂಗಾಯತ ಎಲ್ಲವನ್ನೂ ಎಲ್ಲರನ್ನೂ ಇವನಾರವ ಇವನಾರವ ಎನ್ನದೆ ಸ್ವಾಗತಿಸುವ ಹೃದಯ ವೈಶಾಲ್ಯತೆಯನ್ನು ಕಾಣುತ್ತೇವೆ. ಕಾಣದ ದೇವರ ಬಗ್ಗೆ ಇಲ್ಲಿ ಉಲ್ಲೇಖಗಳಿಲ್ಲ. ದೇವರ ಹುಡುಕುತ್ತ ಹುಡುಕುತ್ತ ಅಲೆಯುವ ಭ್ರಮೆಯನ್ನು ಲಿಂಗಾಯತ ಧರ್ಮ ಹುಟ್ಟು ಹಾಕುವುದಿಲ್ಲ, ಜಗದಗಲ ಮುಗಿಲಗಲವಾಗಿರುವ ಚೈತನ್ಯವೇ ಇಷ್ಟಲಿಂಗ. ಈ



ಇಷ್ಟಲಿಂಗ ಪೂಜೆಯೇ ಭಾವ ಪೂಜೆ. ಇದನ್ನು ಅವರು ಇವರು ಎನ್ನದೆ ಯಾರಾದರೂ ಮಾಡಬಹುದು. ಆತ್ಮಾವಲೋಕನ ಮಾಡಿಕೊಂಡು ಸಕಲ ಜೀವಪ್ರೇಮಿಯಾದ ಯಾರಾದರೂ ಈ ಧರ್ಮದಲ್ಲಿ ಬರಬಹುದು.

ಪತ್ರಿಕೆ: ಪ್ರತ್ಯೇಕ ಲಿಂಗವಂತ ಧರ್ಮಕ್ಕಾಗಿ ಈಗ ಎದ್ದಿರುವ ಕೂಗಿಗೆ ನಿಮ್ಮ ಬೆಂಬಲ ಇದೆಯೆ?

ನಿಜಗುಣ ಸ್ವಾಮಿ: ಖಂಡಿತ ನಮ್ಮದೂ ಈ ಚಳವಳಿಗೆ ಬೆಂಬಲ ಇದೆ. ಮುಂದಿನ ದಿನಗಳಲ್ಲಿ ನಾವೆಲ್ಲ ಸೇರಿ ಹೋರಾಟದ ನಕ್ಷೆಯನ್ನು ಸಿದ್ಧಪಡಿಸಿ ಅಖಾಡಕ್ಕೆ ಇಳಿಯುತ್ತೇವೆ. ಮುಖ್ಯವಾಗಿ ಈ ನಾಡಿನ ಬಹುಸಂಖ್ಯಾತರಾದ ಲಿಂಗಾಯತರು ಬಸವಾದಿ ಶರಣರ ವಚನಗಳ ಓದಿನ ಮೂಲಕ, ಅವುಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಳ್ಳಬೇಕಾಗಿದೆ.


ಪತ್ರಿಕೆ: ವೀರಶೈವ / ಲಿಂಗಾಯತದ ಬಗೆಗೆ ನಿಮ್ಮ ಅಭಿಪ್ರಾಯ?

ನಿಜಗುಣ ಸ್ವಾಮಿ: ವೀರಶೈವ ಅದರ ಹೆಸರೇ ಸೂಚಿಸುವಂತೆ ಶೈವ ಧರ್ಮದಿಂದ ಬಂದದ್ದು. ಇದು ಶೈವ ಆಚರಣೆಗಳ ಮೂಲಕವೆ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ. ಲಿಂಗಾಯತ ಧರ್ಮ ಬಸವ ಪುಣೀತವಾದ ಧರ್ಮ. 770 ಶರಣ ಗಣಗಳು ವಚನ ಚಳವಳಿಯ ಮೂಲಕ ಇದನ್ನು ಕಟ್ಟಿ ಬೆಳೆಸಿದರು. ಇತಿಹಾಸದ ಸ್ಪಷ್ಟ ತಿಳಿವಳಿಕೆ ಇಲ್ಲದ್ದರಿಂದ ಲಿಂಗಾಯತರು ವೀರಶೈವರ ಕರ್ಮಠ ಆಚರಣೆಗಳನ್ನು ತಮ್ಮವೆಂದು ಅಪ್ಪಿಕೊಂಡು ನಡೆದಿದ್ದಾರೆ. ಹೀಗಾಗಿ ಇಂದಿನ ವೀರಶೈವರೆಲ್ಲರೂ ಲಿಂಗಾಯತರೆ ಆಗಿದ್ದಾರೆ.

ಜನರ ದಿಕ್ಕು ತಪ್ಪಿಸುತ್ತಿರುವ ಮಾಧ್ಯಮಗಳು ಹಾಗೂ ಬರಹಗಾರರು

ಲಿಂಗಾಯತ ಹಿಂದೂ ಧರ್ಮದ ಭಾಗ ಅಲ್ಲ, ಅದು ಪ್ರತ್ಯೇಕ ಧರ್ಮ ಎಂಬ ಕೂಗು ಕೇಳಿ ಬರುತ್ತಲೆ ಬಹುತೇಕ ದೃಶ್ಯ ಮಾಧ್ಯಮಗಳು ತಮ್ಮ ಅಂಡಿನ ಕೆಳಗೆ ಉರಿಹತ್ತಿಕೊಂಡಂತೆ ಚೀರಾಟಕ್ಕೆ ಇಳಿದವು. ತಮ್ಮ ಸ್ಟುಡಿಯೋಕ್ಕೆ ಅಪ್ರಬುದ್ಧರಾದ ವೀರಶೈವ ಮಹಾಸಭೆಯ ವಾಗೀಶನಂಥ ಕ್ರಿಮಿಯನ್ನು ಕರೆಸುವ ಮೂಲಕ ತಮ್ಮ ದಡ್ಡತನವನ್ನು ಪ್ರದರ್ಶಿಸಿದರು. ಆರೋಗ್ಯಪೂರ್ಣವಾದ ಚರ್ಚೆಗೆ ನಾಂದಿ ಹಾಡಬೇಕಾದ ಮಾಧ್ಯಮಗಳು ಚಡ್ಡಿ ತೊಟ್ಟುಕೊಂಡೆ ಅಖಾಡಕ್ಕೆ ಇಳಿಯುತ್ತವೆ. ವಚನ ಪುಣೀತವಾದ ಲಿಂಗಾಯತ ಧರ್ಮ ಅಂದರೆ ಏನು? ಎಂದು ತಿಳಿಸುಕೊಳ್ಳಬೇಕೆಂಬ ಕನಿಷ್ಠ ಕುತೂಹಲವು ಟಿವಿ ನಿರೂಪಕರಿಗೆ ಇಲ್ಲದೆ ಹೋದದ್ದು ದುರಂತ. ಮತ್ತೊಂದು ಕಳವಳದ ಸಂಗತಿಯೆಂದರೆ ವಚನ ಪುಣೀತ ವಿಚಾರಗಳನ್ನು ಹೇಳಬೇಕೆಂದವರ ಮಾತುಗಳನ್ನು ಕೇಳುವ ಆಸಕ್ತಿಯೂ ಈ ಮೂರ್ಖರಿಗೆ ಇಲ್ಲದೆ ಹೋದದ್ದು.

ಇದಕ್ಕೆ ಮುಖ್ಯ ಕಾರಣ ಅವರೆಲ್ಲಾ ಮೈ ತುಂಬಾ ದಾರದ ಉಂಡೆಯನ್ನು ಸುತ್ತಿಕೊಂಡಿರುವುದು. ಮನುವಿನ ಮೊಮ್ಮಕ್ಕಳಾದ್ದರಿಂದ ಸಹಜವಾಗಿಯೆ ಅವರು ತಮ್ಮ ಅಸ್ತಿತ್ವಕ್ಕಾಗಿ ಒದ್ದಾಡುತ್ತಾರೆ. ಹೇಗಾದರೂ ಸೈ ಹಿಂದೂ ಧರ್ಮವನ್ನು ಉಳಿಸಿ ಬೆಳೆಸಬೇಕೆಂದು ಛಲ ತೊಟ್ಟಂತೆ ಕಾಣುತ್ತಿದೆ. ಬೇಕಂತಲೆ ಚರ್ಚೆಯ ದಾರಿ ತಪ್ಪಿಸಲು, ವೇದಿಕೆಗೆ



ಬಂದ ಒಂದಿಬ್ಬರ ಖಾಸಗಿ ಸಂಗತಿಗಳನ್ನು ಎಳೆ ತಂದು ಅವರನ್ನು ತುಚ್ಛೀಕರಿಸುವ ಹೆಬಡತನವೂ ನಡೆಯಿತು.


ಸಂಬಂಧವೇ ಇಲ್ಲದ ಚೀನಾ, ಪಾಕಿಸ್ತಾನ ಮುಂತಾದ ದೇಶಗಳು ನಮ್ಮ ಮೇಲೆ ನಡೆಸಬಹುದಾದ ಸಂಭಾವ್ಯ ದಾಳಿ ನಡೆದೆ ಬಿಟ್ಟಿತು ಎಂಬಂತೆ ಚಿತ್ರಿಸಿ ಯುದ್ಧೋನ್ಮಾದವನ್ನು ಹುಟ್ಟು ಹಾಕುತ್ತಿವೆ. ಬೇಲಿಯೇ ಎದ್ದು ಹೊಲ ಮೇಯ್ದರೆ, ನಾರಿಯೇ ತನ್ನ ಮನೆಯಲ್ಲಿ ಕಳವೊಡೆ ಇನ್ನಾರಿಗೆ ದೂರುವೆ ಎಂಬಂಥ ಸ್ಥಿತಿಯಾಗಿದೆ.

ಡಾ.ಎಂ.ಎಂ.ಕಲಬುರ್ಗಿಯವರು ಸಂಪಾದಿಸಿದ ವಚನ ಸಂಪುಟದಲ್ಲಿನ ಹೆಚ್ಚಿನ (ಅನುಮಾನಾಸ್ಪದ) ವಚನಗಳನ್ನು ಹೆಸರಿಸಿ ಸ್ವತಃ ಬಸವಣ್ಣನವರೆ ವೀರಶೈವ ಎಂಬ ಪದವನ್ನು ಅಷ್ಟು ಸಲ, ಇಷ್ಟು ಸಲ ಬಳಸಿದ್ದಾರೆ ಎಂದು ಕೋಟ್ ಮಾಡುವ ಡಾ. ಸಂಗಮೇಶ ಸೌದತ್ತಿ ಮಠ ಹಾಗೂ ಡಾ. ಎಂ.ಚಿದಾನಂದ ಮೂರ್ತಿ ಮುಂತಾದವರೆಲ್ಲ ಮನುವಾದಿ ಮೂಲಕ ಜಾತಿ ಜಂಗಮತನಕ್ಕೆ ಅಂಟಿಕೊಂಡವರು. ಸಹಜವಾಗಿಯೆ ಅವರಿಗೆ ಬಸವಾದಿ ಶರಣರ ವಚನಗಳು ಉಪಜೀವನಕ್ಕೆ ಬೇಕೆ ಹೊರತು ಬದುಕಿಗೆ ಅಲ್ಲ. ಬಸವಾದಿ ಶರಣರ ವಚನಗಳ ಮೂಲಕವೆ ಸಾಕಷ್ಟು ಹೆಸರು/ ಹಣವನ್ನು ಮಾಡಿಕೊಂಡಿರುವ ಬರಹಗಾರರು ತಮ್ಮ ಬೌದ್ಧಿಕತೆಯನ್ನು ಜಂಗಮಶಾಹಿ ವ್ಯವಸ್ಥೆಗೆ ಅಡವಿಟ್ಟಿದ್ದಲ್ಲದೆ ಕರ್ನಾಟಕದ ಲಿಂಗಾಯತರ ತಲೆಯನ್ನು ಒತ್ತಿಡಲು ಹೊಂಚುಹಾಕುತ್ತಿದ್ದಾರೆ.

ಆದರೆ ಇವರು ಹೇಳುವ ಕಾಗಕ್ಕ ಗುಬ್ಬಕ್ಕನ ಕತೆ ಕೇಳಲು ಯಾರೂ ಕುತೂಹಲಿಗರಾಗಿ ಕುಳಿತುಕೊಂಡಿಲ್ಲ ವೆಂಬುದು ಸಂತಸದ ಸಂಗತಿಯಾಗಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ

ಲಿಂಗಾಯತರು ಹಿಂದೂಗಳಲ್ಲ



09 |◀◀

ಹಿರಿಯರು, 2015ರ ಜಾತಿ ಜನಗಣತಿಯಲ್ಲಿ ತಮ್ಮನ್ನು ಹಿಂದೂ ಎಂದು ಬರೆಸಲು ಒತ್ತಾಯಿಸಿದ್ದರು. ವೀರಶೈವರ ಕಾಶೀ ಪೀಠದ ಶ್ರೀಗಳು ಮತ್ತು ಜಂಗಮರೂ ಅದೇ ಬೇಡಿಕೆಯನ್ನು ಬೆಂಬಲಿಸಿದ್ದರು" ಎಂದು ಬರೆದಿದ್ದಾರೆ. ಹೌದು, ಆದರೆ ಅಂಥ ಕೆಳಜಾತಿಯವರನ್ನು ವೀರಶೈವರು ಹೇಗೆ ನಡೆಸಿಕೊಂಡರು ಮತ್ತು ಯಾಕೆ ಎಂಬುದನ್ನೂ ಮುಂದೆ ವಿವರಿಸಿದ್ದೇನೆ. ಜಂಗಮರು ಮತ್ತು ವೀರಶೈವರ ಕಾಶೀ ಪೀಠದ ಶ್ರೀಗಳು ಹಿಂದೂ ಎಂದು ಬರೆಸಲು ಒತ್ತಾಯಿಸಿದ ಹಿನ್ನೆಲೆ ಏನು ಎಂಬುದರ ಸಂಪೂರ್ಣ ವಿವರವನ್ನು ಮುಂದೆ ಬರೆದಿದ್ದೇನೆ.

ಇವಲ್ಲದೇ ಜಾತಿಜನಗಣತಿಯ ಬಗ್ಗೆ ನಾನು ಪ್ರಜಾವಾಣಿಯಲ್ಲಿ **19-2-2015**ರಂದು ಮತ್ತು **16-3-2015**ರಂದು ಹಾಗೂ **20-5-2016** (ಕೊಪ್ಪಳ) ಬರೆದ ಲೇಖನಗಳಲ್ಲಿ ಜಾತಿಜನಗಣತಿಗೆ ಲಿಂಗಾಯತರು ಏಕೆ ವಿರೋಧಿಸುತ್ತಾರೆ ಎಂಬ ಬಗ್ಗೆ ಇನ್ನಷ್ಟು ಕಾರಣಗಳನ್ನು ನೀಡಿದ್ದನ್ನು ನೋಡಬಹುದು.

(3) 14ನೆಯ ಶತಮಾನದಿಂದ ಮೇಲೆ ವಿವರಿಸಿದ ಗೊಂದಲಗಳನ್ನು ಸೃಷ್ಟಿಸಿದವರು ಪಂಚಾಚಾರ್ಯರು. ಲಿಂಗಾಯತದಲ್ಲಿ ಲಿಂಗಧಾರಣವನ್ನು 'ಸೂತ್ರಗಳ' ಮಟ್ಟಕ್ಕೆ ಮುಟ್ಟಿಸಿ ಅದಕ್ಕೆ ಪುರೋಹಿತಶಾಹಿಯನ್ನು ಸೃಷ್ಟಿಸಿದವರು ('ಲಿಂಗಧಾರಣ ಚಂದ್ರಿಕೆ'ಯಂತಹ ಗ್ರಂಥಗಳ ಮೂಲಕ) ಆರಾಧ್ಯ ಬ್ರಾಹ್ಮಣರು. ಬಸವಣ್ಣ ಯಾರಿಗೂ ಲಿಂಗ ಕಟ್ಟಲಿಲ್ಲ (ಒಬ್ಬನನ್ನು ಬಿಟ್ಟು). ಕಟ್ಟಿಕೊಳ್ಳಲು ಯಾರಿಗೂ ಒತ್ತಾಯ ಮಾಡಲಿಲ್ಲ. ತೋಳಿನ ಬಲದಿಂದ ಲಿಂಗಾಯತ ಧರ್ಮವು ಹುಟ್ಟಲಿಲ್ಲ. ಆದರೆ ತೋಳ್ಬಲದಿಂದ ಅದನ್ನು ನಿರ್ನಾಮ ಮಾಡುವ ಪ್ರಯತ್ನಗಳು ನಡೆದವು.

ಬಸವಣ್ಣ ಯಾವುದೇ ಮಠಗಳನ್ನು ಸ್ಥಾಪಿಸಲಿಲ್ಲ, ಯಾವ ಮಠದ ಮುಖ್ಯಸ್ಥನೂ ಅವನಲ್ಲ, ಅನುಭವ ಮಂಟಪಕ್ಕೆ ಅಲ್ಲಮನನ್ನು ಅಧ್ಯಕ್ಷನನ್ನಾಗಿ ಮಾಡಿದ ಬಸವಣ್ಣನ ಮನೋಭೂಮಿಕೆಯನ್ನು ಗಮನಿಸಬೇಕು. 15ನೆಯ ಶತಮಾನದ 'ಶೂನ್ಯ ಸಂಪಾದನೆ'ಯಲ್ಲಿ ಬರುವ ಮಠಗಳೆಲ್ಲವೂ ಬಸವ ಪೂರ್ವದ ಮಠಗಳಲ್ಲ, ಈಗಿರುವ ಲಿಂಗಾಯತ ಮಠಗಳೆಲ್ಲವೂ ಬಸವಣ್ಣನ ನಂತರ ಲಿಂಗಾಯತವನ್ನು ಸೇರಿದವರ ಮಠಗಳು.

ಬಸವಣ್ಣನ 'ಜಂಗಮ'ವನ್ನು ಜಾತಿಯ ರೂಪಕ್ಕೆ ತಿರುಗಿಸಿ, ಆ ಜಾತಿಯವರಿಗೆ ಪುರೋಹಿತಶಾಹಿಯ ಅಧಿಕಾರವನ್ನು ನೀಡಿದವರು ಪಂಚಾಚಾರ್ಯರು. ಬಸವಣ್ಣನವರು ಪುರೋಹಿತಶಾಹಿಯನ್ನು ಬಗ್ಗುಬಡಿದರೆ, ಪಂಚಪೀಠಗಳು ತಮ್ಮದೇ ಆದ ಪುರೋಹಿತಶಾಹಿಯನ್ನು ಸೃಷ್ಟಿಸಿ ಅವರಿಗೆ 'ಪಟ್ಟದ ದೇವರು', 'ಶಾಖಾ ಮಠಗಳು' ಇತ್ಯಾದಿ ಹೆಸರಿಟ್ಟರು. ಅವರ ಅನುಯಾಯಿಗಳಿಗೆ 'ಪೂಜ್ಯವಾನ' ಆದವರು ಪಂಚಪೀಠಗಳಿಗೆ ವಿಧೇಯರಾದ ಇಂದಿನ ಹಿರೇಮಠ, ಚಿಕ್ಕಮಠದ ಸ್ವಾಮಿಗಳು!


(4) ವಿಜಯನಗರದ ಅರಸರ ಕಾಲದಿಂದ (14ನೇ ಶತಮಾನ) ಸುಮಾರು 1940ರವರೆಗೆ (ಐದು ಶತಮಾನಗಳಲ್ಲಿ) ಪಂಚಾಚಾರ್ಯರು ಲಿಂಗಾಯತ ಧರ್ಮೀಯರನ್ನು ಎಂಥ ಅಂಧಕಾರಕ್ಕೆ ತಳ್ಳಿದ್ದರೆಂದರೆ ತಾವೆಲ್ಲ ಹಿಂದೂ ಧರ್ಮದ ಅನುಯಾಯಿಗಳೇ ಎಂದು ನಂಬಿದ್ದರು ಮತ್ತು ಆ ಧರ್ಮದ ಎಲ್ಲ ಅನಾಚಾರಗಳನ್ನೂ ಆಚರಿಸುತ್ತಿದ್ದರು. ಸುಮುಹೂರ್ತ, ಹಿಂದೂ ಹಬ್ಬಹುಣ್ಣಿಮೆಗಳು, ಮಡಿ-ಮೈಲಿಗೆಗಳನ್ನು ನಂಬುತ್ತಿದ್ದರು. 1880ರ ಸುಮಾರಿಗೆ ಮೈಸೂರಿನ ಲಿಂಗಾಯತರು ತಾವೂ ಬ್ರಾಹ್ಮಣರೆಂದು ವಾದಿಸತೊಡಗಿದರು. ಆದರೆ ಅದನ್ನು ಬ್ರಾಹ್ಮಣರು ಒಪ್ಪುತ್ತಿರಲಿಲ್ಲ, ಕ್ಷೌರಿಕರು, ಮಾದಿಗರು, ಸಮಗಾರರು ಲಿಂಗಾಯತರಾಗಿರುವಾಗ ನೀವೆಂಥ ಬ್ರಾಹ್ಮಣರೆಂದು ಅಂದಿನ ಶುಭೋದಯ ಪತ್ರಿಕೆಯಲ್ಲಿ ಲಿಂಗಾಯತರನ್ನು ಹೀಗಳೆಯುತ್ತಿದ್ದರು. ಆದ್ದರಿಂದ ಆಗಿನ ಲಿಂಗಾಯತ ಮುಖಂಡರುಗಳಾದ ಎನ್.ಆರ್.ಕರಿಬಸವಶಾಸ್ತ್ರಿಗಳು, ಪಿ.ಆರ್.ಕರಿ ಬಸವಶಾಸ್ತ್ರಿಗಳು, ಯಜಮಾನ ವೀರಸಂಗಪ್ಪನವರಂಥವರು ಕೆಳವರ್ಗದ ಲಿಂಗಾಯತರು ಲಿಂಗಾಯತರಲ್ಲವೆಂದು ವಾದಿಸಿದ್ದರು ಎಂಬುದನ್ನು ಸ್ಟಾರ್ ಆಫ್ ಮೈಸೂರು ಪತ್ರಿಕೆ ದಾಖಲಿಸಿದೆ.


ವೀರಶೈವರಲ್ಲಿ ಕೆಳಜಾತಿಯ ಲಿಂಗಾಯತರು ವೀರಶೈವರಲ್ಲವೆಂಬ ಮೈಸೂರಿನ ಆರಾಧ್ಯರ ವಾದದ ಪರಿಣಾಮ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುಕಡೆ ವಿಸ್ತಾರವಾಯಿತು. ಇದು ಪಂಚಾಚಾರ್ಯರ ಮಹಿಮೆ. ಅದು ಮುಂದುವರೆಯಿತು. ಆದ್ದರಿಂದಲೇ ಹಡಪದ, ನಾಯಕ, ಮಡಿವಾಳ, ಗಾಣಿಗರಂತಹ ಕೇಳಜಾತಿಯ ಲಿಂಗಾಯತರು ಹಿಂದೂ ಎಂದು ಜನಗಣತಿಯಲ್ಲಿ ಬರೆಯಿಸಲು ಮುಂದಾಗಿದ್ದರೆ ಅದಕ್ಕೆ ಕಾರಣ ಹಿಂದೂ ಧರ್ಮದ ಜಾತಿಪದ್ಧತಿಯನ್ನು ಲಿಂಗಾಯತರು ಮುಂದುವರೆಸಿ ಮೇಲೆ-ಕೆಳಗೆ ಎಂಬ ಭೇದಭಾವವನ್ನು ಅನುಸರಿಸುತ್ತಿರುವ ಚಿದಾನಂದ ಮೂರ್ತಿಯಂಥವರು ಮತ್ತು ಅವರ ಪಂಚಪೀಠದ ಗುರುಗಳು! ಆದಾಗ್ಯೂ ಚಿದಾನಂದ ಮೂರ್ತಿಗಳು ಲಿಂಗಾಯತರು 'ಒಡೆದು ಆಳುವ' ನೀತಿಯನ್ನು ಅನುಸರಿಸುತ್ತಾರೆಂದು ಬರೆಯುವುದು ಒಂದು ವಿಪರ್ಯಾಸದ ವ್ಯಂಗ್ಯವಲ್ಲವೆ?

ಮೇಲೆ ತಿಳಿಸಿದ ಐತಿಹಾಸಿಕ ಕಾರಣಗಳಲ್ಲದೆ ದೇಶದ ಇಂದಿನ ವಿಚಿತ್ರ ಸನ್ನಿವೇಶದಲ್ಲಿ ತಮ್ಮನ್ನು ಹಿಂದೂ ಎಂದು ಬರೆಸಿ ಸರ್ಕಾರದಿಂದ ರಿಜರ್ವೇಶನ್ ಸೌಲಭ್ಯ ಪಡೆಯುವುದು ಕೆಳವರ್ಗದ ಲಿಂಗಾಯತರ ಮತ್ತು ಮೇಲ್ವರ್ಗದ ಜಂಗಮರ ಉದ್ದೇಶವಾಗಿತ್ತು. ಆದರೆ ಜಂಗಮರು 'ಬೇಡಜಂಗಮ'ರೆಂದು ರಿಜರ್ವೇಶನ್ ಉಳಿಸಲು ಹಂಬಲಿಸಿದರೆ ಲಿಂಗಾಯತ ಧರ್ಮಕ್ಕೆ ಏಕೆ ಅಂಟಿಕೊಂಡಿದ್ದಾರೆ? ಕಾಶೀ ಶ್ರೀಗಳಿಗೆ ಲಿಂಗಾಯತರು ಹಿಂದೂಗಳಾಗಿ ಉಳಿದರೆ ಮಾತ್ರ ಅವರ ಅಸ್ತಿತ್ವಕ್ಕೆ ಧಕ್ಕೆಯಿಲ್ಲ, ಲಿಂಗಾಯತರು ಲಿಂಗಾಯತರಾದರೆ ವೀರಶೈವಕ್ಕೆ ಮೂರು ಕವಡೆ ಬೆಲೆಯಿರುವುದಿಲ್ಲ, ಅಂತೂ ಸರ್ಕಾರದ 'ಒಡೆದು ಆಳುವ' ನೀತಿಗೆ ಕೈಗೂಡಿಸಿದವರು ಚಿದಾನಂದ ಮೂರ್ತಿಗಳು ಮತ್ತು ಅವರ ಪಂಚಪೀಠದ ಗುರುಗಳು!

(5) ಲಿಂಗಾಯತರೂ ಬ್ರಾಹ್ಮಣರೆಂಬ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದದಿಂದ ಇಪ್ಪತ್ತನೇ ಶತಮಾನದ ಮಧ್ಯದ (194೦ರ) ವರೆಗಿನ ಹಿನ್ನೆಲೆಯಲ್ಲಿ ಎದ್ದುಬಂದವರು ದಕ್ಷಿಣ ಮತ್ತು ಮಧ್ಯ ಕರ್ನಾಟಕದಲ್ಲಿ ಪೂಜ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು ಮತ್ತು ಉತ್ತರ ಕರ್ನಾಟಕದಲ್ಲಿ ಕಾಶೀನಾಥಶಾಸ್ತ್ರಿಗಳು. ಅವರಿಬ್ಬರ ಉದ್ದೇಶವೆಂದರೆ (ಅ) ವೀರಶೈವ ಸಮಾಜವನ್ನು ಸಂಘಟಿಸುವುದು; ಮತ್ತು (ಬ) ಪಂಚಾಚಾರ್ಯರ ತತ್ವಗಳನ್ನು ಸುಸಂಘಟಿತವಾಗಿ ಪ್ರಚಾರ ಮಾಡುವುದು. ಅದಕ್ಕಾಗಿ ಧಾರವಾಡ ಜಿಲ್ಲೆಯ ನಾಗನೂರಿನವರಾದ ಕಾಶೀನಾಥಶಾಸ್ತ್ರಿಗಳು ತಮ್ಮ ಉದ್ದೇಶಕ್ಕೆ ಹೆಚ್ಚು ಅವಕಾಶವಿರುವ ಮೈಸೂರಿನಲ್ಲಿ 'ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್' ಸ್ಥಾಪಿಸಿದರು. 'ಪಂಚಾಚಾರ್ಯ ಪ್ರಭಾ' ಎಂಬ ನಿಯತಕಾಲಿಕವನ್ನು ಮತ್ತು 'ಕಾಶೀನಾಥ ಗ್ರಂಥಮಾಲಾ' ಎಂಬ ಪುಸ್ತಕ ಪ್ರಕಾಶನ ಮಾಲಿಕೆಯನ್ನು ಪ್ರಾರಂಭಿಸಿದರು. ಅವುಗಳ ಮುಖ್ಯ ಉದ್ದೇಶವೆಂದರೆ ವಿರಕ್ತ ಮಠಗಳ ವಿರುದ್ಧ ಮತ್ತು ಬಸವ ಧರ್ಮದ ವಿರುದ್ಧ ಹಾಗೂ ಶರಣರ ವಿರುದ್ಧ ಅಲ್ಲಸಲ್ಲದ ಅನಾಗರಿಕ ಲೇಖನಗಳನ್ನು, ಗ್ರಂಥಗಳನ್ನು ಪ್ರಕಟಿಸುವುದು ಮತ್ತು ಪಂಚಾಚಾರ್ಯರನ್ನು ಪ್ರಸಿದ್ಧಗೊಳಿಸುವುದೇ ಆಗಿತ್ತು. ಇವರೇ ಸಿದ್ಧಾಂತ ಶಿಖಾಮಣಿಯನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ತಿದ್ದಿ ಬರೆದು ಪ್ರಚಾರ ಮಾಡಿದರು.







ಕಾಶೀನಾಥಶಾಸ್ತ್ರಿಗಳ ಪ್ರಚೋದನೆಯಿಂದ ಶಾಂತಪ್ಪ ಕುಬಸದ ಅವರು ಬರೆದ 'ಬಸವಾದಿ ನಿಜ ತತ್ವ ದರ್ಪಣವು' ಎಂಬ ಗ್ರಂಥದಲ್ಲಿ ಬಸವಣ್ಣ ಮತ್ತು ಇತರ ಶರಣರ ವಿರುದ್ಧ 200 ಉದ್ಧಟ ಪ್ರಶ್ನೆಗಳನ್ನು ಕೇಳಲಾಗಿತ್ತು. ಆ ಅವಮಾನಕರ ಪುಸ್ತಕವನ್ನು ನಿರ್ಬಂಧಿಸಲು ಧಾರವಾಡದ ಸಿದ್ದರಾಮಪ್ಪ ಪಾವಟೆಯವರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾವೆ ಹೂಡಿ ಗೆದ್ದರು. ಆಗ ಗ್ರಂಥಕರ್ತರು ಕ್ಷಮೆ ಕೇಳಬೇಕಾಯಿತು. ಈ ದುಷ್ಟನ ನಿಜಜೀವನ ಚರಿತ್ರೆಯನ್ನು ಪಂಚಾಚಾರ್ಯ ಪ್ರೆಸ್‌ನಲ್ಲಿ ಮ್ಯಾನೇಜರ ಆಗಿದ್ದ ಎಸ್.ಗುಂಡಾಶಾಸ್ತ್ರಿ ಎಂಬವರು ಬರೆದಿದ್ದಾರೆ. ಇವೆಲ್ಲವೂ ಪಂಚಾಚಾರ್ಯರರ ಆಶೀರ್ವಾದದಿಂದ ನಡೆದ ಕೃತ್ಯಗಳು!

(6) ಇನ್ನು ಪೂಜ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಬಗ್ಗೆ ಒಂದಿಷ್ಟು ಮಾಹಿತಿಗಳು ಅಗತ್ಯ. ಹೈದರಾಬಾದ ನಿಜಾಮನ ಆಡಳಿತಕ್ಕೊಳ[ಪಟ್ಟ] ಪರಳಿ ವೈಜನಾಥ ದೇವಸ್ಥಾನದಲ್ಲಿ (ಈಗ ಮಹಾರಾ[ಷ್ಟ್ರದ] ಬೀಡ ಜಿಲ್ಲೆಯಲ್ಲಿದೆ) ಪೂಜೆ ಮಾಡುತ್ತಿದ್ದ ಬ್ರಾಹ್[ಮಣರ] ಸ್ಥಾನಗಳಲ್ಲಿ ಲಿಂಗಾಯತರನ್ನು ನೇಮಿಸಬೇಕೆಂಬ ವಿ[ವಾದ] ನಿಜಾಮನ ಹೈಕೋರ್ಟ್ ಮಟ್ಟ ತಲುಪಿತ್ತು, ಆ ವ್ಯಾಜ್ಯ[ದ] ಮುಖ್ಯ ವಾದವೆಂದರೆ ಲಿಂಗಾಯತರು 'ಲಿಂ[ಗಿ] ಬ್ರಾಹ್ಮಣರು', ಆದ್ದರಿಂದ ವೈಜನಾಥ (ಶಿವ)ನ ಪೂ[ಜೆ] ಮಾಡುವ ಅಧಿಕಾರವನ್ನು ಲಿಂಗಾಯತರಿಗೆ ಕೊಡ[ಬೇಕು] ಎಂಬುದಾಗಿತ್ತು, ಇದು ಮೈಸೂರಿನ ಲಿಂಗಾಯತ[ರಿಂದ] ಪಡೆದ ಪ್ರೇರಣೆಯಿಂದ ಉದ್ಭವಿಸಿದ ವ್ಯಾಜ್ಯವಾಗಿತ್ತು. ವ್ಯಾಜ್ಯದ ಹಿನ್ನೆಲೆಯ ನಾಯಕರಲ್ಲಿ ಪೂಜ್ಯ ಹಾ[ನಗಲ್ಲ] ಕುಮಾರಸ್ವಾಮಿಗಳೂ ಒಬ್ಬರು! ಇಂದೋರಿನಲ್ಲಿ ಸ[ಂಸ್ಕೃತ] ಶಾಲೆಯ ಪ್ರಾಚಾರ್ಯರಾಗಿದ್ದ ಧಾರವಾಡ ಜಿಲ್ಲೆಯ ವಿದ[್ವಾನ್] ಒಡೆಯರ ಅವರು ಕುಮಾರಸ್ವಾಮಿಗಳ ಕೋರಿಕೆ[ಯಂತೆ] (ಎಕ್ಸಪರ್ಟ) ಮಾಹಿತಿ ಕಳುಹಿಸಿದರು. ಲಿಂಗಾಯತರು 'ಲಿಂ[ಗಿ] ಬ್ರಾಹ್ಮಣ'ರೆಂದು ನ್ಯಾಯಾಲಯಕ್ಕೆ (ಟ್ರಿಬ್ಯುನಲ್‌ಗೆ) ಮನ[ವರಿಕೆ] ಮಾಡಿಕೊಟ್ಟರು. ವೈಜನಾಥನ ಪೂಜಾರಿಕೆ ಲಿಂಗಾಯ[ತರಿಗೆ] ದೊರೆಯಿತು. ನೋಡಿ ಹೇಗಿದೆ ಪಂಚಾಚಾರ್ಯರ ಪ್ರ[ಭಾವ], ಎಲ್ಲಿಯ ಬಸವ ಎಲ್ಲಿಯ ಲಿಂಗೀ ಬ್ರಾಹ್ಮಣರು!


(7) ಮಹಾ ಮೇಧಾವಿಯಾಗಿದ್ದ ಪೂಜ್ಯ ಹಾ[ನಗಲ್ಲ] ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ 1904ರಲ್ಲಿ 'ಅ[ಖಿಲ] ಭಾರತ ವೀರಶೈವ ಮಹಾಸಭೆ'ಯನ್ನು ಸ್ಥಾಪಿಸಲಾಯಿ[ತು]. ಇತ್ತೀಚೆಗೆ ಸುಮಾರು ಹತ್ತು ವರ್ಷಗಳ ಹಿಂದೆ ಅ[ದನ್ನು] 'ವೀರಶೈವ-ಲಿಂಗಾಯತ ಮಹಾಸಭೆ'ಯೆಂ[ದು] ಬದಲಿಸಲಾಗಿದೆ. ಪೂಜ್ಯ ಹಾನಗಲ್ಲ ಕುಮಾರಸ್ವಾಮಿ[ಗಳ] ಮಾರ್ಗದರ್ಶನದಲ್ಲಿ 1904ರಲ್ಲಿ ನಡೆದ ಮಹಾಸ[ಭೆಯ] ಮೊದಲ ಅಧಿವೇಶದಲ್ಲಿಯೇ "ವೀರಶೈವರು [ವೇದ] ಉಪನಿಷತ್ತುಗಳನ್ನು, ಶಾಸ್ತ್ರ ಪುರಾಣಗಳನ್ನು, ಆಗಮ[ಗಳನ್ನು] ಒಪ್ಪುತ್ತಾರೆ", "ವೀರಶೈವರು ಹಿಂದೂಗಳು", "ಲಿಂಗಾ[ಯತ] ಮಠಗಳಿಗೆ ಜಂಗಮ ಜಾತಿಯವರನ್ನೇ ಸ್ವಾಮಿಗ[ಳನ್ನಾಗಿ] ನೇಮಿಸಬೇಕು" ಎಂಬೆಲ್ಲ ನಿರ್ಣಯಗಳ[ನ್ನು] ತೆಗೆದುಕೊಳ್ಳಲಾಯಿತು. ಹಾಗಾದರೆ ಮಹಾಸಭೆಯು [ಆ] ನಿರ್ಣಯಗಳನ್ನು ತೆಗೆದುಕೊಳ್ಳಲು ಮಾರ್ಗದ[ರ್ಶನ] ನೀಡಿದವರು ಯಾರು ಎನ್ನುವುದನ್ನೂ ಚಿದಾ[ನಂದ] ಮೂರ್ತಿಗಳು ಹೇಳಿದ್ದರೆ ಒಳ್ಳೆಯದಿತ್ತು!

ಈ ಅಂಶಗಳನ್ನು 36 ವರ್ಷಗಳ ಬಳಿಕ 194[0ರಲ್ಲಿ] ನಡೆದ ಮಹಾಸಭೆಯ ಅಧಿವೇಶನ[ದಲ್ಲಿ] ರದ್ದುಗೊಳಿಸಲಾಯಿತು! ಇದನ್ನೇ ಚಿದಾ[ನಂದ] ಮೂರ್ತಿಯವರು ಬಹುದೊಡ್ಡ ತಪ್ಪು ಎನ್ನುವಂತೆ [ನನಗೆ] ಕಳಿಸಿದ ಪತ್ರದಲ್ಲಿ ಬಿಂಬಿಸಿದ್ದಾರೆ. ಹಾಗಾದರೆ, ಪ್ರ[ಖ್ಯಾತ] ಪಂಡಿತರನ್ನು ಹೊಂದಿದ ಅಖಿಲ ಭಾರತ ವೀ[ರಶೈವ] ಮಹಾಸಭೆಯು ಆ ನಿರ್ಣಯಗಳನ್ನು ಏಕೆ ಬದಲಿ[ಸಿತು] ಎನ್ನುವುದನ್ನೂ ಚಿದಾನಂದ ಮೂರ್ತಿಗಳು ಹೇಳುವ[ುದಿಲ್ಲ]. ಅದನ್ನು ಹೇಳಿದರೆ ಅವರ ಹೂರಣವೇ ಹಳಸಿಬಿಡು[ತ್ತದೆ].

(8) ವೀರಶೈವ ಧರ್ಮದ ಪ್ರಚಾರವನ್ನು ಸುಸಜ್ಜಿ[ತ]ಗೊಳಿಸಲು ಮಾಡಲು ಪೂಜ್ಯ ಹಾನಗಲ್ಲ ಕುಮಾರಸ್ವಾಮಿ[ಗಳು] 1919ರಲ್ಲಿ ಪಂಚಪೀಠಗಳ ಶಾಖೆಗಳ ಮುಖ್ಯಸ್ಥ[ರು] ಎಲ್ಲ ಪಟ್ಟಚರಾಧಿಕಾರಿಗಳ ಸಮ್ಮೇಳನವನ್ನು ನಡೆ[ಸಿದರು] ಮತ್ತು 'ಅಖಿಲ ಭಾರತೀಯ ಗುರವರ್ಗೋತ್ತೇ[ಜಕ] ಸಂಘ'ವನ್ನೂ ಸ್ಥಾಪಿಸಿದರು. ಆ ಮೂಲಕ ವೀರ[ಶೈವ] ಪಂಥದ ಗುರುವರ್ಗಕ್ಕೆ ಸುಸಜ್ಜಿತ ಪ್ರಚಾ[ರಕ್ಕೆ] ಅವಕಾಶವಾಯಿತು. ಎಂಥ ಮುಂಧೋರಣೆ!

(9) ಬಸವಣ್ಣನಿಗೆ ಮತ್ತು ಶರಣರಿಗೆ ಹಾಗೂ [ವಚನ] ಸಾಹಿತ್ಯಕ್ಕೆ ವಿರಕ್ತ ಮಠಗಳ ಸ್ವಾಮಿಗಳು ಒತ್ತು ನೀಡು[ತ್ತಾರೆ]. ಸಿದ್ಧಾಂತ ಶಿಖಾಮಣಿಗೆ ಅವರು ಅಷ್ಟೊಂದು ಮ[ಹತ್ವ] ಕೊಡುವುದಿಲ್ಲ, ಹಿಂದೂ ಶೈವ ಧರ್ಮವನ್ನು ಅ[ವರು] ಒಪ್ಪುವುದಿಲ್ಲ, ಅದನ್ನು ಕಡಿಮೆ ಮಾಡಿ ಸಿದ್ಧಾಂತ ಶಿಖಾ[ಮಣಿ] ವೇದ ಉಪನಿಷತ್ತು, ಆಗಮಗಳನ್ನು ವಿರ[ೋಧಿಸುತ್ತದೆ]

...ಂಗಾಯತ ಧರ್ಮದಲ್ಲಿ ಗೊಂದಲವಿಲ್ಲ, ಸ್ಪಷ್ಟತೆ ಇದೆ'-ತೋಂಟದಾರ್ಯ ಸಿದ್ದಲಿಂಗೇಶ್ವರ ಸ್ವಾಮಿ



...ಎಡೆಯೂರು ಸಿದ್ಧಲಿಂಗೇಶ್ವರ ಸಂಸ್ಥಾನ ಮಠದ ...ರು ಡಾ.ಸಿದ್ದಲಿಂಗಮಹಾಸ್ವಾಮಿಗಳು ಪ್ರಗತಿಪರ ...ಧೀಶರು. ಅವರ ವಿಚಾರಧಾರೆಗೆ, ಕರ್ತೃತ್ವ ಶಕ್ತಿಗೆ ...ಹೋಗದವರೆ ವಿರಳ. ರಾಜ್ಯದಲ್ಲಿ ನೆಲೆಯೂರಲಿದ್ದ ...ಪ್ಕೋ ಕಂಪನಿಯನ್ನು ತಮ್ಮ ಹೋರಾಟದ ...ಭಾವನೆಯ ಮೂಲಕ ಕಿತ್ತು ಬಿಸಾಕಿದರು. ತೀರಾ ...ಗೆ ಕಪ್ಪತಗುಡ್ಡವನ್ನು ಹಾಗೂ ಅಲ್ಲಿಯ ಅರಣ್ಯ ...ನಾಶವಾಗಬಾರದೆಂದು, ಅದು ಅರಣ್ಯವಾಗಿಯೇ ...ಉಳಿಲಿ ಎಂಬ ಹೋರಾಟಕ್ಕೆ ಧುಮುಕಿ ...ದವರು. ಅವರು ಯಾವುದೇ ವಿಷಯವನ್ನು ... ಹೋರಾಟಕ್ಕೆ ಇಳಿಯಲಿ. ಅದು ...ಯಾಗುವವರೆಗೆ ವಿರಮಿಸಿದವರೇ ಅಲ್ಲ.

...ಕ್ಯದ ಪರ ನಿಲುವು, ನಿಷ್ಠುರತೆಗಳನ್ನು ರೂಢಿಸಿಕೊಂಡಿರುವ ಜಗದ್ಗುರುವಿಗೆ ಹಲವಾರು ಕಂಟಕಗಳು, ವಿಪತ್ತುಗಳು ಎದುರಾಗಿವೆ. ಶರಣ ವಿಚಾರಧಾರೆಯನ್ನು ಬೆನ್ನಿಗೆ ಇಟ್ಟುಕೊಂಡು ಹೋಗುವಾಗ ಸಹಜವಾಗಿ ಕುಹಕಿಗಳ ಕುತಂತ್ರಕ್ಕೆ ಸಿಲುಕಿದ್ದಾರೆ. ಶಿವಯೋಗಮಂದಿರದಲ್ಲಿ ಬರೀ ಜಾತಿ ಜಂಗಮರಿಗೆ ಪ್ರವೇಶ ಸರಿಯಲ್ಲ ಎಂಬ ಇವರ ನುಡಿಗೆ ಕುಪಿತರಾದ ಜಾತಿ ಜಂಗಮರು ಇವರ ಮೇಲೆ ದೈಹಿಕ ಹಲ್ಲೆಯನ್ನೂ ನಡೆಸಿದರು. ಆದರೆ ಸಿದ್ದಲಿಂಗಸ್ವಾಮಿಗಳು ಇಟ್ಟ ಹೆಜ್ಜೆಯನ್ನು ಹಿಂದೆ ಇಟ್ಟು ಸರಿದುಹೋದವರಲ್ಲ, ಇವರು ಸವೆದು ಹೋಗುತ್ತಾರೆ ಹೊರತು ಸರಿದು ಹೋಗುವುದಿಲ್ಲ.


ಪತ್ರಿಕೆ ಅವರೊಂದಿಗೆ ಸಂಕ್ಷಿಪ್ತವಾಗಿ ಸಂದರ್ಶಿಸಿತು.

ಪತ್ರಿಕೆ: ಲಿಂಗಾಯತ ಧರ್ಮ ಸ್ವತಂತ್ರ ಧರ್ಮವೆಂದಾದರೆ ಯಾರಿಗೆ ಒಳಿತು?

ಸಿದ್ದಲಿಂಗೇಶ್ವರ ಸ್ವಾಮಿ: ನಾಡಿನ ಎಲ್ಲರಿಗೂ ಅದರಿಂದ ಒಳ್ಳೆಯದಾಗಲಿದೆ. ಈ ಬಸವ ಪ್ರಣೀತ ಧರ್ಮದಲ್ಲಿ ಗೊಂದಲವಿಲ್ಲ, ಸ್ಪಷ್ಟತೆ ಇದೆ. ಈ ಧರ್ಮಕ್ಕೆ ವಚನ ಸಾಹಿತ್ಯವೆ ಸಂವಿಧಾನ. ಇಲ್ಲಿ ಏಕದೇವೋಪಾಸನೆ ಇರುವುದರಿಂದ ಯಾರು ಯಾರಿಗೂ ಶೋಷಿಸುವ ಪ್ರಶ್ನೆ ಬರುವುದಿಲ್ಲ. ಮನುಷ್ಯಮನುಷ್ಯರ ನಡುವೆ ಭೇದ ಭಾವ ಇಲ್ಲ, ಹೆಣ್ಣು ಗಂಡು ಎಂಬ ತಾರತಮ್ಯ ಇಲ್ಲ, ಸಕಲ ಜೀವರಾಶಿಗೂ ಒಳಿತು ಬಯಸುವ ಧರ್ಮ.

ಪತ್ರಿಕೆ: ವೀರಶೈವ ಪುರಾತನ ಸನಾತನ ಪರಂಪರೆಯಿಂದ ಬಂದದ್ದು ಎಂದು ಹೇಳುತ್ತಾರಲ್ಲ? ಹಾಗಾದರೆ ಲಿಂಗಾಯತ ಧರ್ಮ......

ಸಿದ್ದಲಿಂಗೇಶ್ವರ ಸ್ವಾಮಿ: ಹೌದು ವೀರಶೈವ ಸಪ್ತ ಶೈವಗಳಲ್ಲಿ ಒಂದು. ಶೈವ ವೃಕ್ಷದ ಒಂದು ಟೊಂಗೆ ವೀರಶೈವ. ಇದಕ್ಕೆ ತುಂಬಾ ಹಳೆಯ ಇತಿಹಾಸ ಇದೆ. ಆದರೆ ಲಿಂಗಾಯತ ಧರ್ಮ ಸ್ಪಷ್ಟವಾಗಿ ಹನ್ನೆರಡನೆಯ ಶತಮಾನದಲ್ಲಿ ಜೀವ ತಳೆದ ಧರ್ಮ. ಶೈವ ಧರ್ಮದ ಕಂದಾಚಾರ ಮೂಢನಂಬಿಕೆ ಅಸಮಾನತೆ, ಭಿನ್ನಭೇದಗಳನ್ನು ತೊಡೆದು ಹಾಕಿತು. ದೇವರನ್ನು ಹುಡುಕುತ್ತ ಎಲ್ಲೂ ಅಲೆಯಬೇಡಿ. ನಿಮ್ಮ ಅಂಗೈಯಲ್ಲಿರುವ ಇಷ್ಟಲಿಂಗ ದೇವರ



ಕುರುಹು ಎಂದು ಅರಿವನ್ನು ಮೂಡಿಸಿದ ಧರ್ಮ. ಬಸವಣ್ಣನವರು ಈ ಧರ್ಮವನ್ನು ಸಂಸ್ಥಾಪಿಸಿದರು.

ಪತ್ರಿಕೆ: ಲಿಂಗಾಯತ ಹಾಗೂ ವೀರಶೈವ ಭಿನ್ನ ಭಿನ್ನವಾಗಿದ್ದರೆ, ಅದು ಲಿಂಗಾಯತದ ಧರ್ಮವನ್ನು ಹೇಗೆ ಆಪೋಶನ ಮಾಡಿಕೊಂಡಿತು?

ಸಿದ್ದಲಿಂಗೇಶ್ವರ ಸ್ವಾಮಿ: ಮರೆ ಮೋಸದಿಂದ ಲಿಂಗಾಯತ ಧರ್ಮದಲ್ಲಿ ವೀರಶೈವವನ್ನು ತುರುಕಲಾಯಿತು. ದಕ್ಷಿಣ ಭಾರತದ ಶೈವ ಜನ ವೀರಶೈವರು. ಅವರು ಜನಿವಾರದಾರಿಗಳು. ಡಿ.ಆರ್. ಕರಿಬಸವಯ್ಯಶಾಸ್ತ್ರಿ ಎನ್.ಆರ್.ಕರಿಬಸವಯ್ಯಶಾಸ್ತ್ರಿಗಳಂಥವರು ವೀರಶೈವವನ್ನು ಹೆಚ್ಚು ಹೆಚ್ಚು ಪ್ರಚುರಗೊಳಿಸಿದರು. ವೀರಶೈವವನ್ನು ಗ್ರಾಂಥಿಕ ಭಾಷೆಯಾಗಿ ಬಳಸಿಕೊಂಡು ಬರಲಾಯಿತು.

ನಮಗೂ ಕೂಡ ಅರಿವಿಲ್ಲದೆ ವೀರಶೈವ ಪ್ರಗತಿಶೀಲ ಸಂಸ್ಥೆ ಹಾಗೂ ವೀರಶೈವ ಅಧ್ಯಯನ ಸಂಸ್ಥೆ ಎಂದು ಮಾಡಿದ್ದೆವು. ಆದರೆ ನಮಗೂ ತಿಳಿವಳಿಕೆ ಬಂದ ನಂತರ ಅದನ್ನು ಬದಲಾಯಿಸಿದ್ದೇವೆ.

*ಪತ್ರಿಕೆ: **1904** ರಲ್ಲಿ ಸಂಸ್ಥಾಪಿಸಲ್ಪಟ್ಟ ವೀರಶೈವ ಮಹಾಸಭೆ ಹಾಗೂ ಶಿವಯೋಗ ಮಂದಿರಗಳ ಸಂಸ್ಥಾಪಕ ಹಾನಗಲ್ ಕುಮಾರ ಸ್ವಾಮಿಗಳು ತಂತ್ರಗಾರಿಕೆಯಿಂದ ವೀರಶೈವವನ್ನು ಲಿಂಗಾಯತರಲ್ಲಿ ತುರುಕಿದರೆ?*

ಸಿದ್ಧಲಿಂಗೇಶ್ವರ ಸ್ವಾಮಿ: ಇಲ್ಲ, ಇಲ್ಲ, ಆಕಸ್ಮಿಕವಾಗಿ ನಡೆದ ಅಚಾತುರ್ಯ. ಅವರಿಗೂ ಸಾಮಾಜಿಕ ಕಾಳಜಿ ಇತ್ತು, ಕಾಲಾನುಕಾಲ ಅನುಸರಿಸುತ್ತ ಬಂದ ವಿಚಾರಗಳನ್ನು ಅವರೂ ಅನುಸರಿಸಿ ನಡೆದರು ಅಷ್ಟೆ. ಆದರೆ ಶಿವಯೋಗ ಮಂದಿರದಲ್ಲಿ ಪ್ರವೇಶ ಪಡೆಯಲು ಜಾತಿ ಜಂಗಮರಷ್ಟೆ ಅರ್ಹರು ಎಂಬ ತಪ್ಪು ಅವರು ಮಾಡಬಾರದಾಗಿತ್ತು.

ಪತ್ರಿಕೆ: ಉತ್ತಂಗಿ ಚೆನ್ನಪ್ಪನವರು 'ಪಂಚಾಚಾರ್ಯರು ಬಸವಣ್ಣನವರ ಬಹಿರಂಗದ್ರೋಹಿಗಳಾದರೆ, ವಿರಕ್ತರು ಅಂತರಂಗದ್ರೋಹಿಗಳು' ಎಂಬ ಅಭಿಪ್ರಾಯಕ್ಕೆ ತಮ್ಮ ಪ್ರತಿಕ್ರಿಯೆ?

ಸಿದ್ದಲಿಂಗೇಶ್ವರ ಸ್ವಾಮಿ: ಅವರ ಮಾತು ಕಹಿಯಾಗಿದ್ದರೂ ಸಹ ಆ ಮಾತುಗಳಲ್ಲಿ ಸತ್ಯ ಅಡಗಿದೆ. ವಿರಕ್ತ ಪೀಠವನ್ನು ಅಲಂಕರಿಸಿದ ಬಹುತೇಕ ಜನ ಮಠಾಧೀಶರು ಶೈವ ಪದ್ಧತಿಯಂತೆ ತಮ್ಮ ನಡಾವಳಿಗಳನ್ನು ಇಟ್ಟುಕೊಂಡಿದ್ದಾರೆ. ಬಸವಣ್ಣನೆ ಮುಖ್ಯ ಅಂತ ಮಾನ್ಯ ಮಾಡಲಿಲ್ಲ, ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ಅಥಣಿ ಶಿವಯೋಗಿಗಳಂಥವರು ಮಾತ್ರ ಬಸವಣ್ಣನವರನ್ನು ಒಪ್ಪಿಕೊಂಡು ಅಪ್ಪಿಕೊಂಡು ನಡೆದರು. ಇನ್ನು ಪಂಚಾಚಾರ್ಯರಂತೂ ಬಸವಣ್ಣನವರ ವಿಚಾರಗಳನ್ನು ಎಂದೂ ಒಪ್ಪಿಕೊಂಡವರಲ್ಲ, ಅಪ್ಪಿಕೊಂಡವರಂತೂ ಅಲ್ಲವೇ ಅಲ್ಲ.

ಪತ್ರಿಕೆ: ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ತಾವು ಯಾವ ರೀತಿಯ ಹೋರಾಟ ಕೈಗೊಳ್ಳುತ್ತೀರಿ?

ಸಿದ್ದಲಿಂಗೇಶ್ವರ ಸ್ವಾಮಿ: ಇಷ್ಟರಲ್ಲಿಯೆ ರಾಜ್ಯದ ಹಲವಾರು ಮಠಾಧೀಶರೊಂದಿಗೆ ಸೇರಿಕೊಂಡು ಮುಖ್ಯಮಂತ್ರಿಗಳನ್ನು ಭೇಟಿಯಾಗುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ವಿಚಾರವಾದಿಗಳು. ಅವರಿಗೆ ಸತ್ಯದ ಅರಿವಿದೆ. ಇತಿಹಾಸದ ಪ್ರಜ್ಞೆ ಇದೆ. ಆದ್ದರಿಂದ ಅವರು ಖೊಟ್ಟಿ ಧರ್ಮದ ಮಾನ್ಯತೆಗೆ ಶಿಫಾರಸ್ಸು ಮಾಡಲಾರರು. ಹಿಂದೆ ಎರಡು ಬಾರಿ ಕೇಂದ್ರ ಸರಕಾರದಿಂದ ತಿರಸ್ಕೃತಗೊಂಡ ವೀರಶೈವ ಪದವನ್ನು ಮುಂದಿಟ್ಟುಕೊಂಡು ಹೋಗುವುದು ಮೂರ್ಖತನ.

...ಳ್ಳುವಂತೆ ಮಾಡುವ ಅಗತ್ಯತೆಯನ್ನು ಪೂಜ್ಯ ...ಸ್ವಾಮಿಗಳು ಮನಗಂಡರು. ಆಗ ಅವರಿಗೆ ಹೊಳೆದ ... ಮುಂಧೋರಣೆಯ ಉಪಾಯವೆಂದರೆ ಎಲ್ಲ ...ವ-ಲಿಂಗಾಯತ ವಟುಗಳಿಗೆ ಒಂದೇ ರೀತಿಯ ...ಯನ್ನು ನೀಡಿದರೆ ಆ ವ್ಯತ್ಯಾಸಗಳೆಲ್ಲವೂ ...ಯೇ ಹೊರಟುಹೋಗುತ್ತವೆ ಎಂಬ ವಿಚಾರ. ...ಗಿ ಅವರು ಬದಾಮಿಗೆ ಸಮೀಪದ 'ಶಿವಯೋಗ ...'ದಲ್ಲಿ ವಟುಗಳ ತರಬೇತಿ ಕೇಂದ್ರವನ್ನು 1910ರಲ್ಲಿ ...ದರು. ಅದು ಈಗ ಇನ್ನೂ ಚೆನ್ನಾಗಿ ಬೆಳೆದಿದೆ.

...ವಯೋಗ ಮಂದಿರದಲ್ಲಿ ಎಲ್ಲ ...ವ-ಲಿಂಗಾಯತ ವಟುಗಳಿಗೆ ಪ್ರಮುಖವಾಗಿ ...ವ ಸಿದ್ಧಾಂತ ಶಿಖಾಮಣಿ, ಶಕ್ತಿವಿಶಿಷ್ಟಾದ್ವೈತ, ವೇದ, ...ಷತ್ತು, ಆಗಮ, ಲಿಂಗಧಾರಣ ಪದ್ಧತಿ, ದೀಕ್ಷೆ, ...ಚಾರ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಶಿವಯೋಗ ...ರದಲ್ಲಿ ತರಬೇತಿ ಪಡೆದ ಸ್ವಾಮಿಗಳಿಗೆ ಈಗ ಹೆಚ್ಚಿನ ...ಇದೆ. ಬಸವನ ವಿಶ್ವಮಾನವೀಯ, ಸಮಾನತೆಯ ...ವೇ ಅಂಶಗಳಿಗೆ ಆ ತರಬೇತಿಯಲ್ಲಿ ಮಹತ್ವವಿರಲಿಲ್ಲ. ...ಗೆ ಹತ್ತು ವರ್ಷಗಳ ಹಿಂದೆ ಕೆಲವು ...ವಣೆಗಳನ್ನು ಮಾಡಲಾಗಿದೆಯೆಂದು ಓರ್ವ ...ರು ನನಗೆ ತಿಳಿಸಿದ್ದಾರೆ. ಏನು ಬದಲಾವಣೆಯಾಗಿದೆ ...ದು ಗೊತ್ತಿಲ್ಲ, ಚಿದಾನಂದ ಮೂರ್ತಿಯವರು ತಮ್ಮ ... ಶಿವಯೋಗ ಮಂದಿರದ ಸ್ಥಾಪನೆಯ ಅಂಶವನ್ನೂ ...ದ್ದಾರೆ. ಹೇಗಿದೆ ನೋಡಿ ಲಿಂಗಾಯತರನ್ನು ...ಸುವ ಪ್ರಯತ್ನಗಳು!

...ದ 107 ವರ್ಷಗಳಲ್ಲಿ ಶಿವಯೋಗ ಮಂದಿರದಲ್ಲಿ ... ಪಡೆದ ಸುಮಾರು ಎಂಟುನೂರು ಗುರು-ವಿರಕ್ತ ... ಬಹುತೇಕ ಲಿಂಗಾಯತ ಸ್ವಾಮಿಗಳು ಈಗ ...ಯೂ ಅಂತರಾತ್ಮದಲ್ಲಿ ತಾವು ಅಲ್ಲಿ ಪಡೆದ ...ದ ಅಂಶಗಳನ್ನು ಆಚರಿಸುತ್ತಾರೆ.

...ಪ್ಪುಗಳ ಹೊರತಾಗಿಯೂ ಅನೇಕ ವಿರಕ್ತಮಠಗಳ ...ರು ಬಹು ನಿಷ್ಠೆಯಿಂದ ಶರಣ ತತ್ವಗಳನ್ನು ...ಸ್ಕಾರ ಮತ್ತು ಅವುಗಳ ಪ್ರಚಾರಕ್ಕೆ ತಮ್ಮ ...ವನ್ನೇ ಮುಡುಪಾಗಿಟ್ಟಿದ್ದಾರೆ. ತುಮಕೂರಿನ ...ಗಾ ಮಠದ ಶ್ರೀಗಳು, ಚಿತ್ರದುರ್ಗ, ಧಾರವಾಡ, ...ಬೈಲ್ಹೊಂಗಲದ ಮುರುಘಾಮಠಾಧೀಶರು, ಸಿರಿಗೆರೆಯ ...ರು ಮಠಾಧೀಶರು, ಗದುಗಿನ ತೋಂಟದಾರ್ಯರು, ... ಸಿದ್ಧಾಂತ ಸ್ವಾಮಿಗಳು, ಮೈಸೂರಿನ ಸುತ್ತೂರು ... ಶಿವಮೊಗ್ಗ ಮತ್ತು ಸಾಗರದ ಬೆಕ್ಕಿನಕಲ್ಮಠದ ...ರು ಭಾಲ್ಕಿಯ ಪಟ್ಟದ ದೇವರು, ಕಲಬುರ್ಗಿಯ ...ಶ್ವರ ಮಠದ ಜೊತೆಗೆ ಇನ್ನೂ ನೂರಾರು ...ಮಠಗಳು ಶರಣತತ್ವಗಳ ಪರಿಪಾಲನೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಇಲ್ಲದಿದ್ದರೆ ಇಂದು ಬಸವ ತತ್ವ ನಿರ್ನಾಮವಾಗಬಹುದಿತ್ತು.

ಪಂಚಾಚಾರರ ಬಗ್ಗೆ ಒಂದಿಷ್ಟು ಮಾಹಿತಿ ಅಗತ್ಯವೆನಿಸುತ್ತದೆ. ಸಿದ್ಧಾಂತ ಶಿಖಾಮಣಿಯ ಆಂತರಿಕ ವಿರೋಧಾಭಾಸಗಳನ್ನು ಗಮನಿಸಿದರೆ ಐವರು ಪಂಚಾಚಾರ್ಯರಲ್ಲಿ ಈರ್ವರ ಅಸ್ತಿತ್ವಕ್ಕೆ (ಕಾಶೀ ಮತ್ತು ಕೇದಾರ ಪೀಠಗಳಿಗೆ) ಯಾವುದೇ ಐತಿಹಾಸಿಕ, ಪೌರಾಣಿಕ ಆಧಾರವೇ ಇಲ್ಲ, ಈ ಐವರನ್ನು 'ಆಚಾರ್ಯ'ರನ್ನಾಗಿ ಮಾಡಿದವರು ಯಾರು? ಯಾವಾಗ? ಎಂಬುದಕ್ಕೆ ಸೂಕ್ತ ತೃಪ್ತಿಕರ ಆಧಾರಗಳೇ ಇಲ್ಲ, ಕೃತಾಯುಗ, ತ್ರೇತಾಯುಗ, ದ್ವಾಪರಯುಗಗಳಲ್ಲಿ ಧರ್ಮಪ್ರಚಾರ ಮಾಡಿದ್ದೇವೆಂದೂ, ರಾಮಾಯಣದ ವಿಭೀಷಣನಿಗೆ ಸಲಹೆ ನೀಡಿದ್ದೇವೆಂದೂ, ಅಗಸ್ತ್ಯನಿಗೆ ಶಿವನ ಮಹಿಮೆಯನ್ನು ವಿವರಿಸಿದ್ದೇವೆಂದೂ, ಶಂಕರಾಚಾರ್ಯರರಿಗೆ ಚಂದ್ರಮೌಳೀಶ್ವರಲಿಂಗವನ್ನು ನೀಡಿದ್ದೇವೆಂದೂ ಸಿದ್ಧಾಂತ ಶಿಖಾಮಣಿಯ ಲೇಖಕರು ಹೇಳುತ್ತಾರೆ.

ಇಂತೆಲ್ಲ ಚಮತ್ಕಾರಿ ಕಾರ್ಯಗಳನ್ನು ಮಾಡಿದ ಈ ಪಂಚಪೀಠಗಳ ಬಗ್ಗೆ ಯಾವುದೇ ವೇದ, ಆಗಮ, ಉಪನಿಷತ್ತು, ಬ್ರಾಹ್ಮಣಕ, ಅರಣ್ಯಕ ಅಥವಾ ಶಂಕರಾಚಾರ್ಯರರಿಗೆ ಸಂಬಂಧಿಸಿದ ಗ್ರಂಥಗಳಲ್ಲೂ, ರಾಮಾಯಣದಲ್ಲೂ, ಅಥವಾ ಭಾರತದ ಸುದೀರ್ಘ ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಹಳೆಯ ಗ್ರಂಥದಲ್ಲಿಯೂ ಪಂಚಾಚಾರ್ಯರ ಬಗ್ಗೆ ಒಂದು ಚಕಾರ ಶಬ್ದವೂ ಇಲ್ಲ, ಹಾಗಾದರೆ, ಅವರ ಇತಿಹಾಸವೆಲ್ಲ ಸ್ವಯಂ-ನಿರ್ಮಿತ ಕಟ್ಟುಕತೆಗಳೇ? ಅವನ್ನೆಲ್ಲ ಸೃಷ್ಟಿಸಿದವರು ಯಾರೂ, ಏಕೆ, ಹೇಗೆ ಯಾವಾಗ?

ಹೌದು, ವಿಜಯನಗರದ ದೊರೆಗಳಲ್ಲಿ ಸಂಗಮ ವಂಶದ ರಾಜರು 14-15ನೇ ಶತಮಾನಗಳಲ್ಲಿ ಅವರಿಗೆ ರಾಜಾಶ್ರಯ ನೀಡಿ ವಚನಸಾಹಿತ್ಯದ ಬೆಳವಣಿಗೆಯನ್ನು ಪ್ರೋತ್ಸಾಹಿಸಿದರು. ಪುಂಗನೂರು, ಕೆಳದಿ ಮತ್ತು ಕೊಡಗಿನ ಅರಸರು ಲಿಂಗಾಯತರಾಗಿದ್ದರು. ಮೈಸೂರಿನ ಒಡೆಯರರೂ 17ನೇ ಶತಮಾನದವರೆಗೆ ಲಿಂಗಾಯತರಾಗಿದ್ದರು. ಆದರೆ ಅವರ್‍ಯಾರೂ ಪಂಚಪೀಠಗಳನ್ನು ಸ್ಥಾಪಿಸಲಿಲ್ಲ,

ಈ ಎಲ್ಲ ಅಂಶಗಳನ್ನು ಸಾಧಾರಣವಾಗಿ ಬಳಸಿಕೊಂಡು ಲಿಂಗಾಯತವು ಸ್ವತಂತ್ರ ಧರ್ಮವೆಂದೂ, ಪಂಚಪೀಠಗಳು ನಂತರದ ಅಧ್ವಾನಗಳೆಂದೂ ಸಿದ್ಧಪಡಿಸಲು ಅಪಾರವಾದ ಐತಿಹಾಸಿಕ ಸಾಮಗ್ರಿ ಈಗ ಲಭ್ಯವಿದೆ. ಅದು ಆಧುನಿಕ ಯುಗದಲ್ಲಿ ನಡೆದ ವಚನಶಾಸ್ತ್ರ ಸಾಹಿತ್ಯದ ಆವಿಷ್ಕಾರಗಳು ನಿರ್ಮಿಸಿದ ಗಂಭೀರ ಬೆಳವಣಿಗೆ. ಇಂದು ಲಿಂಗಾಯತ ಸಮುದಾಯವು ಅತ್ಯಂತ ಕಠಿಣ ಆಂತರಿಕ ವೈರುಧ್ಯಗಳಿಂದ, ತಿಕ್ಕಾಟಗಳಿಂದ, ವಿವಿಧ ಪಾಂಥಿಕ ಸಮಸ್ಯೆಗಳಿಂದ ತತ್ತರಿಸಿಹೋಗಿದೆ. ಈಗ ನಮಗೆ ಬೇಕಿರುವುದು ಇಂದಿನ ವೈಜ್ಞಾನಿಕ ಯುಗಮಾನದ ಮನೋಭಾವಕ್ಕೆ ಸಂಪೂರ್ಣವಾಗಿ ಸರಿಹೊಂದುವ 12ನೆಯ ಶತಮಾನದ ಬಸವಣ್ಣನ ಲಿಂಗಾಯತ ಧರ್ಮವೇ ಹೊರತು ಪಂಚಾಚಾರ್ಯರು ಅಶುದ್ಧಗೊಳಿಸಿರುವ, ನೂರೆಂಟು ಆಂತರಿಕ ವೈರುಧ್ಯಗಳಿಂದ ಕೂಡಿದ ವೀರಶೈವವಲ್ಲ.

12ನೇ ಶತಮಾನಧ ಬಸವಣ್ಣನ ಮತ್ತು ಶರಣರು ಸ್ಥಾಪಿಸಿದ ಲಿಂಗಾಯತದ ಮರು ಆವಿಷ್ಕಾರವು 20ನೆಯ ಶತಮಾನದ ಅವಿಸ್ಮರಣೀಯ ಸೋಜಿಗಗಳಲ್ಲಿ ಒಂದಾಗಿದೆ. ಶಾಶ್ವತ ಸತ್ಯವನ್ನು ಬಹುಕಾಲ ಮುಚ್ಚಿಡಲು ಸಾಧ್ಯವಿಲ್ಲ, ಅದಕ್ಕೆ ಮೂಲ ಆಧಾರವೆಂದರೆ ಹತ್ತಾರು ಸಾವಿರ ವಚನಗಳನ್ನು ಪತ್ತೆಹಚ್ಚಿ, ಪರಿಷ್ಕರಿಸಿ, ಪ್ರಕಟಿಸಿದ್ದು, ಆದರ ಹಿಂದೆ ಫ.ಗು. ಹಳಕಟ್ಟಿ, ಎಂ.ಎಂ ಕಲಬುರ್ಗಿ, ವೀರಣ್ಣ ರಾಜೂರು, ಟಿ.ಆರ್.ಚಂದ್ರಶೇಖರ ಅವರಂತಹ ನೂರಾರು ವೈಜ್ಞಾನಿಕ ಮನೋಭಾವದ ಸಂಶೋಧಕರ ಕಠಿಣ ಪರಿಶ್ರಮ ಅಡಗಿದೆ.

ಎಲ್ಲೆಲ್ಲೊ ಹೇಗೋ, ಏಕೋ ಮುಚ್ಚಿಡಲಾಗಿದ್ದ, ತಿರಸ್ಕರಿತ, ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲ್ಪಟ್ಟಿದ್ದ 22 ಸಾವಿರಕ್ಕೂ ಹೆಚ್ಚು ವಚನಗಳ ಸಂಗ್ರಹಣೆ, ಸಾವಿರಾರು ಶರಣರ ಚರಿತ್ರೆಗಳ ಬರವಣಿಗೆ, ಹತ್ತಾರು ಶಿಲಾಶಾಸನಗಳ ಶೋಧನೆ, ವಚನಗಳ ಬಹುಮುಖಿ ಅಧ್ಯಯನಗಳು, ವಚನಗಳ ಅರ್ಥೈಸುವಿಕೆ, ವಿವಿಧ ಭಾಷೆಗಳಲ್ಲಿ ವಚನಗಳ ಭಾಷಾಂತರಗಳು ಅಸಾಮಾನ್ಯ ಕೆಲಸಗಳೇ ಸರಿ. ಅವುಗಳನ್ನು 15 ಸಂಪುಟಗಳಲ್ಲಿ ಕರ್ನಾಟಕ ಸರ್ಕಾರವೇ ಎರಡು ಬಾರಿ ಪ್ರಕಟಿಸಿದೆ.

ಅದಕ್ಕೂ ಹೆಚ್ಚಾಗಿ ಸುಮಾರು ಒಂದು ಸಾವಿರಕ್ಕೂ ಹೆಚ್ಚಿನ ವಿರಕ್ತ ಮಠಗಳು ಬಸವನ ತತ್ವಗಳನ್ನು ಹೇಗೆ ಎಲ್ಲ ಅಡೆತಡೆಗಳ, ವಿರೋಧಗಳ ನಡುವೆಯೂ ಉಳಿಸಿಕೊಂಡು ಬಂದವು, ಬೆಳೆಸಿದವು ಮತ್ತು ಬಸವ ತತ್ವಗಳನ್ನು ಒಂಬೈನೂರು ವರ್ಷ ಪರಿಪಾಲಿಸಿದವು ಎನ್ನುವುದಂತೂ ಅತ್ಯಂತ ಸೋಜಿಗದ ಸಂಗತಿ.

ಸುಮಾರು 1880ರಿಂದ ಬೆಳೆದುಬಂದ ಶರಣ ಧರ್ಮ ಸಂಬಂಧಿ ಪತ್ರಿಕೆಗಳೂ ಮಹತ್ವದ ಪಾತ್ರ ವಹಿಸಿವೆ. 'ಸ್ಟಾರ್ ಆಫ್ ಮೈಸೂರು', 'ಶಿವಾನುಭವ', 'ಮಹಾಮನೆ', 'ಬಸವ ಬೆಳಗು', 'ಬಸವ ಜರ್ನಲ್', 'ಬಸವ ಪಥ', 'ಬಸವ ದರ್ಶಣ', ಮಹಾರಾಷ್ಟ್ರದ 'ಸಂಗಮ', ಆಂಧ್ರ ಪ್ರದೇಶದ 'ಬಸವ ಪ್ರಭ' ಇತ್ಯಾದಿ ನಿಯತಕಾಲಿಕ ಪತ್ರಿಕೆಗಳು ಲಿಂಗಾಯತದ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ.

ಜೊತೆಜೊತೆಗೆ, ಸಿದ್ಧಾಂತ ಶಿಖಾಮಣಿಯನ್ನು ವೈಜ್ಞಾನಿಕವಾಗಿ, ಐತಿಹಾಸಿಕವಾಗಿ ವಿಶ್ಲೇಷಿಸಿ ಅದರ ಸತ್ಯಾಸತ್ಯತೆಯನ್ನು 1942ರಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಬಿಚ್ಚಿಟ್ಟ ಎಂ.ಆರ್.ಸಾಖರೆಯವರ 'ಲಿಂಗಾಯತ ಧರ್ಮದ ಇತಿಹಾಸ ಮತ್ತು ದರ್ಶನ' ಎಂಬ ಗ್ರಂಥವಾಗಲಿ, ಕ್ರಿಶ್ಚಿಯನ್ ಧರ್ಮದ ಉತ್ತಂಗಿ ಚೆನ್ನಪ್ಪನವರಿಂದ 1940ರ ದಶಕದಲ್ಲಿ ಬರೆಯಲ್ಪಟ್ಟ 'ಅನುಭವ ಮಂಟಪ'ದ ಐತಿಹಾಸಿಕ ಅಧ್ಯಯನ ಮಹತ್ವದ ಸಾಧನೆಗಳು. ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಸೇಯಿಂಗ್ಸ್ ಆಫ್ ಬಸವಣ್ಣ', ಆರ್.ಆರ್.ದಿವಾಕರ ಅವರ 'ವಚನಶಾಸ್ತ್ರ', ಎಂ.ಆರ್.ಶ್ರೀನಿವಾಸಮೂರ್ತಿಯವರ 'ವಚನಶಾಸ್ತ್ರ ಸಾರ', ಜೊತೆಗೆ ಹತ್ತೊಂಭತ್ತನೆಯ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಪಾಶ್ಚಾತ್ಯ ಲೇಖಕರಾದ ಸಿ.ಪಿ.ಬ್ರೌನ್, ಉರ್ತ್, ವಿಲ್ಸನ್, ಕಿಟೆಲ, ವೋಗ್ಲಿಂಗ, ಜೆಂಕಿನ್ಸ್, ಎಂಥೋವೆನ್, ಎಡ್ಗರ್ ಥರ್ಸ್ಟನ್, ಅಬೆ ದುಬೈ, ಆರ್ಥರ ಮೈಲ್ಸ್, ಫ್ರಾನ್ಸಿಸ್ ಬುಕಾನನ್ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಎಚ್.ಜೆ. ಸ್ಟೋಕ್ಸ್, ಎ.ಪಿ.ರೈಸ್, ಬಿ.ಎಲ್.ರೈಸ್, ಜೇಮ್ಸ್ ಕ್ಯಾಂಬೆಲ್, ವಿಲಿಯಮ್ ಮೆಕಾರ್ಮಿಕ್, ಜೆ.ಎನ್.ಫರ್ಕೈರ್, ಮೈಕೆಲ್ ಬ್ಲೇಕ್, ಜಾನ್ ಪೀಟರ್ ಶೌಟೆನ್ ಅವರ ಗ್ರಂಥಗಳು ಲಿಂಗಾಯತವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಬಹಳಷ್ಟು ಪ್ರಮುಖ ಪಾತ್ರ ವಹಿಸಿವೆ.

ಇತ್ತೀಚೆಗೆ 2003ರಲ್ಲಿ ಮೈಸೂರು ಜಿಲ್ಲೆಯ ಕುಂದೂರಿನ ಡಾ. ಇಮ್ಮಡಿ ಶಿವಬಸವಸ್ವಾಮಿಗಳು ಸಾಧಾರಣವಾಗಿ ಬರೆದ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ ನಿಜನಿಲುವು' ಎಂಬ ಗ್ರಂಥವು ಮತ್ತು 2011ರಲ್ಲಿ ಹಂಪಿ ವಿಶ್ವವಿದ್ಯಾಲಯವು ಪ್ರಕಟಿಸಿದ ತರುಣ ಲೇಖಕ ಬೋರಟ್ಟಿ ವಿಜಯಕುಮಾರ ಅವರ 'ಹಿರಿಯರ ಹಿರಿತನ ಹಿಂದೇನಾಯಿತು' ಎಂಬ ಗ್ರಂಥ ಹಾಗೂ 2015ರಲ್ಲಿ ಬ್ರಾಹ್ಮಣ ವಿದ್ವಾಂಸರಾದ ಬಸರೂರು ಸುಬ್ಬಾರಾವ್ ಅವರ 'ಲಿಂಗಾಯತ ಫಿಲಾಸಫಿ' ಗ್ರಂಥವು ಲಿಂಗಾಯತದ ಅತ್ಯಂತ ಮಹತ್ವದ ಅಂಶಗಳ ಮೇಲೆ ಅಸಾಧಾರಣ ಬೆಳಕು ಚೆಲ್ಲಿವೆ.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಮೂಡಿಬರುವ ನಿರ್ಣಯವೆಂದರೆ ಎಲ್ಲ ಜನರನ್ನು ಎಲ್ಲ ಕಾಲಕ್ಕೂ ಮೂರ್ಖರನ್ನಾಗಿ ಮಾಡುವುದು ಸಾಧ್ಯವಿಲ್ಲ, ವೈಜ್ಞಾನಿಕ ಯುಗದಲ್ಲಿ ಕಟ್ಟುಕತೆಗಳು, ಮೂಢನಂಬಿಕೆಗಳು ಬಹಳದಿನ ಬದುಕಲಾರವು. ಈ ಅಂಶಗಳನ್ನು ವಯೋವೃದ್ಧರಾದ ಪೂಜ್ಯ ಡಾ.ಚಿದಾನಂದ ಮೂರ್ತಿಯವರು ಬೇಗ ತಿಳಿದುಕೊಂಡಷ್ಟು ಅವರಿಗೇ ಕ್ಷೇಮ. ತಮ್ಮ ಸ್ವಾರ್ಥವನ್ನು ಬದಿಗಿಟ್ಟು, ಸತ್ಯವನ್ನು ಒಪ್ಪಿಕೊಂಡರೆ ಎಲ್ಲರಿಗೂ ಒಳ್ಳೆಯದು. ಅವರಲ್ಲಿ ಪಂಚಾಚಾರ್ಯರೂ ಸೇರುತ್ತಾರೆ! ■

ಮರೆಯಾದ ಮರೆಯಲಾಗದ ಚೇತ



Rao at Physical Research Laboratory

ಯಾಕೋ ಬಹಳ ಬೇಜಾರಾಯಿತು. ಎಲ್ಲರೂ ಒಂದು ದಿನ ಸಾಯೋದೇ ಅಂತ ಗೊತ್ತಿದೆ. ಅವರೇನು ತುಂಬಾ ಚಿಕ್ಕ ವಯಸ್ಸಿನಲ್ಲೇ ನಿಧನರಾಗಿಲ್ಲ ಎಂಬುದೂ ಗೊತ್ತಿದೆ. ಆದರೂ, ಅವರು ತೀರಿಕೊಂಡರು ಎಂಬ ಸುದ್ದಿ ಕೇಳಿ ನೋವಾಯಿತು.

ಹೌದು, ನಾನು ಮಾತಾಡುತ್ತಿರುವುದು ಉಡುಪಿ ರಾಮಚಂದ್ರ ರಾವ್ (ಯು. ಆರ್. ರಾವ್) ಬಗ್ಗೆ. ಇವತ್ತು ಬೆಳಗಿನ ಜಾವ 2.30 ಸುಮಾರಿಗೆ ನಿಧನರಾದರಂತೆ.

1932 ಮಾರ್ಚ್ 10ರಂದು ಜನಿಸಿದ ಯು.ಆರ್. ರಾವ್ ಭಾರತ ಕಂಡ ಕೆಲವೇ ಮಹಾನ್ ವಿಜ್ಞಾನಿಗಳಲ್ಲಿ ಒಬ್ಬರು. ಭಾರತೀಯ ಬಾಹ್ಯಾಕಾಶ ಸಂಶೋಧನೆಗೆ ಅವರು ಕೊಟ್ಟ ಕೊಡುಗೆ ಅಪಾರವಾದದ್ದು. ಭಾರತ ಇಂದು ಚಂದ್ರಯಾನ, ಮಂಗಳಯಾನಗಳಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಿ ಜಗತ್ತಿನ ಗಮನವನ್ನು ತನ್ನತ್ತ ಸೆಳೆದಿದೆ ಎಂದರೆ ಅದಕ್ಕೆ ಭದ್ರಬುನಾದಿಯನ್ನು ಹಾಕಿದ ಬೆರಳೆಣಿಕೆಯಷ್ಟು ವಿಜ್ಞಾನಿಗಳಲ್ಲಿ ವಿಕ್ರಂ ಸಾರಾಭಾಯಿ, ಸತೀಶ್ ಧವನ್ ಮತ್ತು ಪ್ರೊ.ಯು.ಆರ್. ರಾವ್ ಕೂಡ ಇದ್ದಾರೆ. ಬಡತನದಲ್ಲಿ ಹುಟ್ಟಿ, ಬೆಳೆದ ಪ್ರತಿಭೆಯೊಂದು ಯಾವ ಎತ್ತರಕ್ಕೆ ಏರಬಹುದು, ಉತ್ತುಂಗದಲ್ಲಿದ್ದಾಗಲೂ ಹೇಗೆ ಸರಳ, ಸಜ್ಜನಿಕೆಯಿಂದ ಬದುಕಬಹುದು ಎಂಬುದಕ್ಕೆ ಯು.ಆರ್. ರಾವ್ ಒಂದು ಜೀವಂತ ಉದಾಹರಣೆ.


ಉಡುಪಿಯಲ್ಲಿ ಹತ್ತನೇ ತರಗತಿಯ ತನಕ ಓದಿದ ಮೇಲೆ ಯು.ಆರ್.ರಾವ್ ಅವರಿಗೆ ವಿದ್ಯಾಭ್ಯಾಸ ಮುಂದುವರೆಸುವುದು ಸವಾಲಾಗಿತ್ತು. ಏಕೆಂದರೆ, ಆಗ ಉಡುಪಿಯಲ್ಲಿ ಕಾಲೇಜು ಇರಲಿಲ್ಲ, ಮಂಗಳೂರಿನಲ್ಲಿದ್ದರೂ ಅಲ್ಲಿ ರೊಕ್ಕ ಕೊಟ್ಟು ಓದುವಷ್ಟು ಆರ್ಥಿಕ ಚೈತನ್ಯ ಅವರಿಗಿರಲಿಲ್ಲ. ಕೊನೆಗೆ ಯಾರದ್ದೋ ಮೂಲಕ ಬಳ್ಳಾರಿಗೆ ಹೋಗಿ ಕಾಲೇಜು ಸೇರಿಕೊಂಡರು. ಬಳ್ಳಾರಿಯಲ್ಲಿ ವಾರನ್ನ ಮಾಡಿಕೊಂಡೇ ವಿದ್ಯಾಭ್ಯಾಸ ಮಾಡಿದರು. ಇಂತಹ ಕಷ್ಟಕಾರ್ಪಣ್ಯಗಳನ್ನು ದಿಟ್ಟವಾಗಿ ಎದುರಿಸಿದ ಅವರು ವಿಶ್ವದ ಅತ್ಯಂತ ಶ್ರೇಷ್ಠ ವಿಜ್ಞಾನ-ತಂತ್ರಜ್ಞಾನ ಸಂಸ್ಥೆ ಎಂಬ ಹೆಗ್ಗಳಿಕೆ [illegible]ನಾದ ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಮ್‌ಐಟಿ) ಯಲ್ಲಿ ಸ್ಟಾಫ್ ಮೆಂಬರ್ ಆಗುವ, ಟೆಕ್ಸಾಸ್ ಯೂನಿವರ್ಸಿಟಿಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗುವ ಹಂತಕ್ಕೆ ಬೆಳೆದರಲ್ಲದೇ, ವಿಶ್ವದ ಮಹಾನ್ ಖಗೋಳ ವಿಜ್ಞಾನಿಗಳ ಸಾಲಿನಲ್ಲಿ ನಿಂತು ಭಾರತಕ್ಕೆ ಕೀರ್ತಿ ತಂದರು.

ನಾನು ಯು.ಆರ್. ರಾವ್ ಅವರನ್ನು ಒಂದೇ ಬಾರಿ ಭೇಟಿ ಮಾಡಿದ್ದು. 2012ರಲ್ಲಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಘಟನೆ (ಇಸ್ರೋ) ತನ್ನ 100ನೇ ಮಿಷನ್ ಅನ್ನು ಯಶಸ್ವಿಯಾಗಿ ಪೂರೈಸಿದಾಗ ಅವರನ್ನು ಸಂದರ್ಶನ ಮಾಡುವುದಕ್ಕೆ ಬೆಂಗಳೂರಿನ ಇಸ್ರೋ ಕ್ಯಾಂಪಸ್ಸಿಗೆ ಹೋಗಿದ್ದೆ. ಗೆಳೆಯ ಹರ್ಷಕುಮಾರ್ ಕುಗ್ವೆ ಕೂಡ ಜೊತೆಗೆ ಬಂದಿದ್ದ. ಅವರ ಆಫೀಸಿನಲ್ಲಿ ನಡೆದ ಒಂದೂವರೆ ತಾಸಿನ ಆ ಭೇಟಿ ನನ್ನ ಬದುಕಿನ ಅಮೂಲ್ಯ ಕ್ಷಣ ಎಂದೇ ನಾನು ತಿಳಿದುಕೊಂಡಿದ್ದೇನೆ.

ಅರ್ಧಂಬರ್ಧ ತಿಳಿದುಕೊಂಡ ಜನ ಮಾಡುವ ಧಿಮಾಕನ್ನು ನೋಡಿದಾಗ ನನಗೆ ಆಗಾಗ ಯು.ಆರ್.ರಾವ್ ಮತ್ತು ಜಿ.ವೆಂಕಟಸುಬ್ಬಯ್ಯ ನೆನಪಾಗುತ್ತಾರೆ. ತಮ್ಮ ತಮ್ಮ ಕ್ಷೇತ್ರದಲ್ಲಿ ಜ್ಞಾನದ ಉತ್ತುಂಗಕ್ಕೇರಿದರೂ ಅವರಲ್ಲಿರುವ ಸರಳತೆಯನ್ನು ಕಂಡು ನಾನು ಬೆರಗಾಗಿದ್ದುಂಟು. ಇವರಿಬ್ಬರನ್ನೂ ನಾನು ಒಮ್ಮೆ ಮಾತ್ರ ಭೇಟಿಯಾಗಿದ್ದು, ಸಂದರ್ಶಿಸುವುದಕ್ಕಾಗಿ. ಭೇಟಿಯಾಗುವ ಮುನ್ನ ಇಂತಹ ಮಹಾನ್ ವ್ಯಕ್ತಿಗಳನ್ನು ಸಂದರ್ಶಿಸುವುದಕ್ಕೆ ಹೊರಟಾಗ ಹುಲುಮಾನವರಿಗೆ ಸಹಜವಾಗಿ ಆಗುವ ಭಯ ನನಗೂ ಆಗಿತ್ತು, ನಾನು ನರ್ವಸ್ ಆಗಿದ್ದೆ. ಆದರೆ, ಸಂದರ್ಶನ ಮುಗಿಸಿಹೊರಬಂದಾಗ ಉಲ್ಲಸಿತನಾಗಿದ್ದೆ. ಅವರ ಅಭಿಮಾನಿಯಾಗಿದ್ದೆ. ಒಬ್ಬ ಅಜ್ಜ ತನ್ನ ಮೊಮ್ಮಗನ ಜೊತೆ ಹೇಗೆ ಪ್ರೀತಿ, ಆತ್ಮೀಯತೆಯಿಂದ ತಪ್ಪನ್ನು ತಿದ್ದುತ್ತಾ ಮಾತಾಡುತ್ತಾರೋ ಹಾಗೇ ಅವರಿಬ್ಬರೂ ನನ್ನೊಂದಿಗೆ ಮಾತಾಡಿದ್ದರು. ಅವರ ಸರಳತೆ ಮತ್ತು ಆತ್ಮೀಯತೆಗಳು ಅವರು ಗಳಿಸಿದ ಅಪಾರ ಜ್ಞಾನಸಂಪತ್ತಿಗೆ ಮತ್ತಷ್ಟು ಶೋಭೆ ತಂದಿದ್ದವು. ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆಗೆ ಜೀವಂತ ನಿದರ್ಶನದಂತೆ ಅವರಿದ್ದರು.

ನಾವು ಸಣ್ಣವರಿದ್ದಾಗ ಶಾಲೆಯಲ್ಲಿ ಭಾರತದ ಮೊಟ್ಟ ಮೊದಲ ಉಪಗ್ರಹ ಆರ್ಯಭಟ ಎಂದು ಕಲಿತಿದ್ದೇವಲ್ಲವೆ? ಹಲವು ಪರೀಕ್ಷೆಗಳಲ್ಲಿ ಈ ಕುರಿತ ಪ್ರಶ್ನೆಗೆ ಸರಿಯಾದ ಉತ್ತರ ಬರೆದಿದ್ದೇವಲ್ಲವೆ? ಎಪ್ಪತ್ತರ ದಶಕದ ಆರಂಭದಲ್ಲಿ ಅದನ್ನು ನಿರ್ಮಿಸಿದ ಇನ್ನೂರೈವತ್ತು ಯುವ ವಿಜ್ಞಾನಿಗಳ, ಎಂಜಿನಿಯರುಗಳ ಉತ್ಸಾಹಿ ತಂಡಕ್ಕೆ ನೇತೃತ್ವ ವಹಿಸಿದವರು ಇದೇ ಪ್ರೊ. ಯು.ಆರ್. ರಾವ್. ಭಾರತವಿನ್ನೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೆಜ್ಜೆಯನ್ನೇ ಇಟ್ಟಿರದ ಆ ಸಮಯದಲ್ಲಿ ಯು.ಆರ್. ರಾವ್ ಆಗಲೇ ಅಮೆರಿಕದ ಬಾಹ್ಯಾಕಾಶ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪಿಎಚ್‌ಡಿ ಮುಗಿದಮೇಲೆ ವಿಶ್ವದ ಸರ್ವಶ್ರೇಷ್ಠ ವಿಜ್ಞಾನ-ತಂತ್ರಜ್ಞಾನ ಸಂಸ್ಥೆಯಾಗಿರುವ ಎಂಐಟಿಯಲ್ಲಿ ಸ್ಟಾಫ್ ಮೆಂಬರ್ ಆಗಿ, ಟೆಕ್ಸಾಸ್ ಯೂನಿವರ್ಸಿಟಿಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ರಾವ್ ಕೆಲಸ ಮಾಡಿದ್ದರು. ಆ ಸಮಯದಲ್ಲೇ ಅವರು ಅಮೆರಿಕದ ಆರಂಭಿಕ ಉಪಗ್ರಹ ಯೋಜನೆಗಳಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದರು.


ರಾವ್ ಅವರು ಭಾರತಕ್ಕೆ ಮರಳಿದಾಗ ಭಾರತೀಯ ಬಾಹ್ಯಾಕಾಶ ಸಂಶೋಧನೆಗೆ ಹೊಸ ದಿಕ್ಕುದೆಸೆಗಳನ್ನು ರೂಪಿಸಿದ ವಿಜ್ಞಾನಿ ವಿಕ್ರಂ ಸಾರಾಭಾಯಿಯವರು ಇವರನ್ನು ಭೇಟಿ ಮಾಡಿ ಭಾರತೀಯ ಬಾಹ್ಯಾಕಾಶ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ವಿನಂತಿಸಿಕೊಂಡರು. ಆ ಮನವಿಯನ್ನು ಒಪ್ಪಿಕೊಳ್ಳುವುದಕ್ಕೆ ರಾವ್ ಬರೋಬ್ಬರಿ ಎರಡು ವರ್ಷ ತೆಗೆದುಕೊಂಡರು. ದೊಡ್ಡ ಕೆಲಸವನ್ನು ಹುಮ್ಮಸ್ಸಿನಿಂದ ಒಪ್ಪಿಕೊಂಡು ಅದನ್ನು ಸಾಧಿಸಲಾಗದೇ ಹೋದರೆ ವಿಶ್ವದ ಎದುರು ತನ್ನ ದೇಶ ನಗೆಪಾಟಲಿಗೆ ಈಡಾಗಬೇಕಾಗುತ್ತದೆಂಬ ಭಯ ಅವರನ್ನು ಕಾಡುತ್ತಿತ್ತು, ಬಹಳಷ್ಟು ಯೋಚನೆ ಮಾಡಿ ನಂತರ ಒಪ್ಪಿಕೊಂಡರು. (ಆಗಿನ್ನೂ ಎಪಿಜೆ ಅಬ್ದುಲ್ ಕಲಾಮ್ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರಲಿಲ್ಲ, ವಿಕ್ರಂ ಸಾರಾಭಾಯಿ ನಿಧನದ ನಂತರವಷ್ಟೇ ಕಲಾಂ ಅವರು ಭಾರತದ ಮೊದಲ ರಾಕೆಟ್ ಯೋಜನೆಯ ನಿರ್ದೇಶಕರಾದರು).



ಆಗ ನಡೆದ ಚರ್ಚೆಯನ್ನು ಪ್ರೊ.ರಾವ್ ಚೆನ್ನಾಗಿ ವಿವರಿಸಿದರು. ಬಹಳ ದುಬಾರಿಯಾದ ಉಪಗ್ರಹ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದರೆ ಮೊದಲನೆಯದಾಗಿ ಉಪಗ್ರಹ ಏಕೆ ಅಗತ್ಯ ಎಂಬುದನ್ನು ದೇಶಕ್ಕೆ ಮನವರಿಕೆ ಮಾಡಿಕೊಡಬೇಕೆಂದು ವಿಕ್ರಮ್ ಸಾರಾಭಾಯಿ, ಅಂದಿನ ಇಸ್ರೋ ಅಧ್ಯಕ್ಷ ಸತೀಶ್ ಧವನ್ ಮತ್ತು ಯು.ಆರ್. ರಾವ್ ನಿರ್ಧರಿಸುತ್ತಾರೆ. ಹೆಲಿಕಾಪ್ಟರ್ ಮೂಲಕ ತೆಗೆದು ಕೇರಳದ ಅಡಿಕೆ ತೋಟಗಳ ಚಿತ್ರಗಳನ್ನು, ಕರ್ನಾಟಕದ ಮಂಡ್ಯ ಭಾಗದಲ್ಲಿ ತೆಂಗಿನ ಮರಗಳ ಚಿತ್ರಗಳನ್ನು ತೆಗೆದುಕೊಂಡು ಪ್ರಧಾನಮಂತ್ರಿಗಳ ಕಾರ್ಯಾಲಯಕ್ಕೆ ಹೋಗುತ್ತಾರೆ. ಆಗ ಇಂದಿರಾ ಗಾಂಧಿ ಪ್ರಧಾನಿ. ಹೆಲಿಕಾಪ್ಟರ್ ಮೂಲಕ ತೆಗೆದ ಚಿತ್ರಗಳನ್ನು ತೋರಿಸಿ ತೆಂಗು ಮತ್ತು ಅಡಿಕೆ ಬೆಳೆಗಳಿಗೆ ಬಂದಿರುವ ರೋಗವನ್ನು ಪ್ರಧಾನಿಗೆ ವಿವರಿಸುತ್ತಾರೆ. ಆಗ ಇಂದಿರಾ ಗಾಂಧಿಯವರು "ಈ ರೋಗದ ಬಗ್ಗೆ ರೈತರಿಗೆ ಗೊತ್ತಿಲ್ಲವೆ?" ಅಂತ ಈ ವಿಜ್ಞಾನಿಗಳನ್ನು ಕೇಳುತ್ತಾರೆ. "ಇಲ್ಲ, ರೈತರು ಆರೇಳು ತಿಂಗಳುಗಳ ನಂತರ ಅಡಿಕೆ, ತೆಂಗಿನ ಮರಗಳನ್ನು ಹತ್ತಿದಾಗ ಮಾತ್ರ ಅವರಿಗೆ ಇದು ತಿಳಿಯುತ್ತದೆ. ಅಷ್ಟು ಹೊತ್ತಿಗಾಗಲೇ ಕಾಲ ಮಿಂಚಿರುತ್ತದೆ" ಎಂದು ವಿವರಿಸುತ್ತಾರೆ. ಉಪಗ್ರಹಗಳಿದ್ದರೆ ಅವುಗಳ ಮೂಲಕ ರೋಗ ಬಂದಾಕ್ಷಣವೇ ಗುರುತಿಸಬಹುದು, ನಿವಾರಣೆಗೆ ಕ್ರಮ ಕೈಗೊಳ್ಳಬಹುದು ಅಂತ ಪ್ರಧಾನಿಗೆ ಹೇಳುತ್ತಾರೆ. ಜೊತೆಗೆ, ಸಂವಹನ, ಸಂಪರ್ಕ, ಪ್ರಾಕೃತಿಕ ವಿಕೋಪ, ಹವಾಮಾನ, ಖನಿಜಾನ್ವೇಷಣೆ ಇತ್ಯಾದಿಗಳ ವಿಷಯದಲ್ಲೂ ಉಪಗ್ರಹಗಳು ಹೇಗೆ ಮುಖ್ಯ ಎಂಬುದನ್ನೂ ಎಳೆಎಳೆಯಾಗಿ ಬಿಡಿಸಿಡುತ್ತಾರೆ. ಇಂದಿರಾ ಗಾಂಧಿಗೆ ಮನವರಿಕೆಯಾಗಿ ಉಪಗ್ರಹ ಯೋಜನೆಗೆ ಹಸಿರು ನಿಶಾನೆ ತೋರುತ್ತಾರೆ.

ಸರ್ವೇಕ್ಷಣೆಗೆ, ಸಂವಹನಕ್ಕೆ ಉಪಗ್ರಹವೊಂದನ್ನು ಬಾಹ್ಯಾಕಾಶ ಕಕ್ಷೆಯಲ್ಲಿಡಬೇಕಾದರೆ ಅದಕ್ಕೆ ಎರಡು ಅಂಶಗಳು ಅತ್ಯವಶ್ಯ: ಒಂದನೆಯದು, ಉಪಗ್ರಹ ಮತ್ತು ಎರಡನೆಯದು ಅದನ್ನು ಹೊತ್ತೊಯ್ಯುವುದಕ್ಕೆ ಅವಶ್ಯವಿರುವ ರಾಕೆಟ್. ಅಂದಿನ ಪರಿಸ್ಥಿತಿಯಲ್ಲಿ ಎರಡನ್ನೂ ಜೊತೆಯಾಗಿ ಕೈಗೆತ್ತಿಕೊಳ್ಳುವುದಕ್ಕೆ ಭಾರತಕ್ಕೆ ಸಾಧ್ಯವಿರಲಿಲ್ಲ. ಹಾಗಾಗಿ, ಕನಿಷ್ಠ ಉಪಗ್ರಹವನ್ನು ಸಿದ್ಧಪಡಿಸಿಕೊಂಡರೆ ಬೇರೆ ದೇಶಗಳ ರಾಕೆಟ್ ಮೂಲಕ ಅದನ್ನು ನಿಗದಿತ ಕಕ್ಷೆಗೆ ಸೇರಿಸಬಹುದು ಎಂದು ವಿಕ್ರಮ್ ಸಾರಾಭಾಯಿ, ಅಂದಿನ ಇಸ್ರೋ ಅಧ್ಯಕ್ಷ ಸತೀಶ್ ಧವನ್ ಮತ್ತು ಯು.ಆರ್. ನೇತೃತ್ವದ ತಂಡ ನಿರ್ಧರಿಸುತ್ತದೆ. ಅಂತೆಯೇ ಭಾರತದ ಮೊದಲ ಉಪಗ್ರಹ ಯೋಜನೆಗೆ ಯು.ಆರ್. ರಾವ್ ನಿರ್ದೇಶಕರಾಗುತ್ತಾರೆ. ಮೊದಲ ಉಪಗ್ರಹಕ್ಕೆ ಪ್ರಾಚೀನ ಭಾರತದ ಖಗೋಳ ವಿಜ್ಞಾನಿ ಆರ್ಯಭಟನ ಹೆಸರು ಇಡುತ್ತಾರೆ. ಎರಡು ವರ್ಷಗಳ ಒಳಗೆ ಆರ್ಯಭಟವನ್ನು ಸಿದ್ಧಪಡಿಸುವುದಾಗಿ ಯು.ಆರ್. ರಾವ್ ಅವರು ವಿಕ್ರಮ್ ಸಾರಾಭಾಯಿಗೆ ಮಾತು ಕೊಡುತ್ತಾರೆ. 1972 ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಶುರುವಾದ ಆರ್ಯಭಟ ಉಪಗ್ರಹ 1975ರ ಏಪ್ರಿಲ್ ಹೊತ್ತಿಗೆ ಸಿದ್ಧವಾಗುತ್ತದೆ. ಅದನ್ನು ಅಂದಿನ ಸೋವಿಯಟ್ ಯೂನಿಯನ್ (ರಷ್ಯಾ) ದೇಶಕ್ಕೆ ತೆಗೆದುಕೊಂಡು ಹೋಗಿ ರಷ್ಯನ್ನರ ರಾಕೆಟ್ ಮೇಲೆ ಕೂರಿಸಿ ಬಾಹ್ಯಾಕಾಶ ಕಕ್ಷೆಗೆ ಸೇರಿಸಲಾಗುತ್ತದೆ. ಈ ಆರ್ಯಭಟವನ್ನು ನಿರ್ಮಿಸಿದ ವಿಜ್ಞಾನಿಗಳ, ಎಂಜಿನಿಯರುಗಳ, ತಂತ್ರಜ್ಞರ ತಂಡದ ಸರಾಸರಿ ವಯಸ್ಸು 25!! ಅದರಲ್ಲಿ ಅತ್ಯಂತ ಹಿರಿಯ ವಯಸ್ಸಿನ ವ್ಯಕ್ತಿ ಎಂದರೆ 40 ವರ್ಷದ ಯು.ಆರ್. ರಾವ್!

ಆರ್ಯಭಟ ಬಾಹ್ಯಾಕಾಶದಲ್ಲಿ ಕಾರ್ಯನಿರ್ವಹಿಸಿದ್ದು ಕೇವಲ ಐದು ದಿನ ಮಾತ್ರ. ಇಂಧನ ವೈಫಲ್ಯದಿಂದಾಗಿ ಅದು ಭೂಮಿಯೊಂದಿಗಿನ ಸಂಪರ್ಕ ಕಳೆದುಕೊಂಡಿತು. ಆದರೆ, ಅದು ಭಾರತೀಯ ಬಾಹ್ಯಾಕಾಶ ಸಂಶೋಧನೆಗೆ ಭದ್ರ ಬುನಾದಿಯನ್ನು ಹಾಕಿತ್ತು. ಆಗ ಸೋವಿಯಟ್ ಒಕ್ಕೂಟ ಮತ್ತು ಭಾರತದ ಬಾಂಧವ್ಯ ಬಹಳ ಉತ್ತಮವಾಗಿದ್ದ ಕಾರಣ ಆರ್ಯಭಟವನ್ನು ಬಾಹ್ಯಾಕಾಶ ಕಕ್ಷೆಗೆ ಸೇರಿಸುವುದಕ್ಕೆ ರಷ್ಯನ್ನರು ಯಾವುದೇ ದುಡ್ಡು ತೆಗೆದುಕೊಳ್ಳಲಿಲ್ಲ. ಆದಾದ ಮೇಲೆ ಮತ್ತೆ ಯು.ಆರ್.



ರಾವ್ ಅವರ ನೇತೃತ್ವದಲ್ಲೇ ಭಾಸ್ಕರ್-1 ಮತ್ತು [illegible] ಉಪಗ್ರಹಗಳು ಸಿದ್ಧವಾದವು. ಅವುಗಳನ್ನ[illegible] ಕೊಂಡೊಯ್ದು ರಷ್ಯನ್ನರ ರಾಕೆಟುಗಳ [illegible] ಬಾಹ್ಯಾಕಾಶ ಕಕ್ಷೆಗೆ ಸೇರಿಸಲಾಯಿತು. ಇವುಗಳ[illegible] ಉಚಿತವಾಗಿ ಲಾಂಚ್ ಮಾಡಿಕೊಟ್ಟರು. "[illegible] ಲಾಂಚ್‌ಗಳು ಅಂದಿನ ನಮ್ಮ ಆರ್ಥಿಕ ಪ[illegible] ಗಮನಿಸಿದರೆ ಬಹಳ ದೊಡ್ಡ ನೆರವಾಗಿದ್ದವ[illegible] ರಾವ್ ಹೇಳುತ್ತಾರೆ.

ಹೀಗೆ ಸೊನ್ನೆಯಿಂದ ಶುರುವಾದ [illegible] ಬಾಹ್ಯಾಕಾಶ ಸಂಶೋಧನೆ ಇಂದು ಇಷ್ಟು ದೊ[illegible] ಬೆಳೆದುನಿಂತಿದೆ. ನಾವು ಬೇರೆ ದೇಶಗಳಿಗೆ ಹೋ[illegible] ರಾಕೆಟ್ ಮೂಲಕ ನಮ್ಮ ಉಪಗ್ರಹಗಳನ್ನು ಹಾ[illegible] ಈಗ ನಾವೇ ಬೇರೆ ದೇಶಗಳ ಉಪಗ್ರ[illegible] ಹಾರಿಸುತ್ತಿದ್ದೇವೆ. ಚಂದ್ರಯಾನ, ಮಂಗಳಯಾ[illegible] ಮಹತ್ವಪೂರ್ಣ ಬಾಹ್ಯಾಕಾಶ ಯೋಜ[illegible] ಯಶಸ್ವಿಗೊಳಿಸಿದ್ದೇವೆ. ಇಸ್ರೋದ ಈ ಸಾಧನೆ[illegible] ವಿಕ್ರಂ ಸಾರಾಬಾಯ್, ಯು.ಆರ್. ರಾವ್, ಸತೀ[illegible] ಅವರ ಪರಿಶ್ರಮ ಬಹಳಷ್ಟಿದೆ.

ಭೂಮಿಯನ್ನು ಹೊರತುಪಡಿಸಿ ಬೇರೆ[illegible] ಹೋಗಿ ನೆಲೆಸುವುದಕ್ಕೆ ಮನುಷ್ಯನಿಗೆ ಸಾಧ್ಯವಾ[illegible] ನಾನು ಯು.ಆರ್. ರಾವ್ ಅವರನ್ನು ಕೇಳಿದ್ದೆ. [illegible] ಮರುಕ್ಷಣದಲ್ಲೇ **"I think we can liv-[illegible] planet one day"** ಅಂದಿದ್ದರು! ನಿ[illegible] ಅಂದುಕೊಂಡಿದ್ದು ಇಂದು ಸಾಧ್ಯವಾಗಿದೆ. ಇಂ[illegible] ಅನ್ನಿಸುವುದು ಮುಂದೆ ಸಾಧ್ಯವಾಗುತ್ತದೆ ಎಂ[illegible] ಗ್ರಹದಲ್ಲಿ ಮನುಷ್ಯ ವಾಸಿಸುವ ಸಾಧ್ಯತೆಯ[illegible] ಬಲವಾಗಿ ಪ್ರತಿಪಾದಿಸಿದರು. ಅದಕ್ಕೆ ವಿಶ್ವದ[illegible] ವೈಜ್ಞಾನಿಕ ಕಾಲ್ಪನಿಕ ಕಾದಂಬರಿಕಾರ ಆರ್ಥ[illegible] ಅವರ ವೈಜ್ಞಾನಿಕ ಊಹೆಗಳನ್ನು ಸಮರ್ಥನೆಯಾ[illegible] ನಾವಿಂದು ನೋಡುವ, ಪ್ರಯೋಜನ ಪಡೆ[illegible] ಸಂವಹನ ಉಪಗ್ರಹ ಪ್ರಾರಂಭವಾಗಿದ್ದೇ ಒಂದ[illegible] ಕತೆಯಾಗಿ. ಆರ್ಥರ್ ಕ್ಲಾರ್ಕ್ ತನ್ನ ಕಾದಂಬರಿ[illegible] ಈ ಬಗ್ಗೆ ಸುಮ್ಮನೇ ಊಹಿಸಿಕೊಂಡು ಬರೆದಿ[illegible] ಕಲ್ಪನೆಯ ಕಾದಂಬರಿ ಬಿಡುಗಡೆಯಾದ. ಹನ್ನೆರ[illegible] ಸರಿಯಾಗಿ ವಿಶ್ವದ ಮೊಟ್ಟ ಮೊದಲ ಸಂವಹನ[illegible] ಬಾಹ್ಯಾಕಾಶದಲ್ಲಿ ಭೂ ಕಕ್ಷೆಯನ್ನು ಸೇರಿತು ಎ[illegible] ಮನಮುಟ್ಟುವಂತೆ ವಿವರಿಸಿದರು. "ಅದಕ್ಕೆ[illegible] ಹೇಳೋದು, ಇಂದಿನ ವಿಜ್ಞಾನ ನಿನ್ನೆಯ ಕಲ್ಪ[illegible] ತಂತ್ರಜ್ಞಾನ ಎಂದು" ಅಂತ ರಾವ್ ಹೇಳು[illegible]

ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ [illegible] ಮುಂದಿನ ಪ್ರಮುಖ ಹೆಜ್ಜೆ ಏನಾಗಬಹುದ[illegible] ನಾನವರನ್ನು ಕೇಳಿದಾಗ ಅವರು ಬಹಳ [illegible] ಸಾಧ್ಯತೆಗಳನ್ನು ವಿವರಿಸಿದರು. ಈಗ ನಾವ[illegible] ಹುಡುಕಾಟದಲ್ಲಿದ್ದೇವೆ, ನಾಳೆ ಗ್ರಹಗಳ ಬಳಕೆಗೆ [illegible] **(planetary exploration and pl[illegible] exploitation)** ಎಂದಿದ್ದರು. ಅನ್ಯಗ್ರಹ[illegible] ಅಪರಿಮಿತ ಸಂಪನ್ಮೂಲಗಳನ್ನು ಭೂಮಿಗೆ ತಂ[illegible] ತನ್ನ ಬಳಕೆಗೆ ಬಳಸಿಕೊಳ್ಳಬಹುದು ಎಂದ[illegible] ತರ್ಕಬದ್ಧವಾಗಿ ವಿವರಿಸಿದರು. ಭೂಮಿಯ ಮೇ[illegible] ಇನ್ನೂರು ವರ್ಷಗಳಲ್ಲಿ ಖಾಲಿಯಾಗುತ್ತ[illegible] ಪರಿಹಾರವಾಗಿ ಅನ್ಯಗ್ರಹಗಳ ಶಕ್ತಿಸಂಪನ್ಮ[illegible] ಬಳಸಿಕೊಳ್ಳಬೇಕು ಎಂದರು. ಚಂದ್ರನಲ್ಲಿರುವ [illegible] ಅನ್ನು ಭೂಮಿಗೆ ತಂದರೆ ಹತ್ತು ಸಾವಿರ ವರ್ಷ[illegible] ಭೂಮಿಯ ಮೇಲಿನ ಮನುಷ್ಯನ ಇಂಧನ [illegible] ಪೂರೈಸಬಹುದು ಎಂದರು. ಆದರೆ, ಅದ[illegible]

...ಕೆಂಡರೆ ದುಬಾರಿಯಾಗಿರುವ ರಾಕೆಟ್ ಅಗ್ಗವಾಗಬೇಕು ...ಮು. ಒಮ್ಮೆ ಗ್ರಹಗಳ ಬಳಕೆ ಶುರುವಾದರೆ ಭೂಮಿಯ ...ರುವ ದೇಶಗಳು ಆ ಅನ್ಯಗ್ರಹ ಸಂಪನ್ಮೂಲಗಳನ್ನು ...ು ಎಷ್ಟು ಬಳಸಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ...ಸಂಪತ್ತಿನ ಉಪಯೋಗ ಎಲ್ಲಾ ದೇಶಗಳಿಗೂ ...ಸಮನಾಗಿ ದೊರೆಯಬೇಕೆಂದರೆ ಅದಕ್ಕೊಂದು ...ರರಾಷ್ಟ್ರೀಯ ಕಾನೂನು ಬೇಕಾಗುತ್ತದೆ. ಈ ನಿಟ್ಟಿನಲ್ಲಿ ...ಆರ್. ರಾವ್ ಅವರು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ...ಬಾಹ್ಯಾಕಾಶದ ಶಾಂತಿಯುತ ಬಳಕೆಗಾಗಿನ ಸಮಿತಿಯ ...ited Nations - Committee on ...ceful Uses of Outer Space) ...ರಾಗಿದ್ದಾಗ ಒಂದು ಅಂತರರಾಷ್ಟ್ರೀಯ ಕಾನೂನು ...ವುದಕ್ಕೆ ಚಾಲನೆ ಕೊಟ್ಟಿದ್ದರು.

...ವಿಧ ದೇಶಗಳ ಬಾಹ್ಯಾಕಾಶ ಸಾಧನೆಗಳ ಬಗ್ಗೆ ...ಡುತ್ತಾ ಯು.ಆರ್.ರಾವ್ ಅವರು ಚೀನಾದ ...ಯನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದರು. ಭಾರತ ...ಕಾಶ ಸಂಶೋಧನೆಗೆ ಕೈಹಾಕಿದ ಬಹಳಷ್ಟು ವರ್ಷಗಳ ...ಚೀನಾ ಆ ಕ್ಷೇತ್ರಕ್ಕೆ ಕಾಲಿಟ್ಟಿದ್ದು. ಭಾರತ ತನ್ನ ...ಲ ಸಂವಹನ ಉಪಗ್ರಹವನ್ನು ಹಾರಿಬಿಟ್ಟ ಹತ್ತು ...ಗಳ ನಂತರ ಚೀನಾ ತನ್ನ ಮೊದಲ ಸಂವಹನ ...ಗ್ರಹವನ್ನು ಹಾರಿಬಿಟ್ಟಿತು (1988ರಲ್ಲಿ). ಆದರೂ ...ಭಾರತವನ್ನು ಹಿಂದಿಕ್ಕಿ ವೇಗವಾಗಿ ಮುನ್ನುಗ್ಗುತ್ತಿದೆ. ...ದ ರಾಕೆಟ್‌ಗಳು 2.5 ಟನ್ ತೂಕದ ಉಪಗ್ರಹವನ್ನು ...ಕೊಯ್ಯುವ ಸಾಮರ್ಥ್ಯ ಹೊಂದಿದ್ದರೆ ಚೀನಾದ ...ಟ್‌ಗಳು 10 ಟನ್ ಭಾರದ ಉಪಗ್ರಹಗಳನ್ನು ...ತ್ತೊಯ್ಯುವ ಸಾಮರ್ಥ್ಯ ಹೊಂದಿವೆ. ನಮ್ಮ ರಾಕೆಟ್‌ಗಳು ... ತೂಕವನ್ನು ಹೊತ್ತೊಯ್ಯುವ ಸಾಮರ್ಥ್ಯ ...ದಿಲ್ಲದಿರುವುದೇ ನಾವು ಇನ್ನೂ ಮನುಷ್ಯ-ಸಹಿತ ...ಕಾಶ ಯೋಜನೆಯನ್ನು (Manned Mission) ...ಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಯು.ಆರ್. ... ಪದೇಪದೇ ಹೇಳುತ್ತಿದ್ದರು. ಮನುಷ್ಯನನ್ನು ಚಂದ್ರ ...ಕ್ಕೋ, ಮಂಗಳ ಗ್ರಹಕ್ಕೋ ಹೊತ್ತೊಯ್ಯಬೇಕೆಂದರೆ ... ಹೋಗಿ ವಾಪಸ್ ಬರುವ ತನಕ ವ್ಯಕ್ತಿಗಳನ್ನು, ... ಅಗತ್ಯವನ್ನು ಪೂರೈಸುವ ವಸ್ತುಗಳನ್ನೂ ...ತ್ತೊಯ್ಯಬೇಕೆಂದರೆ ಕನಿಷ್ಠ 5 ಟನ್ ತೂಕವನ್ನು ...ತ್ತೊಯ್ಯುವ ಸಾಮರ್ಥ್ಯವಾದರೂ ನಮ್ಮ ಬಾಹ್ಯಾಕಾಶ ...ಳಿಗೆ ಇರಬೇಕಾಗುತ್ತದೆ; ಆ ನಿಟ್ಟಿನಲ್ಲಿ ನಾವಿನ್ನೂ ... ಸಾಧಿಸುವುದಿದೆ ಎಂದು ರಾವ್ ಹೇಳುತ್ತಿದ್ದರು.


...ಸ್ರೋ ಯಾವುದಾದರೂ ಹೊಸ ಯೋಜನೆಯನ್ನು ...ಕೊಂಡಾಗ ಮೊಟ್ಟ ಮೊದಲು ಎದುರಿಸುವ ಪ್ರಶ್ನೆ ...ಷ್ಟೊಂದು ಖರ್ಚು ಮಾಡುವುದು ಭಾರತದಂತಹ ...ದೇಶಕ್ಕೆ ಅಗತ್ಯವಿದೆಯೇ? ಅದೇ ಹಣವನ್ನು ಬಡತನ ...ರ್ಮೂಲನೆಗೆ ವ್ಯಯಿಸಬಹುದಲ್ಲವೆ?" ಎಂಬುದು. ಈ ...ಗೂ ರಾವ್ ಬಳಿ ತಿರಸ್ಕರಿಸಲಾಗದ ಉತ್ತರವಿತ್ತು. ...ನ್ನ ಒಲಿಂಪಿಕ್ ಕ್ರೀಡೆಗಳಿಗೆ ನೂರಾರು ಕ್ರೀಡಾಪಟು ...ನ್ನು ಕಳಿಸುತ್ತೇವೆ. ಕೋಟ್ಯಾಂತರ ಖರ್ಚು ಮಾಡುತ್ತೇವೆ. ...ಇಷ್ಟು ಹಣ ವ್ಯಯ ಮಾಡುವುದು ಅಗತ್ಯವಿದೆಯೇ ...ು ಯೋಚಿಸುವುದಿಲ್ಲ. ಇದೇ ರೀತಿಯಲ್ಲಿ ಹಲವು ...ಗಳಿಗೆ ನಾವು ಹಣವನ್ನು ವ್ಯಯಿಸುತ್ತೇವೆ. ಆವಾಗಲೂ ...ಸುವುದಿಲ್ಲ. ಇಸ್ರೋ ಸಂಸ್ಥೆಯು ಚಂದ್ರಯಾನ, ...ಗಳಯಾನಗಳಂತಹ ಮಹತ್ವಪೂರ್ಣ ಯೋಜನೆಗಳನ್ನು ...ಕೊಂಡಾಗ ಈ ಪ್ರಶ್ನೆಗಳು ಏಳುತ್ತವೆ. ಇಂತಹ ...ಜನೆಗಳು ನಾಳೆಯೇ ಪ್ರತಿಫಲ ನೀಡದಿರಬಹುದು. ...ೆ, ಖಂಡಿತವಾಗಿಯೂ ಭವಿಷ್ಯದಲ್ಲಿ ಇಡೀ ದೇಶಕ್ಕೆ, ... ವಿಶ್ವಕ್ಕೆ ಅನುಕೂಲವಾಗುತ್ತವೆ. ಹೊಸತನ್ನು ಅರಿಯುವ ...ದ ಕುತೂಹಲವೇ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳನ್ನು ... ಮನುಕುಲವನ್ನು ಮೇಲಕ್ಕೆ ಕೊಂಡೊಯ್ಯುತ್ತದೆ" ...ು ಅವರು ತರ್ಕಬದ್ಧವಾಗಿ ವಾದಿಸುತ್ತಿದ್ದರು.

...ಸ್ರೋ-ದೇವಾಸ್ ಡೀಲ್ ಮೂಲಕ ಇಸ್ರೋಗೆ ಹತ್ತಿದ ...ಹಾರದ ಕಳಂಕದ ಬಗ್ಗೆ ಕೇಳಿದಾಗ "ನಾನಿದನ್ನು ...ration ಎಂದಷ್ಟೇ ಹೇಳಬಲ್ಲೆ" ಎಂದಿದ್ದರು. ...ಶ ವಿಷಯಗಳಿಗೆ ಗಮನ ಕೊಡುವುದಿಲ್ಲ; ...ದರೂ ಯಾವುದೇ ಬಾಹ್ಯಾಕಾಶ ಯೋಜನೆಗಳಿಗೆ ...ಹನ್ನು ಕೇಳಿ ಖಂಡಿತಾ ಕೊಡುತ್ತೇನೆ ಎಂದಿದ್ದರು. ...ಮ್ಮ ಜ್ಞಾನವನ್ನು ದೇಶ ಸರಿಯಾಗಿ ಗುರುತಿಸಿದೆಯೆ? ...ಸರಿಯಾಗಿ ಬಳಸಿಕೊಳ್ಳುತ್ತಿದೆಯೇ?" ಅಂತ ನಾನು ...ಅವರನ್ನು ಕೇಳಿದಾಗ ಅವರು ಮುಗುಳ್ನಕ್ಕು, "ಅದನ್ನು ... ತೀರ್ಮಾನಿಸಬೇಕು" ಅಂದಿದ್ದರು.

...ಯು.ಆರ್.ರಾವ್ ಅವರ ನಿಧನದಿಂದ ವಿಶ್ವ ವಿಜ್ಞಾನ ... ಖಂಡಿತಾ ನಷ್ಟವಾಗಿದೆ. ಅವರಿಗೆ ಪದ್ಮಭೂಷಣ, ...ಭೂಷಣ ಪ್ರಶಸ್ತಿಗಳು ಬಂದಿವೆ. ಭಾರತರತ್ನ ಪ್ರಶಸ್ತಿ ...ಬೇಕಿತ್ತು ಅಂತ ನನಗೆ ಬಹಳ ಸಲ ಅನ್ನಿಸಿದೆ. ...ನ್ನ, ನಾಳೆ ಬಂದೇ ಬರುತ್ತೆ ಅಂತಾನೂ ಕಾದಿದ್ದೆ, ...ತ್ನ ಪ್ರಶಸ್ತಿಯನ್ನು ಯು.ಆರ್.ರಾವ್ ಅವರಿಗೆ ...ದ್ದರೆ ಪ್ರಶಸ್ತಿಯ ಗೌರವ ಹೆಚ್ಚಾಗುತ್ತಿತ್ತು.

■ ಕುಮಾರ್ ಬುರಡಿಕಟ್ಟಿ

ಫೇಸ್‌ಬುಕ್‌ನಲ್ಲಿ ಬರೆದಿರುವ ಟಿಪ್ಪಣಿ



■ ಸುರೇಶ್ ಭಟ್ ಬಾಕ್ರಬೈಲ್

ಭಾರತದ ಫ್ಯಾಸಿಸ್ಟ್ ಪ್ರಜಾಪ್ರಭುತ್ವ






ಭಾರತ ಒಂದು ಪ್ರಜಾಪ್ರಭುತ್ವ ಆಗಿರುವ ಕುರಿತು ಸಿನಿಕರಲ್ಲಿದ್ದ ಅನುಮಾನಗಳನ್ನು ಅಂತಿಮವಾಗಿ ಪ್ರಸಕ್ತ ಆಡಳಿತವು ದೃಢೀಕರಿಸಿದೆ. ಮೇ 2ರಂದು ಭಾರತದ ಪ್ರಧಾನ ಸರ್ಕಾರಿ ವಕೀಲರಾದ ಮುಕುಲ್ ರೋಹಟಗಿ "ಪ್ರಜೆಗಳು ತಮಗೆ ತಮ್ಮ ದೇಹದ ಮೇಲೆ 'ಸಂಪೂರ್ಣ' ಹಕ್ಕು ಇದೆಯೆಂದು ಸಾಧಿಸಲು ಸಾಧ್ಯವಿಲ್ಲ" ಎಂದು ಸುಪ್ರೀಂ ನ್ಯಾಯಾಲಯದ ದ್ವಿಸದಸ್ಯ ಪೀಠವೊಂದರ ಮುಂದೆ ಹೇಳಿದ್ದಾರೆ. ಆತ್ಮಹತ್ಯೆ ಮದ್ಯಪಾನ, ಗರ್ಭಪಾತಗಳಿಗೆ ಸಂಬಂಧಿಸಿದ ಕಾನೂನುಗಳ ಮೊದಲಾದ ನಿದರ್ಶನಗಳೊಂದಿಗೆ ಅವರು ಹರಿಬಿಟ್ಟ ಆಡಂಬರಯುತ ವಾಕ್ಪ್ರಹಾರದ ವೈಖರಿ ಹೇಗಿತ್ತೆಂದರೆ ಅದನ್ನು ಆಲಿಸಿದ ನ್ಯಾ! ಎ.ಕೆ.ಸಿಕ್ರಿ ಮತ್ತು ನ್ಯಾ! ಅಶೋಕ್ ಭೂಷಣ್‌ರಿಗೂ ಮುಜುಗರ ಎನಿಸಿದೆ. ಆದರೆ ಪ್ರಾಸಂಗಿಕವಾಗಿ ಸರ್ಕಾರಿ ವಕೀಲರ ಮಾತುಗಳು ಪ್ರಜಾಸತ್ತೆಯ ಮುಖವಾಡ ಧರಿಸಿರುವ ಕ್ರೂರ ಮೃಗದ ಕೋರೆಹಲ್ಲುಗಳ ದರ್ಶನವನ್ನು ಮಾಡಿಸಿದೆ. ವಾಸ್ತವದಲ್ಲಿ ರೋಹಟಗಿ ಹೇಳಿಕೆಯ ಅರ್ಥ ಏನೆಂದರೆ ಭಾರತದ ಪ್ರಭುತ್ವವು ಸಾರ್ವಭೌಮರೆನ್ನಲಾದ ಭಾರತೀಯರನ್ನು ತನಗಿಷ್ಟಬಂದಾಗ ಬಲಿ ತೆಗೆದುಕೊಳ್ಳಬಹುದು.


ಮುಸೊಲಿನಿ ತನ್ನ ಫ್ಯಾಸಿಸ್ಟ್ ಸಿದ್ಧಾಂತದಲ್ಲಿ ಸಾರಿದ್ದೂ ಇದನ್ನೆ. ಫ್ಯಾಸಿಸ್ಟ್ ಸಿದ್ಧಾಂತ ಪ್ರಭುತ್ವದ ಪ್ರಾಧಾನ್ಯವನ್ನು ಒತ್ತಿಹೇಳಿತು. ವ್ಯಕ್ತಿಯ ಹಿತಾಸಕ್ತಿಗಳು ಪ್ರಭುತ್ವದ ಹಿತಾಸಕ್ತಿಗಳ ಜತೆ ತಾಳೆಯಾದಾಗಲಷ್ಟೆ ಅದು ವ್ಯಕ್ತಿಯನ್ನು ಸ್ವೀಕರಿಸಿತು. ಭಾರತದಲ್ಲಿ ಪ್ರಭುತ್ವದಿಂದ ರದ್ದುಪಡಿಸಲಾಗದಂತಹ ನಿರ್ದಿಷ್ಟ ಹಕ್ಕುಗಳನ್ನು ಪ್ರಜೆಗಳಿಗೆ ನೀಡಿರುವ ಒಂದು ಉದಾರವಾದಿ ಪ್ರಜಾಸತ್ತೆ ಇದೆಯೆಂದು ಎಣಿಸಲಾಗಿತ್ತು. ಫ್ಯಾಸಿಸಂ ಈ ಉದಾರವಾದಿ ಕಲ್ಪನೆಯನ್ನು ತಿರಸ್ಕರಿಸಿ ಪ್ರಭುತ್ವದ ಹಕ್ಕುಗಳನ್ನು ಪುನಃ ದೃಢಪಡಿಸುತ್ತದೆ. "ಸ್ವಾತಂತ್ರ್ಯದ ಕಲ್ಪನೆ ಅಬಾಧಿತವಲ್ಲ ಏಕೆಂದರೆ ಜೀವನದಲ್ಲಿ ಯಾವುದೂ ಯಾವತ್ತೂ ನಿರ್ಬಂಧರಹಿತವಲ್ಲ. ಸ್ವಾತಂತ್ರ್ಯ ಒಂದು ಹಕ್ಕಲ್ಲ ಕರ್ತವ್ಯ. ಅದು ದಾನವಾಗಿ ಸಿಕ್ಕಿರುವುದಲ್ಲ ಗೆದ್ದುಕೊಂಡದ್ದು. ಅದು ಸಮಾನತೆಯಲ್ಲ ಸೌಲಭ್ಯ" ಎಂದು ಫ್ಯಾಸಿಸಂ ಸಿದ್ಧಾಂತ ಹೇಳುತ್ತದೆ. ಇತ್ತೀಚಿನ ದಿನಗಳಲ್ಲಿ ಅರುಣ್ ಜೇಟ್ಲಿ, ರಾಜನಾಥ್ ಸಿಂಗ್‌ರಂಥವರು ಇದೇ ಸುಪರಿಚಿತ ವಾಕ್ಯಗಳನ್ನು ಹರಿಬಿಡುತ್ತಿದ್ದಾರೆ. ಭಾರತದ ಪ್ರಭುತ್ವ ತನ್ನ ಪುನರಾವರ್ತಿತ ಹೇಳಿಕೆಗಳ ಮೂಲಕ ತಾನು ಫ್ಯಾಸಿಸ್ಟ್ ಸಿದ್ಧಾಂತವನ್ನು ಅಳವಡಿಸಿಕೊಂಡಿರುವುದನ್ನು ದೃಢಪಡಿಸಿದೆ.

ಇಲ್ಲಿಯತನಕ ನಮಗೆ ತಿಳಿಸಿರುವುದೇನೆಂದರೆ ನಮಗೆಲ್ಲ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳೆಂದು ಪ್ರತಿಷ್ಠಾಪಿಸಲಾಗಿರುವ ಕೆಲವು ನಿರ್ದಿಷ್ಟ ಹಕ್ಕುಗಳಿವೆ. ಸಂವಿಧಾನದ ವಿಧಿ 19 ಆರು ಹಕ್ಕುಗಳ ಕುರಿತು ಹೇಳುತ್ತದೆ: ವಾಕ್ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು; ಶಾಂತಿಯುತವಾಗಿ, ಆಯುಧಗಳಿಲ್ಲದೆ ಸಭೆ ಸೇರುವ ಹಕ್ಕು; ಸಂಘಟನೆ ಅಥವಾ ಕಾರ್ಮಿಕ ಸಂಘಗಳನ್ನು ಸ್ಥಾಪಿಸುವ ಹಕ್ಕು; ಭಾರತದ ಸರಹದ್ದಿನೊಳಗಿರುವ ಯಾವುದೇ ಭಾಗದಲ್ಲಿ ವಾಸ ಮಾಡುವ ಮತ್ತು ನೆಲೆ ನಿಲ್ಲುವ ಹಕ್ಕು; ಯಾವುದೆ ವೃತ್ತಿಯಲ್ಲಿ ತೊಡಗುವ ಅಥವಾ ಯಾವುದೆ ಕಸುಬು, ವ್ಯಾಪಾರ ಅಥವಾ ಉದ್ದಿಮೆ ನಡೆಸುವ ಹಕ್ಕು. ಸಂವಿಧಾನದಲ್ಲಿ ನಮೂದಿಸಲಾಗಿರುವ ನಿರ್ದಿಷ್ಟ ಸಂದರ್ಭಗಳಲ್ಲಿ ಶಾಸನಸಭೆಗಳು ಈ ಹಕ್ಕುಗಳನ್ನು ಮೊಟಕುಗೊಳಿಸಬಹುದು ಎಂಬರ್ಥದಲ್ಲಿ ಅವು ಅನಿರ್ಬಂಧಿತ ಅಲ್ಲವೆಂದು ನಮಗೆ ಗೊತ್ತಿತ್ತು. ಉದಾಹರಣೆಗೆ ರಾಷ್ಟ್ರೀಯ ಭದ್ರತೆ, ವಿದೇಶಿ ರಾಷ್ಟ್ರಗಳೊಂದಿಗೆ ಸ್ನೇಹಯುತ ಸಂಬಂಧ, ಸಾರ್ವಜನಿಕ ಸುವ್ಯವಸ್ಥೆ ನ್ಯಾಯಾಂಗ ನಿಂದನೆ, ಮಾನನಷ್ಟ, ಅಪರಾಧಕ್ಕೆ ಪ್ರಚೋದನೆ ಮತ್ತು ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆಗಳ ಪ್ರಶ್ನೆಗಳಿದ್ದಾಗ ವಿಧಿ 19 (2)ರ ಮೂಲಕ ವಾಕ್ಸ್ವಾತಂತ್ರ್ಯದ ಮೇಲೆ ನಿರ್ದಿಷ್ಟ ನಿರ್ಬಂಧಗಳನ್ನು ಹೇರುವ ಅಧಿಕಾರವನ್ನು ಶಾಸನಸಭೆಗಳಿಗೆ ನೀಡಲಾಗಿದೆ. ಸಾಕಷ್ಟು ಅಸ್ಪಷ್ಟತೆಯಿಂದ ಕೂಡಿದ ಈ ಅನೇಕ ನಿರ್ಬಂಧಗಳನ್ನು ಆಳ್ವಿಕರು ದುರುಪಯೋಗಪಡಿಸುವ ಸಂಭವವಿದೆಯಾದರೂ ಸಂವಿಧಾನ ಅವರಲ್ಲಿ ಕನಿಷ್ಠ ಮಟ್ಟದ ನೈತಿಕತೆಯನ್ನು ನಿರೀಕ್ಷಿಸುತ್ತದೆ. ಈ ನಿರ್ಬಂಧಗಳನ್ನು ಕ್ರಮಬದ್ಧವಾಗಿ ರಚಿಸಲಾದ ಕಾಯ್ದೆಯ ಮೂಲಕ ಮಾತ್ರ ಹೇರಬಹುದಾಗಿದೆ ಹೊರತು ಕಾರ್ಯಾಂಗದ ಮೂಲಕ ಅಲ್ಲ. ಆದರೆ ಇಂದು ಇದು ಎಷ್ಟೊಂದು ಕೀಳು ಮಟ್ಟಕ್ಕೆ ಇಳಿದಿದೆ ಎಂದರೆ ನೇರವಾಗಿ ಬಾಯ್ಮುಚ್ಚಿಸುವ ವಿದ್ಯಮಾನಗಳು ನಡೆಯುತ್ತಿವೆ.

ನೀವು ಸರ್ಕಾರದ ಸ್ತುತಿಗೀತೆಗಳನ್ನು ಹಾಡಿದರೆ ಓಕೆ. ಅದು ಬಿಟ್ಟು ಬೇರೆ ಏನನ್ನೆ ಹೇಳಿದರೂ ಪ್ರಾಣಾಪಾಯ ಕಾದಿದೆ. ನಿಮ್ಮ ಮೇಲೆ ರಾಜದ್ರೋಹದಡಿ ಅಥವಾ ಅಸ್ತಿತ್ವದಲ್ಲಿರುವ ಹತ್ತುಹಲವು ಕಠೋರ ಕಾಯ್ದೆಗಳ ಪೈಕಿ ಯಾವುದಾದರೂ ಒಂದರಡಿ ಸುಲಭದಲ್ಲಿ ದೂರು ದಾಖಲಾಗಿ ಫಾಸಿಗೆ ಹಾಕಬಹುದು, ತಪ್ಪಿದಲ್ಲಿ ಜೀವಾವಧಿ ಶಿಕ್ಷೆಯಾಗಬಹುದು. ಅಫ್ಜಲ್ ಗುರುವನ್ನು ಅಥವಾ ಯಾಕುಬ್ ಮೆನನ್‌ನನ್ನು ಗಲ್ಲಿಗೇರಿಸಿದುದರ ವಿರುದ್ಧ ಮಾತ ನಾಡಿದರೆ ಅಥವಾ ಹೈದರಾಬಾದ್ ಕೇಂದ್ರ ವಿಶ್ವವಿದ್ಯಾನಿಲಯದ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯವರು, ನಂತರ ಜೆಎನ್‌ಯುನ ಎಡಪಂಥೀಯ ವಿದ್ಯಾರ್ಥಿಗಳು ಮಾಡಿದ ಹಾಗೆ ಎಬಿವಿಪಿಯ ಗೂಂಡಾಗಿರಿಯನ್ನು ಪ್ರತಿಭಟಿಸಿದರೆ ರೋಹಿತ್ ವೆಮುಲಾನಿಗೆ ಯಾವ ಅವಸ್ಥೆ ಆಗಿತ್ತೊ ಅದೇ ಸ್ಥಿತಿಯತ್ತ ನೀವೂ ತಳ್ಳಲ್ಪಡಬಹುದು ಅಥವಾ ಕನ್ಹಯ್ಯ ಕುಮಾರ್, ಅನಿರ್ಬನ್ ಭಟ್ಟಾಚಾರ್ಯ ಮತ್ತು ಒಮಾರ್ ಖಲೀದರ ಹಾಗೆ ಸೆರೆವಾಸ ಅನುಭವಿಸ ಬೇಕಾಗಿ ಬರಬಹುದು. ರೂಢಿಯ ಕಾಮಗಾರಿಗಳನ್ನು ಗುತ್ತಿಗೆಗೆ ನೀಡುವ ಕಾರ್ಮಿಕವಿರೋಧಿ ನೀತಿಯ ವಿರುದ್ಧ ಮಾತನಾಡಿದರೆ, ಕಂಪೆನಿಯ ಮ್ಯಾನೇಜ್‌ಮೆಂಟನ್ನು ಟೀಕಿಸಿದರೆ ವರ್ಷಗಳ ಕಾಲ ಜೈಲಲ್ಲಿದ್ದು ಈಗ ಜೀವಾವಧಿ ಶಿಕ್ಷೆಗೊಳಗಾದ ಮಾರುತಿ ಸುಜುಕಿ ಕಾರ್ಮಿಕರ ಗತಿಯೆ ನಿಮಗೂ ಬಂದೊದಗಬಹುದು. ಸರ್ಕಾರ ಬಲವಂತವಾಗಿ ಭೂಸ್ವಾಧೀನ ಮಾಡುತ್ತಿರುವುದರ ವಿರುದ್ಧ ಮಾತಾಡಿದರೆ 'ಮಾವೋವಾದಿ' ಹಣೆಪಟ್ಟಿ ನಿಮ್ಮದಾಗಬಹುದು ಅಥವಾ ನಿಮ್ಮನ್ನು ಸೀದಾ ಪರಲೋಕಕ್ಕೆ ರವಾನಿಸಬಹುದು. ಸಮಾಜದಲ್ಲಿ 'ಅನ್ಯ'ರಾಗಿರುವ ಮುಸ್ಲಿಮರಂತೂ ಹೇಗೂ ದೇಶದ್ರೋಹಿಗಳು, ಭಯೋತ್ಪಾದಕರು. ಬಸ್ತರ್ ಅಥವಾ ನಿಯಾಮಗಿರಿಯ ಆದಿವಾಸಿಗಳು ಪ್ರಭುತ್ವ ಅರಣ್ಯಗಳನ್ನು ಕಾನೂನುಬಾಹಿರವಾಗಿ ಬಂಡವಾಳಶಾಹಿಗಳಿಗೆ ಹಸ್ತಾಂತರ ಮಾಡುವುದರ ವಿರುದ್ಧ ಮಾತಾಡಿದ ಮಾತ್ರಕ್ಕೆ ಪ್ರಭುತ್ವ ಅವರ ಮೇಲೆ ಕುತ್ಸಿತ ಯುದ್ಧ ನಡೆಸುತ್ತದೆ. ಭದ್ರತಾ ಪಡೆಗಳನ್ನು ಛೂಬಿಟ್ಟು ಅವರ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಸಿ ಊನರನ್ನಾಗಿಸುತ್ತದೆ, ಶಿಕ್ಷೆಯ ಭಯವಿಲ್ಲದೆ ಅವರ ಯುವಕರನ್ನು ಕೊಲ್ಲುತ್ತದೆ. ನೀವೇನಾದರೂ ಪ್ರಭುತ್ವವು ಮಾನವಹಕ್ಕು ಕಾರ್ಯಕರ್ತರ ಮೇಲೆ ನಡೆಸುವ ಅನ್ಯಾಯಗಳನ್ನು ವಿರೋಧಿಸಿ ಅವರ ಪರ ನಿಂತಿರಾದರೆ ಡಾ! ಬಿನಾಯಕ್ ಸೆನ್, ಸೋನಿ ಸೋರಿ ಅಥವಾ ಜಿ.ಎನ್. ಸಾಯಿಬಾಬಾರಿಗೆ ಆದ ಗತಿಯೆ ನಿಮಗೂ ಬರಬಹುದು. ಕಳೆದ ಡಿಸೆಂಬರ್‌ನಲ್ಲಿ ಬಸ್ತರ್‌ನಲ್ಲಿ ನಡೆಯುತ್ತಿರುವ ಮಾನವಹಕ್ಕು ಉಲ್ಲಂಘನೆಗಳ ಸತ್ಯಶೋಧನೆಗಾಗಿ ತೆರಳುತ್ತಿದ್ದ ತೆಲಂಗಾಣ ಪ್ರಜಾತಾಂತ್ರಿಕ ವೇದಿಕೆಯ ಏಳು ಸದಸ್ಯರ ತಂಡವೊಂದನ್ನು ದಾರಿಮಧ್ಯದಲ್ಲೆ ಬಂಧಿಸಲಾಯಿತು. ಜಾಮೀನು ನಿರಾಕರಿಸಲಾಗಿರುವುದರಿಂದ ಅವರಿನ್ನೂ ಸುಕ್ಮಾ ಜೈಲಿನಲ್ಲಿದ್ದಾರೆ. ಇಲ್ಲಿ ಪೊಲೀಸರು ಕಟ್ಟಿದ ಕತೆಯಷ್ಟೆ ಇದೆ ಹೊರತು ಪುರಾವೆಯ ಸಣ್ಣ ಚೂರಾದರೂ ಇಲ್ಲ. ಇವೆಲ್ಲವೂ ಭಿನ್ನ ಭಿನ್ನ ಘಟನೆಗಳಲ್ಲ, ಇಡೀ ದೇಶಕ್ಕೆ ವ್ಯಾಪಿಸಿರುವ ವಿದ್ಯಮಾನಗಳು.

ನಿಜವಾಗಿ ಇದೆಲ್ಲವೂ ನೀವು ಯಾರೊಡನೆ ಮಾತಾಡಬೇಕು, ಏನು ಮಾತಾಡಬೇಕು; ಏನು ತಿನ್ನಬೇಕು, ಎಲ್ಲಿ ತಿನ್ನಬೇಕು; ಯಾವಾಗ ನಿಲ್ಲಬೇಕು, ಯಾವಾಗ ಕೂರಬೇಕು; ಯಾರನ್ನು ಪ್ರೀತಿಸಬೇಕು, ಯಾರನ್ನು ದ್ವೇಷಿಸಬೇಕು ಎಂದು ಪ್ರಭುತ್ವವು ಜನರಿಗೆ ಹೇಳುವಂತಹ ಕುಲಗೆಟ್ಟ ಮಟ್ಟಕ್ಕೆ ಇಳಿದಿದೆ. ನಮ್ಮನ್ನೆಲ್ಲ ಪ್ರಭುತ್ವದ ಸೇವೆಯಲ್ಲಿರುವ ಯಂತ್ರಮಾನವರನ್ನಾಗಿ ಮಾಡಲಾಗಿದೆ. ಜನರಿಗಿಂತಲೂ ಕದನಶೀಲ ದೇಶಭಕ್ತಿಯ ರಾಷ್ಟ್ರೀಯತೆಯನ್ನೆ ಮುಖ್ಯವಾಗಿಸಿದ ಪ್ರಭುತ್ವ ತನ್ನ ಆಜ್ಞೆಗಳ ಅನುಷ್ಠಾನಕ್ಕೆ ಹಿಂದೂತ್ವವಾದಿ ಗ್ಯಾಂಗುಗಳನ್ನು ಛೂಬಿಟ್ಟಿದೆ. ಇದು ಮುಸೊಲಿನಿಯ ಕರಿಷರಟು ಪಡೆ ಮತ್ತು ಹಿಟ್ಲರನ ಕಂದುಷರಟು ಪಡೆಗಳನ್ನು ನೆನಪಿಸುತ್ತದೆ. ಹಿಂದೂತ್ವದ ಮೂಲಪುರುಷರಾದ ಸಾವರ್ಕರ್, ಮೂಂಜೆ, ಗೋಳ್ವಲ್ಕರರು ಮುಸೊಲಿನಿ, ಹಿಟ್ಲರ್‌ರತ್ತ ಆಕರ್ಷಿತರಾಗಿದ್ದರ ಕುರಿತು ರಾಶಿಗಟ್ಟಲೆ ವಿವರಗಳು ಲಭ್ಯವಿವೆ. ಇದರ ಹೊರತಾಗಿಯೂ ಅದರ ಸಂಘಟನಾ ಉಗಮಸ್ಥಾನವಾದ ಆರೆಸ್ಸೆಸ್‌ಗೂ ಇಟಲಿಯ ಎಂವಿಎಸ್‌ಎನ್‌ಗೂ ((Milizia Volontaria per la Sicurezza Nazionale; MVSN; "Voluntary Militia for National Security"; "ರಾಷ್ಟ್ರೀಯ ಭದ್ರತೆಗಾಗಿ ಸ್ವಇಚ್ಛೆಯ ಪ್ರಜಾಸೇನೆ") ಹತ್ತಿರದ ಹೋಲಿಕೆಗಳಿರುವುದು ಗಮನಾರ್ಹ. ಮೂಲತಃ ನ್ಯಾಷನಲ್ ಫ್ಯಾಸಿಸ್ಟ್ ಪಕ್ಷದ ಅರೆಸೇನಾ ಪಡೆಯಾಗಿದ್ದ ಈ ಎಂವಿಎಸ್‌ಎನ್ 1923ರ ನಂತರ ಇಟಲಿ ಸಾಮ್ರಾಜ್ಯದ ಸ್ವಇಚ್ಛೆಯ ಪ್ರಜಾಸೇನೆಯಾಗಿ ಪರಿಣಮಿಸಿತ್ತು. ಭಾರತದಲ್ಲಿರುವ ನಾವು ಕಳೆದ ಎರಡೂವರೆ ವರ್ಷಗಳಲ್ಲಿ ಫ್ಯಾಸಿಸ್ಟ್ ಆಡಳಿತ ಹೇಗಿರುತ್ತದೆ ಎಂಬುದರ ಮೂಲ ಕಾರ್ಯಮಾದರಿಯನ್ನು ಕಂಡಿರುವೆವು. ಅದು ಹೆಚ್ಚುಕಡಿಮೆ "ಒಂದು ಜನ, ಒಂದು ಸಾಮ್ರಾಜ್ಯ, ಒಬ್ಬ ನಾಯಕ" ಎನ್ನುವುದರ ಮಾದರಿಯಾಗಿದೆ.






ತಾನೊಂದು ಪ್ರಜಾಪ್ರಭುತ್ವ ಅಥವಾ ಇನ್ನೂ ಖಚಿತವಾಗಿ, ವಿಶ್ವದ ಅತಿ ದೊಡ್ಡ ಕಾರ್ಯನಿರತ ಪ್ರಜಾಪ್ರಭುತ್ವ ಎಂದು ಭಾರತ ಹಕ್ಕುಸಾಧಿಸುತ್ತಿರುವುದು ಕೇವಲ ನಿಯಮಿತವಾಗಿ ನಡೆಸಲಾಗುವ ಚುನಾವಣೆಗಳ ಆಧಾರದಲ್ಲಿ. ಸದರಿ ಚುನಾವಣೆಗಳು ಜನರ ಸಂಕಲ್ಪದ ಅಭಿವ್ಯಕ್ತಿಗಿಂತ ಹೆಚ್ಚಾಗಿ ಭಾರಿ ಧನಬಲ ಮತ್ತು ಜನಬಲದೊಂದಿಗೆ ನಡೆಸುವ ವಾಡಿಕೆಯ ಆಚರಣೆಗಳಾಗಿದ್ದರೂ ಅವು ಪ್ರಜಾತಂತ್ರದ ಭ್ರಮೆಯೊಂದನ್ನು ಮುಂದುವರಿಸುತ್ತಾ ಬಂದಿವೆ. ಭಾರಿ ಹೊಗಳಿಕೆಗೆ ಪಾತ್ರವಾದ ನಮ್ಮ ಸಂವಿಧಾನ ಕೊಟ್ಟಿರುವ ಆ ಇಡೀ ಚೌಕಟ್ಟು ವಾಸ್ತವವಾಗಿ ಸ್ಥಳೀಯ ಆಳುವ ವರ್ಗಗಳ ಜನವಿರೋಧಿ ಒಳಸಂಚುಗಳನ್ನು ಹೊರಗೆಡವುತ್ತದೆ. ಭ್ರಮೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ದಮನಿತರ ಉದ್ಧಾರಕನಾದ ಅಂಬೇಡ್ಕರರು ಚೌಕಟ್ಟಿನ ಪ್ರಧಾನ ಕರ್ತೃ ಎಂದು ಬಿಂಬಿಸಲಾಯಿತು. ಸಂವಿಧಾನ ಜಾರಿಗೆ ಬಂದ ಎರಡು ವರ್ಷಗಳಲ್ಲಿ ಆ ಕೋರೈಸುವ ಹೊಗಳಿಕೆಯ ಬೆಳಕಿನಿಂದ ಹೊರಬಂದ ಅಂಬೇಡ್ಕರರು ಅದನ್ನು ಅತ್ಯಂತ ಕಟು ಶಬ್ದಗಳಲ್ಲಿ ನಿರಾಕರಿಸಿದರಾದರೂ ಅದರಿಂದೇನೂ ಉಪಯೋಗವಾಗಿಲ್ಲ. ಸಂವಿಧಾನ ನೀಡಿರುವುದು ಕೇವಲ ರಾಜಕೀಯ ಪ್ರಜಾಸತ್ತೆ. ಪೂರಕವಾಗಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತೆಗಳನ್ನು ಸೇರಿಸದಿದ್ದರೆ ರಾಜಕೀಯ ಪ್ರಜಾಸತ್ತೆ ಉಳಿಯದು ಎಂದು ಎಚ್ಚರಿಸಿದರಾದರೂ ಅದು ಕಾರ್ಯಕಾರಿಯಾಗಿಲ್ಲ. ಕಾನೂನುರೀತ್ಯಾ ಪ್ರಜಾಪ್ರಭುತ್ವವು ಕಾರ್ಯತಃ ಯಾವತ್ತಿಗೂ ಶ್ರೀಮಂತರ ಪ್ರಭುತ್ವವಾಗಿದೆ. ಅದು ವ್ಯವಸ್ಥಿತ, ಕೇಂದ್ರೀಕೃತ, ನಿರಂಕುಶ ಅಧಿಕಾರದ ಪ್ರಜಾಪ್ರಭುತ್ವವಾಗಿ ಮಾರ್ಪಡಾಗಲು ಸ್ವಲ್ಪ ಸಮಯ ಬೇಕಿತ್ತು ಅಷ್ಟೆ. ಫ್ಯಾಸಿಸಂ ಅಂದರೆ ಇದೇ - ವ್ಯವಸ್ಥಿತ, ಕೇಂದ್ರೀಕೃತ, ನಿರಂಕುಶ ಅಧಿಕಾರದ ಪ್ರಜಾಪ್ರಭುತ್ವ. ಬೇಸರದ ಸಂಗತಿ ಏನೆಂದರೆ ಶೀರ್ಷಿಕೆಯಲ್ಲಿರುವ ವಿರೋಧಾಭಾಸ ಭಾರತದ ನೈಜಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುತ್ತದೆ.

(ಕೃಪೆ: ಇಂಡಿಯನ್ ಕಲ್ಚರಲ್ ಫೋರಂ)

■ ಆನಂದ್ ತೇಲ್ತುಂಬ್ಡೆ

ಪೇಜು ಸ್ವಾಮಿಗಳ ಲಿಂಗಾಯತ 'ಧರ್ಮ'ಕಾರ

ಹೊಗಳಿಕೆ ತೆಗಳಿಕೆ



ಎಲ್ಲೋ ಮಳೆ ಹುಯ್ದರೆ ಮತ್ತೆಲ್ಲೋ ಕಪ್ಪೆ ವಟರ್ ಗುಟ್ಟಿತಂತೆ. ಮೊನ್ನೆ ಮೊನ್ನೆ ಚರ್ಚೆಗೆ ಗ್ರಾಸವಾದ ಲಿಂಗಾಯತ-ವೀರಶೈವ ವಾದವಿವಾದಗಳ ಬಗ್ಗೆ ಕರಾವಳಿಯ ಖಾವಿಧಾರಿಯೊಬ್ಬರು ಮೂಗು ತೂರಿಸ ಹೊಂಟದ್ದಾರೆ. ಹಾಗು ತೂರಿಸಲೇಬೇಕು ಸಹ. ಯಾಕೆಂದರೆ, ಹಿಂದೂತ್ವದ ದೊಣೆ ನಾಯಕನಂತಿರುವ ಈ ಸ್ವಾಮಿ ಲಿಂಗವಂತರ ತಕರಾರಿಗೆ ಭಯಂಕರವಾಗಿ ಬೆಚ್ಚಿ ಬಿದ್ದಿದ್ದಾರೆ. ಯಾಕೆಂದರೆ, ಹಿಂದೂತ್ವದ ಪರಿಧಿಯಿಂದ ಈ ತುಂಡು ಕಳಚಿಕೊಂಡರೆ ಕರ್ನಾಟಕದ ಮಟ್ಟಿಗೆ ತನ್ನ ಹಿಂದೂತ್ವಕ್ಕೆ ಶಾನೇ ಲುಕ್ಸಾನು ಎಂಬುದು ಈತನ ಲೆಕ್ಕಾಚಾರವೇ ಹೊರತು ಯಾವ ಲಿಂಗತನದ ಕಾಳಜಿಯೂ ಅಲ್ಲ.

ತನ್ನ ಬಿಡಲಾರದ ಮಡಿವಂತಿಕೆ, ಆಹಾರಭೇದ, ಪಂಕ್ತಿಭೇದಗಳ ವಿಚಾರ ಬಂದಾಗಲೆಲ್ಲ ಸುಬಂಧವಿಲ್ಲದಿದ್ದೂ ಬಸವಣ್ಣನನ್ನು ಎಳೆದು ತರುವ ಚಾಳಿಯ ಈ ಸ್ವಾಮಿಗೆ ಈಗ ಬಸವಾನುಯಾಯಿಗಳ ಬಗ್ಗೆ ಭಯಾನಕ ಪಿರೂತಿ ಹುಟ್ಟಿಕೊಂಡಿದೆಯಂತೆ. ಅದು ಪಿರೂತಿ(ಪ್ರೀತಿ)ಯೋ ಇಲ್ಲಾ ಪಿತೂರಿಯೋ ಎಂಬುದನ್ನು ಮಾತ್ರ ಬಲ್ಲವರೇ ಹೇಳಬೇಕಷ್ಟೆ.

ಇದೇ ಪಿರೂತಿಯನ್ನು ಇತ್ತೀಚೆಗೆ ಈತ ಸಾಬರ ಮೇಲೆ ತೋರಿಸ ಹೋಗಿದ್ದಕ್ಕೆ ಈತನೇ ತನ್ನೆರಡು ಕಣ್ಣುಗಳೆಂದು ಸಲಹಿ ಮೈದಡವಿದ್ದ ಭಜರಂಗಿ -ರಾಮಸೇನೆಗಳು ಈತನ ಮೇಲೆಯೇ ಮುಗಿಬಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟ ಕೊಳಕಾಗಿ ಉಗಿದದ್ದು ದೊಡ್ಡ ಸುದ್ದಿಯಾಗಿತ್ತು.

ತನ್ನ ಹಿಂದೂತ್ವದ ಕನಸಿಗೆ ಆಸರೆಯಂತಿರುವ ಬಿಜೆಪಿ ಪಕ್ಷವನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೇರಿಸಿ ತಂದಿದ್ದೇ ಇದೇ ಲಿಂಗವಂತರ ನಾಯಕನೆಂಬ ಯಡಿಯೂರಪ್ಪನ ಹೆಸರಿನಲ್ಲೇ ತಾನೇ? ಇಂತಹ ಲಿಂಗಾಯತರು ಹಿಂದೂ ಧರ್ಮದಿಂದ ಒಡೆದು ಬೇರೆಯಾಗುತ್ತಾರೆಂದರೆ ಕರಾವಳಿಯ ಈ ಹಿಂದೂ ದೊಣೆ ನಾಯಕನಿಗೆ ಹೇಗಾಗ ಬೇಡ? ಯಡಿಯೂರಪ್ಪ ಭ್ರಷ್ಟಾಚಾರದ ಆರೋಪದಲ್ಲಿ ಜೈಲುಪಾಲಾಗುವ ಸಂದರ್ಭದಲ್ಲಂತೂ "ಆರೋಪ ಬಂದಾಕ್ಷಣ ಓರ್ವ ವ್ಯಕ್ತಿ ಅಪರಾಧಿ ಎನಿಸುವುದಿಲ್ಲ?" ಎಂದು ಯಡ್ಡಿ ಪರ ಬ್ಯಾಟಿಂಗ್ ಮಾಡಿದ್ದ ಈ ಇಫ್ತಾರೇಶ. ಈಗ ಲಿಂಗಾಯತರು ಇಬ್ಭಾಗವಾದರೆ ಅದು ನಾಡಿದ್ದು ಬರುವ ವಿಧಾನಸಭಾ ಚುನಾವಣೆಯಲ್ಲೂ ತನ್ನ ಪ್ರಭಾವವನ್ನು ತೋರಿಸದೇ ಬಿಡದು ಎಂಬ ಭಯ ಇವರದ್ದು. ಈ ಭಯಕ್ಕೆ ನಲುಗಿಹೋದ ಸಾಮಿಗಳು ಈ ಕುರಿತಾಗಿ ಬಾಯಿಗೆಬಂದಂತೆ ಹೇಳಿಕೆಗಳನ್ನು ಕೊಡುತ್ತಿದ್ದಾರಷ್ಟೆ. ಅಲ್ಪಸಂಖ್ಯಾತ ನೆವನದಲ್ಲಿ ಸಿಗುವ ಸೌಲಭ್ಯಗಳನ್ನು ಗಿಟ್ಟಿಸಿಕೊಳ್ಳುವ ಕಾರಣಕ್ಕೆ ಈ ಲಿಂಗಾಯತ ಧರ್ಮದ ಬೇಡಿಕೆ ಹುಟ್ಟಿಕೊಂಡಿದೆ ಎನ್ನುವುದು ಇವರೇ ಹುಟ್ಟು ಹಾಕಿರುವ ಹೊಸ ತರಲೆ.

ಹೌದು ಸ್ವಾಮಿ, ಈ ಹಿಂದೂ ಧರ್ಮ ಅರ್ಥಾತ್ ವೈದಿಕ ಧರ್ಮವೇ ಮೂಲತಃ ಅಲ್ಪ ಸಂಖ್ಯಾತ ಧರ್ಮ. ಈ ನಿಟ್ಟಿನಲ್ಲಿ ನೀವುಗಳೇ ಈ ಸೌಲಭ್ಯಗಳಿಗಾಗಿ ಪ್ರಯತ್ನಿಸಬಹುದಲ್ಲಾ? ಭಾರತದಲ್ಲಿ ಪ್ರಾಚೀನವಾದ ಧರ್ಮವೊಂದಿದ್ದರೆ ಅದು ಮಹಾವೀರನಿಗೂ ಹಿಂದಿದ್ದ ಇಪ್ಪತ್ನಾಲ್ಕು ತೀರ್ಥಂಕರರ ವ್ಯವಸ್ಥಿತ ಜೈನ ಧರ್ಮವೇ ಹೊರತು ಮೊನ್ನೆ ಹುಟ್ಟಿದ ಹಿಂದೂ ಧರ್ಮವಲ್ಲ. ಜೈನ ಹಾಗು ಬೌದ್ಧ ಧರ್ಮಗಳು ಹಿಂದೂ ಧರ್ಮದ್ದೇ ತುಕಡಾ ಎಂದು ವಾದಿಸುವ (ಹಿಂದೂತ್ವದ ರಾಷ್ಟ್ರೀಯ ಮಟ್ಟದ ನಾಯಕರುಗಳಲ್ಲಿ ಜೈನರೂ ಇದ್ದಾರೆ. ಇವರಿಗೆ ತಮ್ಮ ಮೂಲ ಧರ್ಮದ ಹೆಗ್ಗಳಿಕೆಯ ಅರಿವೇ ಇದ್ದಂತಿಲ್ಲ) ಪೇಜಾವರಂತವರಿಗೆ ಈ ಸಣ್ಣ ಅಲ್ಪಸಂಖ್ಯಾತ ವೈದಿಕ ಧರ್ಮವೇ ಇಲ್ಲಿನ ಮೂಲನಿವಾಸಿಗಳ ಸಂಪ್ರದಾಯಗಳನ್ನು ಹಾಳುಗೆಡವಿ ಜೈನ, ಬೌದ್ಧ, ನಾಥ ಪಂಥಗಳಂತಹ ನಿರ್ದಿಷ್ಟ ಸಂಪ್ರದಾಯಗಳನ್ನು ಆಪೋಶನ ತೆಗೆದುಕೊಂಡು ಕೊಬ್ಬಿ ನಿಂತಿದೆ ಎನ್ನುವುದು ಗೊತ್ತಿಲ್ಲದೇ ಇಲ್ಲ. ಅಂತಹ ಪ್ರಕ್ರಿಯೆಗೊಳಗಾಗಿ ಇದೀಗ ಆ ಕೊಳಕು ವಾತಾವರಣದಿಂದ ಹೊರಬರಲು ಹವಣಿಸುತ್ತಿರುವ, ವೇದ ಕಂದಾಚಾರಗಳನ್ನು



ತಿರಸ್ಕರಿಸಿದ ಬಸವಣ್ಣನ ಧರ್ಮಕ್ಕೆ ಅದರದ್ದೇ ಆದ ನಿರ್ಧಾರಕ್ಕೆ ಬರಲು ಬಿಡದೇ ಅಡ್ಡಗಾಲು ಹಾಕಲು ನೀವ್ಯಾರು ಸಾಮೀ? ಅಸಲಿಗೆ ಕರಾವಳಿ ಜಿಲ್ಲೆಯಲ್ಲಿ ಮಾತಾಡಲು ಲಿಂಗಾಯತ - ವೀರಶೈವ ಸಮುದಾಯವೇ ಇಲ್ಲಿಲ್ಲ.

ಶಿವನನ್ನು ಆರಾಧಿಸುವ ಕಾರಣಕ್ಕೆ ಲಿಂಗಾಯತರೂ ನಿಸ್ಸಂಶಯವಾಗಿ ಹಿಂದೂಗಳೇ ಎನ್ನುವ ತಮಗೆ ತಮ್ಮದೇ ಮತದ ಮಾಧ್ವ ಯತಿಯೊಬ್ಬ ಶಿವ ವಿಷ್ಣುವಿನ ವಾಹನ ಗರುಡನಿಗಿಂತಲೂ ಕೆಳಗಿನ ಸ್ಥಾನದಲ್ಲಿರುವ ಒಬ್ಬ ಕಿಂಕರ ಎಂದು ಕೋರ್ಟು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದದು ನೆನಪಿಲ್ಲವೇ? ಪ್ರತಿಯೊಂದು ಜಾತಿ ಒಳಜಾತಿಗಳಲ್ಲಿ ಮಠಗಳಾಗಬೇಕು. ಅದಕ್ಕೊಬ್ಬ ಪ್ರತ್ಯೇಕ ಸ್ವಾಮೀಜಿಯಿರಬೇಕೆಂದು ಬಯಸಿ, ಆ ಮೂಲಕ ಈ ಕೆಳಜಾತಿ ಸ್ವಾಮಿಗಳ ಜುಟ್ಟು ಕೈಲ್ಲಿಟ್ಟುಕೊಂಡು ಎಲ್ಲರನ್ನೂ ನಿಯಂತ್ರಿಸುವ ಹುನ್ನಾರಕ್ಕೂ ಒಮ್ಮೆ ಕೈಹಾಕಿದ್ದ ಈ ದೊಣೆನಾಯಕ ಲಿಂಗವಂತರ 'ಕಳಚಿಕೊಳ್ಳುವ' ಮಾತಿಗೆ ಕನಲಿದ್ದರಲ್ಲಿ ವಿಶೇಷವೇನೂ ಇಲ್ಲ. ಯಾಕೆಂದರೆ, ಅದೊಂದು ತಂತ್ರಗಾರಿಕೆಯ ವೈದಿಕ ಕನಲಿಕೆ.

-ಓದುಗ, ಮಂಗಳೂರು

'ವ್ಯಂಗ್ಯಯ್ಯ' ನಾಯ್ಡು ಲಿಂಗಾಯತರಿಗಿಂತ ಹೇಗೆ ಅರ್ಹ?

ಪೇಜಾವರರೇ ನೀವು ಲಿಂಗಾಯತ ಧರ್ಮ ಹಿಂದೂ ಧರ್ಮದಿಂದ ಪ್ರತ್ಯೇಕವಾಗಬಾರದು ಎಂದು ಹೇಳುತ್ತಿದ್ದೀರಿ.. ಆದರೆ ಮುಗ್ಧ ಲಿಂಗಾಯತರನ್ನು ವೋಟ್ ಬ್ಯಾಂಕ್ ಮಾಡಿಕೊಂಡಿರುವ ನಿಮ್ಮದೇ ವೈದಿಕ ಬಿಜೆಪಿ ಪಕ್ಷದವರು ಲಿಂಗಾಯತರನ್ನು ಎಷ್ಟು ಹಗುರವಾಗಿ ತೆಗೆದುಕೊಂಡಿದ್ದಾರೆ ಎಂದು ನಿಮಗೆ ಗೊತ್ತಿದೆಯೇ? ನಮ್ಮ ನೆರೆಯ ಆಂಧ್ರದ ಮೂವರು ರಾಷ್ಟ್ರಪತಿ ಆಗಿದ್ದಾರೆ, ತಮಿಳುನಾಡಿನ ಇಬ್ಬರು ಹಾಗೂ ಕೇರಳ ಮತ್ತು ಮಹಾರಾಷ್ಟ್ರದ ಒಬ್ಬೊಬ್ಬರು ರಾಷ್ಟ್ರಪತಿ ಆಗಿದ್ದಾರೆ, ಆದರೆ ಕರ್ನಾಟಕದವರು ಈವರೆಗೆ ಒಬ್ಬರೂ ರಾಷ್ಟ್ರಪತಿ ಆಗಿಲ್ಲ. ಕೇವಲ ಬಿ.ಡಿ.ಜತ್ತಿ ಕೆಲವು ತಿಂಗಳು ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿದರು ಅಷ್ಟೇ. ಹಾಗಾಗಿ ಈ ಬಾರಿ ಪ್ರಣಬ್ ಮುಖರ್ಜಿಯ ನಂತರ ಕನ್ನಡಿಗರೊಬ್ಬರನ್ನು ರಾಷ್ಟ್ರಪತಿ ಹುದ್ದೆಗೆ ಆರಿಸಬೇಕು, ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಿದ್ದು ಅಲ್ಲಿ ಬಿಜೆಪಿ ಗೆಲ್ಲಬೇಕಾದರೆ ಲಿಂಗಾಯತರನ್ನು ಸಂತೃಪ್ತಿಗೊಳಿಸುವುದು ಅಗತ್ಯ, ಹಾಗಾಗಿ ಲಿಂಗಾಯತನೊಬ್ಬನನ್ನು ರಾಷ್ಟ್ರಪತಿ ಮಾಡಬೇಕು ಎಂದು ಕರ್ನಾಟಕದ ಕೆಲವು ನೇತಾರರು ಮೋದಿ ಮತ್ತು ಅಮಿತ್ ಶಾ ಇವರಲ್ಲಿ ಕೇಳಿಕೊಂಡಾಗ ಪಕ್ಕಾ ವ್ಯಾಪಾರಿ ಬುದ್ಧಿಯ ಈ ಇಬ್ಬರು ಗುಜರಾತಿಗಳು ಹೇಳಿದ್ದೇನು ಗೊತ್ತೇ? "ಲಿಂಗಾಯತರು ನಮ್ಮ ಬಿಜೆಪಿ ಪಕ್ಷದ ಬುಟ್ಟಿಯಲ್ಲಿಯೇ ಇದ್ದಾರೆ. ಮೇಲಾಗಿ ಲಿಂಗಾಯತರು ರಾಷ್ಟ್ರೀಯ ವರ್ಚಸ್ಸು ಹೊಂದಿರುವ ಸಮುದಾಯವಲ್ಲ. ಹಾಗಾಗಿ ಆ ಸಮುದಾಯಕ್ಕೆ ಹೆಚ್ಚು ಮಹತ್ವ ಕೊಡುವ ಅಗತ್ಯವಿಲ್ಲ. ರಾಷ್ಟ್ರಪತಿ ಹುದ್ದೆ ಬಿಡಿ ಉಪರಾಷ್ಟ್ರಪತಿ ಹುದ್ದೆಗೂ ಲಿಂಗಾಯತರು ಅರ್ಹತೆ ಹೊಂದಿಲ್ಲ" ಎಂದು ಮೋದಿ-ಅಮಿತ್ ಶಾ ಹೇಳಿದರಂತೆ.

ದಕ್ಷಿಣ ಭಾರತೀಯನೊಬ್ಬನನ್ನು ಉಪರಾಷ್ಟ್ರಪತಿ ಮಾಡಬೇಕೆಂಬ ಪ್ರಸ್ತಾಪ ಬಂದಾಗಲೂ ಕನ್ನಡಿಗರನ್ನು ಈ ಗುಜ್ಜುಗಳು ಕಡೆಗಣಿಸಲು ಕಾರಣ, ಕನ್ನಡಿಗರು ತುಂಬಾ ಮೃದು ಸ್ವಭಾವದವರು ಹಾಗೂ ರಾಷ್ಟ್ರಮಟ್ಟದ ಹೊಣೆಗಾರಿಕೆ ಹೊರಲು ಅನರ್ಹರು ಎಂಬ ಕಾರಣಕ್ಕಾಗಿಯೇ ಅಂತೆ! ತೆಲುಗು ಬಿದ್ದ 'ವ್ಯಂಗಯ್ಯ' ನಾಯ್ಡುಗೆ ಲಿಂಗಾಯತರಿಗಿಂತ ಹೆಚ್ಚು ಅದ್ಯಾವ ಅರ್ಹತೆ ಇದೆಯೋ ಗೊತ್ತಿಲ್ಲ. ಹಾಗಾಗಿ ಪೇಜಾವರರೇ, ಲಿಂಗಾಯತರ ಬಗ್ಗೆ ನಿಮ್ಮ ಬಿಜೆಪಿ ಪಕ್ಷದವರ ಈ ಕೀಳರಿಮೆಯ ಅನಿಸಿಕೆ ನೋಡಿ ನಿಮಗೆ ಬೇಜಾರು ಆಗಲಿಲ್ಲವೇ? ಲಿಂಗಾಯತರು ಇನ್ನೂ ವೈದಿಕ ಪಕ್ಷದ ವೋಟ್ ಬ್ಯಾಂಕಾಗಿ ಆರೆಸ್ಸೆಸ್‌ನ ಗುಲಾಮರಾಗಿ ಮುಂದುವರಿಯಬೇಕೇ? ಲಿಂಗಾಯತರು ತಮ್ಮ ಅರ್ಹತೆ, ರಾಷ್ಟ್ರೀಯ ವರ್ಚಸ್ಸು ಹಾಗೂ ಸ್ವತಂತ್ರ ವ್ಯಕ್ತಿತ್ವ ತೋರಿಸಲು ಇದು ಸರಿಯಾದ ಸಮಯ ತಾನೇ!

-ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ

ಮೋದಿಯ ಭಂಡತನವನ್ನು ತೋರಿಸುವಷ್ಟು ಧೈರ್ಯವಿದೆಯೇ?

ಈಗ ಬಿಡುಗಡೆಯಾಗುತ್ತಿರುವ 'ಇಂದು ಸರ್ಕಾರ್' ಎಂಬ ವಿವಾದಿತ ಹಿಂದಿ ಚಲನಚಿತ್ರವನ್ನು ಮಧುರ್ ಭಂಡಾರ್ಕರ್ ನಿರ್ದೇಶಿಸಿದ್ದು ಅದು 1975-77 ರ ತುರ್ತು ಪರಿಸ್ಥಿತಿ ಹಾಗೂ ಇಂದಿರಾ ಗಾಂಧಿ ಮತ್ತು ಸಂಜಯ್ ಗಾಂಧಿಯ ಖಾಸಗಿ ಜೀವನ ಆಧಾರಿತವಾಗಿದೆಯಂತೆ. ಅದನ್ನು ಅಮಿತ್ ಶಾನ ಆದೇಶದಂತೆ ಇದೇ ವರ್ಷ ನವೆಂಬರ್‌ನಲ್ಲಿ ನಡೆಯಲಿರುವ ಗುಜರಾತ್ ವಿಧಾನಸಭಾ



ಚುನಾವಣೆಯನ್ನು ಗುರಿಯಾಗಿಸಿ ನಿರ್ಮಿಸಲಾಗಿದೆಯಂತೆ.

ನರೇಂದ್ರ ಮೋದಿ ಜೀವನ ಆಧಾರಿತ ಚಲನಚಿತ್ರ ನಿರ್ಮಿಸಿದರೆ ಆದರಲ್ಲಿ ಕಾಮಿಡಿ, ರೊಮಾನ್ಸ್, ಸಸ್ಪೆನ್ಸ್, ಭೀಕರ ವಾಯ್ಲೆನ್ಸ್ ಹಾಗೂ (ಯಶೋಧಾ ಬೆನ್‌ರ) ಟ್ರಾಜೆಡಿ ಈ ಎಲ್ಲಾ ಮಸಾಲೆಗಳು ಇರತ್ತವೆ. ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಗುಜರಾತ್ ಪೊಲೀಸರು ಮೋದಿ ಅಮಿತ್ ಶಾ ಆದೇಶದಂತೆ ಒಬ್ಬ ಯುವ ಆರ್ಕಿಟೆಕ್ಟ್ ಹೆಂಗಸನ್ನು ಮಫ್ತಿಯಲ್ಲಿ ಸತತ ಹಿಂಬಾಲಿಸಿ ಅವಳ ಜೀವನ ದುರ್ಭರ ಮಾಡಿದ್ದ ರೊಮ್ಯಾಂಟಿಕ್ ಕತೆಯುಳ್ಳ ಹಾಗೂ ನರೇಂದ್ರ ಚಿಕ್ಕಂದಿನಿಂದಲೇ ಯಶೋಧಾ ಬೆನ್‌ರ ಜೀವನದಲ್ಲಿ ವಿಲನ್ ಆದ ಟ್ರಾಜೆಡಿ ಕತೆಯುಳ್ಳ ಸಿನಿಮಾ ನಿರ್ಮಿಸಿದರೆ ಅದು ಕಂಬನಿಪ್ರಿಯ ಮಹಿಳೆಯರಲ್ಲಿ ಹಿಟ್ ಆಗಬಹುದು.

ಜತೆಗೆ ಮೋದಿ ಚಿಕ್ಕಂದಿನಲ್ಲಿ ಮೊಸಳೆಗಳೊಂದಿಗೆ ಹೊಡೆದಾಡಿದ್ದ ಕಾಲ್ಪನಿಕ ಕಥೆ, ಹಿಮಾಲಯದಲ್ಲಿ 12 ವರ್ಷ ಸಂಪೂರ್ಣ ದಿಗಂಬರನಾಗಿ ತಪಸ್ಸು ಮಾಡಿ ಅಲ್ಲಿ ಯೇತಿ ಎಂಬ ಹಿಮ ಮಾನವನೊಟ್ಟಿಗೆ ಹೊಡೆದಾಡಿದ್ದ ಸುಳ್ಳು ಕಥೆ ಜೋಡಿಸಿದರೆ ಹಾಗೂ ಮೆಟ್ರಿಕ್‌ನಲ್ಲಿ ಫೇಲ್ ಆಗಿ ತಂದೆಯೊಡನೆ ಜಗಳಾಡಿ ಮನೆಬಿಟ್ಟು ಓಡಿದ್ದ ನಿಜ ಘಟನೆಗಳನ್ನು ಸೇರಿಸಿದರೆ ಆ ಚಿತ್ರ ತುಂಬಾ ಹಿಟ್ ಆಗಬಹುದು. ಚಿಕ್ಕಂದಿನಿಂದಲೂ ತುಂಬಾ ಜಗಳಗಂಟ



ನಾಗಿದ್ದ ನರೇಂದ್ರನು ಶಾಲೆಯಲ್ಲಿ ಸಹಪಾಠಿಗಳೊಂದಿಗೆ ಹಾಗೂ ಮನೆಯಲ್ಲಿ ಅಣ್ಣ ತಮ್ಮಂದಿರೊಂದಿಗೆ ಜಗಳಾಡುತ್ತಿದ್ದ ನಿಜ ಘಟನೆಗಳನ್ನು ಆಧರಿಸಿ ಸಿನಿಮಾದಲ್ಲಿ ಮಾರಾಮಾರಿ ಸ್ಟಂಟ್ ಹಾಗೂ ವೈಲೆನ್ಸ್ ಸೇರಿಸಬಹುದು. ಮೋದಿ ಜಗತ್ತಿನ ಯಾವುದೇ ಕಾಲೇಜಿನಲ್ಲಿ ಇರದೇ ಇರುವ 'ಎಂಟಾಯರ್ ಪಾಲಿಟಿಕಲ್ ಸಾಯನ್ಸ್' ಎಂಬ ವಿಷಯದಲ್ಲಿ ಬಿಎ-ಎಮ್‌ಎ ಪದವಿಗಳ ನಕಲಿ ಸರ್ಟಿಫಿಕೇ[ಟ್]... ದೃಶ್ಯಗಳು, ಕರೀಂ ತೆಲಗಿಯ ನಕಲಿ ಸ್ಟ್ಯಾ... ಗಿಂತಲೂ ಹೆಚ್ಚು ಸಸ್ಪೆನ್ಸ್ ಹುಟ್ಟಿಸುವುದ... ಮೇಲಾಗಿ ಅಮೆರಿಕದಲ್ಲೂ ಆಗಿನ್ನೂ ಕಂಪ್ಯೂಟ... ಆವಿಷ್ಕಾರ ವಾಗಿರದಿದ್ದ ಕಾಲದಲ್ಲಿಯೇ ಕಂಪ್ಯೂಟರ್‌ನಲ್ಲಿ ಮಾರ್ಕ್ ಶೀಟ್ ಮ... ಸರ್ಟಿಫಿಕೇಟ್ ಪ್ರಿಂಟ್ ಮಾಡಿರುವ ತಂತ್ರಜ್ಞಾನದ ಸೈ-ಫೈ ದೃಶ್ಯಗಳು ಸ್ಟಾರ್‌ವಾ... ಹೆಚ್ಚು ರೋಮಾಂಚನಕಾರಿ ಆಗಬಲ್ಲದು.

ಅಷ್ಟೇ ಅಲ್ಲ, ಗೋಧ್ರಾದಲ್ಲಿ ಹಿಂದೂ ಟ್ರೇನಿಗೆ ತಮ್ಮವರಿಂದಲೇ ಬೆಂಕಿ ಹಚ್ಚಿಸಿದ... ತಮ್ಮ ಗೂಂಡಾಗಳ ಮೂಲಕ ಗುಜರಾತಿನ... ದಂಗೆ ಹಬ್ಬಿಸಿ ಸಣ್ಣಪುಟ್ಟ ಮಕ್ಕಳನ್ನೂ ... ಹೊಟ್ಟೆ ಬಗೆದು ಕೊಂದಿದ್ದು, ಗರ್ಭಿಣಿ ... ಹೊಟ್ಟೆ ಸೀಳಿ ಭ್ರೂಣ ಹೊರತೆಗೆದು ರಸ್ತೆಯ... ಪೊಲೀಸ್ ಅಧಿಕಾರಿ ಬಂಜಾರಾ ಮೂಲಕ ಇ... ಸಹಿತ ಅನೇಕರ ನಕಲಿ ಎನ್‌ಕೌಂಟರ್ ... ತನ್ನದೇ ಪಕ್ಷದ ಪ್ರತಿಸ್ಪರ್ಧಿ ಹರೇನ್ ಪಾಂಡ್ಯಾ... ಕೊಲೆ ಮಾಡಿಸಿದ್ದು, ಕೊನೆಗೆ ತನ್ನನ್ನು ... ಪಿತೃಸಮಾನ ಅಡ್ವಾಣಿಯ ಬೆನ್ನಿಗೆ ನಿರ್ದಯ... ಹಾಕಿದ್ದು, ಇವೆಲ್ಲವನ್ನೂ ಕಥೆಯಲ್ಲಿ ಸೇರಿ... ಸಿನಿಮಾಗಳಿಗಿಂತಲೂ ಹೆಚ್ಚು ಕ್ರೂರ ಹಸಿ... ದೃಶ್ಯಗಳುಳ್ಳ ಸಿನಿಮಾ ಮಾಡಿದರೆ ನಿರ್ಮಾಪ... ಸುರಿಮಳೆ ಆಗುವುದು ಖಂಡಿತ.

ಚಿಕ್ಕಂದಿನಲ್ಲಿಯೇ ತಂದೆಯೊಂದಿಗೆ ಸಂ... ಮಾಡಿಕೊಂಡಿದ್ದ ಮೋದಿ ತನ್ನ ತಂದೆ ... ಸಂದರ್ಭದಲ್ಲೂ ತನ್ನ ಹಗೆತನ ಬಿಡಲಿಲ್ಲ, ... ಊರಲ್ಲಿ ತನ್ನ ಸ್ನೇಹಿತನ ಮನೆಯಲ್ಲಿದ್ದರೂ ... ತಂದೆಯ ಪಾರ್ಥೀವ ಶರೀರದ ಕೊನೆಯ... ಬರಲಿಲ್ಲ; ಹುಟ್ಟಿಸಿದ ತಂದೆಯ ಶವದ ಬಾ... ನೀರು ಬಿಡುವ ಹಿಂದೂ ಮಗನ ಕ... ನಿರ್ವಹಿಸಲಿಲ್ಲ, ಆದರೂ ಈ ಮೋದಿ ಹಿಂದು... ರಕ್ಷಕನಂತೆ! ಮೋದಿ ತನ್ನ ಸ್ವಂತ ಊರಾ... ಬಸ್ ಸ್ಟ್ಯಾಂಡ್‌ನಲ್ಲಿಯೇ ಲಾಭಕರ ಕ್ಯಾಂಟೀನ್ ... ತನ್ನ ಒಡಹುಟ್ಟಿದ ತಂಗಿಯ... ಮೋದಿ ಒಂದು ಪೈಸ... ಮಾಡಲಿಲ್ಲ. ಮೋದಿಯ... ಇಂತಹ ಎಲ್ಲಾ ರೋಚಕ ... ಸೇರಿಸಿ ಸಿನಿಮಾ ಮಾಡಿದರ... ಮೂಲಗುಣವಾದ ಹೃದಯ... ಸಮಯಸಾಧಕ ವ್ಯಕ್ತಿತ... ಹಿಡಿದಂತಾಗಬಹುದು.

1975 ರ ಇಂದಿರಾ... ತುರ್ತು ಪರಿಸ್ಥಿತಿಗಿಂತ ಈಗಿನ... ಅಘೋಷಿತ ತುರ್ತುಪರಿಸ್ಥಿತಿ ಹೆಚ್ಚು ಕರಾಳವಾ... ಸ್ವತಃ ಬಿಜೆಪಿಯ ಅಡ್ವಾಣಿಯವರೇ ಹೇಳಿರು... ಅಘೋಷಿತ ತುರ್ತು ಪರಿಸ್ಥಿತಿಯ ಬಗ್ಗೆ ಮತ್ತ... ನೋಟು ರದ್ದತಿಯಿಂದ ದೇಶದ ಜನರು ... ಬವಣೆ, ಬ್ಯಾಂಕ್ ಸರತಿಯಲ್ಲಿ ಸತ್ತ ಜನ... ಕಳೆದುಕೊಂಡು ಬೀದಿಗೆ ಬಿದ್ದ 15 ಲಕ್ಷ ಬಡ... ಕೇಸರಿ ಗೋ-ರಾಕ್ಷಸರು ನಡುಬೀದಿ ಯ... ಅಮಾನವೀಯ ಕೊಲೆಗಳು, ಇವೆಲ್ಲವನ್ನೂ ಸ... ಅತ್ಯುತ್ತಮ ಟ್ರ್ಯಾಜಿಕ್ ಸಿನಿಮಾ ನಿರ್ಮಿ... ಆಸ್ಕರ್ ಪ್ರಶಸ್ತಿ ಸಿಗುವುದು ಖಚಿತ. ನಿರ್ದೇ... ಭಂಡಾರ್ಕರ್‌ಗೆ ಮೋದಿಯ ಭಂಡತನವನ್ನು ತೋರಿಸುವಷ್ಟು ಧೈರ್ಯವಿದೆಯೇ?

-ಆರ್. ಬಿ. ಶೇಣಾವ, ವ...

ಯೋಗಿ ರಾಜ್ಯದಲ್ಲಿ ಬೇಬಿ ಶೋಭಾ ಇದ್ದಿದ್ದ...

ಉತ್ತರ ಪ್ರದೇಶದಲ್ಲಿ ಯೋಗಿಯ ರಾ... ಹಿಂದಿನ ಎರಡು ತಿಂಗಳಲ್ಲಿ ನಡೆದ ಕೊ... ಹಾಗೂ ಅತ್ಯಾಚಾರಗಳು 803. ಒಂದು ಶೋಭ ಕರಂದ್ಲಾಜೆ ಉತ್ತರ ಪ್ರದೇಶದಲ್ಲಿ ... ಒಂದೂವರೆ ಸಾವಿರ ಜನರ ಹೆಸರು ಬರೆಯ... ತಮ್ಮ ಲೆಟರ್ ಹೆಡ್ಡಿನ ಎಷ್ಟು ಪುಟಗಳು ಬೇ... ಲೆಕ್ಕಾ ಮಾಡಿ. ಅವರು ಕರ್ನಾಟಕದ 23 ... ಹೆಸರು ಬರೆಯಲು ಎರಡು ಪುಟ ಬಳಸಿದ... ಮೃತರಲ್ಲಿ ಅಪಘಾತದಿಂದ ಸತ್ತವರು, ಆತ್ಮ... ಕೊಂಡವರು, ಕೌಟುಂಬಿಕ ಜಗಳದಲ್ಲಿ ಕೊ... ಎಲ್ಲರೂ ಸೇರಿದ್ದಾರೆ. ಜತೆಗೆ ಸಾರಾಯಿ ... ಸುಳ್ಯ-ಪುತ್ತೂರು ಗೌಡರೂ ಸೇರಿದ್ದಾರೆ!

ಉಡುಪಿಯಲ್ಲಿ ತನ್ನದೇ ಹೆಂಡತಿ ... ಪ್ರಿಯಕರ ಅಸ್ತ್ರಾಣಿಂದ ಹೋಮಕುಂಡದಲ್ಲಿ...



ಸಂಪಾದಕೀಯ

ಕೃಪೆ: *Economic and Political Weekly*
July 22, 2017. . Vol. 52. No. 29

■ ಅನು: ಶಿವಸುಂದರ್

ಲಾಲೂ ಪ್ರಸಾದರ ಮೇಲಿನ ದಾಳಿ: ಈಗೇಕೆ?

ಲಾಲೂ ಪ್ರಸಾದ ಯಾದವರ ಮೇಲೆ ನಡೆದ ದಾಳಿಯ ಸಂದರ್ಭವು ಅದರ ಹಿಂದಿನ ಉದ್ದೇಶ ರಾಜಕೀಯ ಹಗೆತನವೇ ಹೊರತು ಭ್ರಷ್ಟಾಚಾರ ನಿಗ್ರಹವಲ್ಲ ಎಂಬುದನ್ನು ಸೂಚಿಸುತ್ತದೆ.


ಕೇಂದ್ರದಲ್ಲಿ ಅಧಿಕಾರ ಹಿಡಿದ ಪ್ರತಿಯೊಂದು ಪಕ್ಷವೂ ಕೇಂದ್ರೀಯ ತನಿಖಾ ದಳ(ಸಿಬಿಐ)ವನ್ನು ತಮ್ಮ ರಾಜಕೀಯ ಎದುರಾಳಿಗಳನ್ನು ಹಣಿಯುವುದಕ್ಕೇ ಬಳಸಿಕೊಂಡಿವೆ. ಈಗ ಅಧಿಕಾರದಲ್ಲಿರುವ ಭಾರತೀಯ ಜನತಾ ಪಕ್ಷ(ಬಿಜೆಪಿ)ದ ಸರ್ಕಾರದ ದಾಳಿಗೆ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ)ದ ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಮತ್ತವರ ಕುಟುಂಬದವರು ಗುರಿಯಾಗಿದ್ದಾರೆ. ಯಾದವ್ ಮತ್ತವರ ಕುಟುಂಬದವರು ಹಲವಾರು ಮೋಸಪೂರಿತ ವ್ಯವಹಾರಗಳನ್ನು ನಡೆಸಿ ಸರ್ಕಾರಕ್ಕೆ 1000 ಕೋಟಿಯಷ್ಟು ತೆರಿಗೆಯನ್ನು ವಂಚಿಸಿದ್ದಾರೆಂಬ ಆರೋಪದ ಮೇಲೆ ಕೇಂದ್ರದ ಆದಾಯ ತೆರಿಗೆ ಇಲಾಖೆಯು 2017ರ ಜೂನ್ 20ರಂದು ಬೇನಾಮಿ ವ್ಯವಹಾರ ನಿಷೇಧ ಕಾಯಿದೆ(1988)ಯಡಿ ಪ್ರಕರಣವನ್ನು ದಾಖಲಿಸಿತು. ಅದಾದ ಸ್ವಲ್ಪ ಸಮಯದಲ್ಲೇ, 2017ರ ಜುಲೈ 7 ರಂದು ಸಿಬಿಐ ಯಾದವ್ ಕುಟುಂಬದ ಹಲವಾರು ಆಸ್ತಿಪಾಸ್ತಿಗಳ ಮೇಲೆ ದಾಳಿ ನಡೆಸಿತು. ಜೊತೆಗೆ ಲಾಲೂ ಪ್ರಸಾದ್ ಯಾದವ್ ಅವರು 2004-09ರ ನಡುವೆ ರೈಲ್ವೆ ಮಂತ್ರಿಯಾಗಿದ್ದ ಸಮಯದಲ್ಲಿ ರೈಲ್ವೆ ಇಲಾಖೆಯ ಪಾರಂಪರಿಕ ಹೋಟೆಲ್‌ಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಸುಳ್ಳು ಟೆಂಡರ್‌ಗಳನ್ನು ನೀಡಿದ್ದರೆಂಬ ಅನುಮಾನದ ಮೇಲೆ ದೂರನ್ನು ದಾಖಲಿಸಿಕೊಂಡಿತು. ಈಗಾಗಲೇ ಮುಖ್ಯವಾಹಿನಿ ಮಾಧ್ಯಮಗಳು ಈ ಪ್ರಕರಣದಲ್ಲಿ ಯಾದವ್‌ರ ವಿರುದ್ಧ ತಮ್ಮ ತೀರ್ಪನ್ನು ಪ್ರಕಟಿಸಿಬಿಟ್ಟಿವೆ. ಆದರೆ ಯಾದವ್ ಅವರು ಈ ತನಿಖೆಗಳು ಬಿಜೆಪಿ ಪಕ್ಷದಿಂದ ಪ್ರೇರಿತಗೊಂಡಿರುವ ರಾಜಕೀಯ ದುರುದ್ದೇಶವುಳ್ಳ ತನಿಖೆಯೆಂದು ಪ್ರತ್ಯಾರೋಪ ಮಾಡಿದ್ದಾರೆ. ಭ್ರಷ್ಟಾಚಾರದ ಆರೋಪದ ಸತ್ಯಾಸತ್ಯತೆ ಏನೇ ಇದ್ದರೂ ಯಾದವ್ ಅವರು ಮಾಡಿರುವ ಪ್ರತ್ಯಾರೋಪದಲ್ಲಂತೂ ಹುರುಳಿದೆ.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಯಾವುದೇ ಬಗೆಯ ವಿರೋಧದ ಬಗ್ಗೆ ಈ ಹಿಂದೆ ಯಾವುದೇ ಸರ್ಕಾರಗಳು ತೋರದಷ್ಟು ಅಸಹನೆಯನ್ನು ತೋರುತ್ತಾ ಬಂದಿದೆ. ಮೋದಿ ಮತ್ತು ಅಮಿತ್ ಶಾ ಅವರು ಜೊತೆಗೂಡಿ ಪಕ್ಷದೊಳಗೆ ಅಥವಾ ಪಕ್ಷದ ಹೊರಗೆ ತಮ್ಮ ವಿರುದ್ಧ ಕೇಳಿಬರುವ ಯಾವುದೇ ಧ್ವನಿಗಳನ್ನು ಯಶಸ್ವಿಯಾಗಿ ಅಣಗಿಸುತ್ತಾ ಬಂದಿದ್ದಾರೆ. ಇದು 2000ದಲ್ಲಿ ಬಿಜೆಪಿಯು ಗುಜರಾತಿನಲ್ಲಿ ಅಧಿಕಾರಕ್ಕೆ ಬಂದಾಗಲೇ ಸ್ಪಷ್ಟವಾಗಿ ಕಂಡುಬಂದಿತ್ತು. ಕಾಂಗ್ರೆಸ್ ಪಕ್ಷದ ನಂತರ ಈಗ ಆಮ್ ಆದ್ಮಿ ಪಾರ್ಟಿ (ಆಪ್) ಮತ್ತು ಯಾದವ್ ಹಾಗೂ ಆರ್‌ಜೆಡಿಗಳ ಮೇಲೆ ರಾಜಕೀಯ ದಾಳಿ ನಡೆಸುತ್ತಿದೆ. ಯಾದವ್ ಅವರ ಮೇಲೆ ದಾಳಿ ನಡೆದ ಸಂದರ್ಭ ಮತ್ತು ದಾಳಿಯ ರೀತಿಗಳೇ ಈ ದಾಳಿಯು ಬಿಜೆಪಿಯ ಆದೇಶದಂತೆ ನಡೆದಿರುವ ರಾಜಕೀಯ ದಾಳಿಯೆಂಬ ಆರೋಪದಲ್ಲಿ ಹುರುಳಿದೆಯೆಂದು ತೋರಿಸುತ್ತದೆ.

ವಾಸ್ತವವಾಗಿ, ಎನ್‌ಡಿಎ ಒಕ್ಕೂಟದ ಹೊರಗಿರುವ ಪಕ್ಷಗಳಲ್ಲಿ ಐಕ್ಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ವಿರೋಧಪಕ್ಷಗಳು ರಾಷ್ಟ್ರಪತಿ ಚುನಾವಣೆಗೆ ಜಂಟಿ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸುವ ಮಾತುಕತೆಯನ್ನು 2017ರ ಮೇ ತಿಂಗಳಿಂದಲೇ ತಮ್ಮ ನಡುವೆ ಪ್ರಾರಂಭಿಸಿದ್ದವು. ಲೋಕಸಭೆಯಲ್ಲಿ ತಮಗಿರುವ ಬಹುಮತವನ್ನು ಬಳಸಿಕೊಂಡು ಬಿಜೆಪಿಯು ಹಲವಾರು ಮಸೂದೆಗಳನ್ನು ಮತ್ತು ತಿದ್ದುಪಡಿಗಳನ್ನು ಮುಂದೆ ತರುತ್ತಿರುವಾಗ ಮತ್ತು ಅಂಥಾ ಮಸೂದೆಗಳಿಗೆ ಸಮ್ಮತಿ ನೀಡದೆ ಮತ್ತೊಮ್ಮೆ ಪರಿಶೀಲಿಸಲು ಸಂಸತ್ತಿಗೆ ವಾಪಸ್ ಕಳಿಸುವ ಪರಮಾಧಿಕಾರ ರಾಷ್ಟ್ರಪತಿಗೆ ಇರುವಾಗ ವಿರೋಧ ಪಕ್ಷಗಳ ಈ ಪ್ರಯತ್ನ ಸಹಜವಾಗಿಯೇ ಇತ್ತು. ಮೂಡಿಬರುತ್ತಿದ್ದ ಈ ವಿರೋಧ ಪಕ್ಷಗಳ ಐಕ್ಯತೆಗೆ ಲಾಲೂ ಪ್ರಸಾದ್ ಯಾದವರು ಪ್ರಮುಖ ಧ್ವನಿ ಮತ್ತು ಮುಖವಾಗಿದ್ದರಿಂದಲೇ, ಆಳುವ ಪಕ್ಷದ ಕೆಂಗಣ್ಣಿಗೆ ಗುರಿಯಾದದ್ದು ನಿರೀಕ್ಷಿತವಾಗಿತ್ತು.

ಬಿಜೆಪಿ ಮತ್ತು ಯಾದವ್‌ರ ನಡುವಿನ ಹಗೆತನಕ್ಕೆ ಇತಿಹಾಸವಿದೆ. ಇತ್ತೀಚಿನ ದಿನಗಳಲ್ಲಿ ಬಿಜೆಪಿಯೊಂದಿಗೆ ಯಾವುದೇ ಬಗೆಯ ಸಖ್ಯ ಹೊಂದದೆ ಬಿಜೆಪಿಯ ಹಾಗೂ ಅದರ ಮಾತೃಸಂಸ್ಥೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರೆಸ್ಸೆಸ್)ದ ಕೋಮುವಾದದ ವಿರುದ್ಧ ಸತತವಾಗಿ ಹೋರಾಡುತ್ತಲೇ ಬಂದ ಏಕೈಕ ಪ್ರಾದೇಶಿಕ ಪಕ್ಷವೆಂಬ ಹೆಗ್ಗಳಿಕೆಯನ್ನು ಲಾಲೂ ಯಾದವ್‌ರ ಪಕ್ಷವು ಹೊಂದಿದೆ. 1990ರಲ್ಲಿ ಕೋಮು ಘರ್ಷಣೆಯನ್ನು ಹುಟ್ಟುಹಾಕಿದ ಆರೋಪದ ಮೇಲೆ ಲಾಲ್ ಕೃಷ್ಣ ಅದ್ವಾನಿಯವರನ್ನು ಬಂಧಿಸಿ ಬಿಹಾರದ ಮೂಲಕ ಅಯೋಧ್ಯೆಗೆ ಸಾಗುತ್ತಿದ್ದ ರಾಮ ರಥಯಾತ್ರೆಯನ್ನು ತಡೆಗಟ್ಟಿದ ಪ್ರಖ್ಯಾತಿಯೂ ಲಾಲೂ ಪ್ರಸಾದ್ ಯಾದವ್ ಅವರಿಗಿದೆ. ಈ ಪತ್ರಿಕೆಯ ಲೇಖನಗಳಲ್ಲಿ (**'Where is the Caste in Development? Bihar Assembly Elections 2015'**, 2015ರ ನವೆಂಬರ್ 7 ರ ಸಂಚಿಕೆ) 2015ರಲ್ಲಿ ಯಾದವ್ ಅವರು ಬಿಜೆಪಿಯ ವಿರುದ್ಧ ಗಳಿಸಿದ ಚುನಾವಣಾ ವಿಜಯಕ್ಕೆ ಈ ಹಿಂದುಳಿದ ವರ್ಗದ ನಾಯಕ ತೆಗೆದುಕೊಂಡ ಎರಡು ಕೆಚ್ಚೆದೆಯ ತೀರ್ಮಾನಗಳು ಕಾರಣವೆಂದು ಪ್ರತಿಪಾದಿಸಲಾಗಿದೆ; ಒಂದು ಬಿಜೆಪಿಯ ಎರಡು ಅವಿವೇಕಗಳಾದ ಕೋಮುವಾದ ಮತ್ತು ಬ್ರಾಹ್ಮಣವಾದಗಳಿಗಿರುವ ಸಂಬಂಧಗಳನ್ನು ಎಂ.ಎಸ್.ಗೋಳ್ವಾಲ್ಕರ್ ಮತ್ತು ನರೇಂದ್ರ ಮೋದಿಯವರ ಮೀಸಲಾತಿ ವಿರೋಧಿ ನಿಲುವುಗಳನ್ನು ಬಯಲು ಪಡಿಸುವ ಮೂಲಕ ಎತ್ತಿತೋರಿಸಿದ್ದು ಮತ್ತು ಎರಡನೆಯದು ಬಿಜೆಪಿಯ ಗೋ ಮಾಂಸ ರಾಜಕಾರಣದ ವಿರುದ್ಧ ತನ್ನ ನಿಲುವನ್ನು (ಹಿಂದೂಗಳಲ್ಲೂ ಗೋ ಮಾಂಸ ಭಕ್ಷಣೆಯ ಪದ್ಧತಿ ಇತ್ತೆಂದು ಸಾಬೀತುಪಡಿಸುವ ಸಾಹಿತ್ಯಗಳನ್ನು ಉಲ್ಲೇಖಿಸುತ್ತಾ) ಸ್ಪಷ್ಟಪಡಿಸಿದ್ದು. ಹೀಗಾಗಿ ಯಾದವ್ ಅವರು ಬಿಜೆಪಿಗೆ ಒಂದು ಸೈದ್ಧಾಂತಿಕ ಸವಾಲನ್ನೇ ಒಡ್ಡಿದ್ದಾರೆ. ಬಿಹಾರದಲ್ಲಿ ಪಡೆದುಕೊಂಡ ಚುನಾವಣಾ ಗೆಲುವಿನ ಹಿನ್ನೆಲೆಯಲ್ಲಿ ರಾಷ್ಟ್ರೀಯ ರಾಜಕಾರಣದಲ್ಲೂ ತನಗೊಂದು ದೊಡ್ಡ ಪಾತ್ರವನ್ನು ನಿರೀಕ್ಷಿಸುತ್ತಿರುವ ಯಾದವ್ ಅವರು ಕಾಂಗ್ರೆಸ್ ಮತ್ತಿತರ ಜಾತ್ಯತೀತ ಪಕ್ಷಗಳ ಬೆಂಬಲದೊಂದಿಗೆ ತನ್ನ ಪಾತ್ರವನ್ನು ಸಂದರ್ಭ ಸಿಕ್ಕಾಗಲೆಲ್ಲಾ ಪ್ರತಿಪಾದಿಸುತ್ತಿದ್ದಾರೆ.

ಮತ್ತೊಂದೆಡೆ 2014ರಿಂದಲೂ ಸತತ ವಿಜಯದ ಹಾದಿಯಲ್ಲೇ ನಡೆಯುತ್ತಿದ್ದ ಬಿಜೆಪಿಯು ಬಿಹಾರದಲ್ಲಿ ಎದುರಿಸಬೇಕಾಗಿ ಬಂದ ಸೋಲಿನಿಂದ ಇನ್ನೂ ಚೇತರಿಸಿಕೊಂಡಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಯು ಏಕಾಂಗಿಯಾಗಿ ಅಥವಾ ತನ್ನ ಮೈತ್ರಿಕೂಟದೊಂದಿಗೆ ಸರಳ ಬಹುಮತ ಪಡೆಯಬೇಕೆಂದರೂ ಅದಕ್ಕೆ ಬಿಹಾರ ತುಂಬಾ ಪ್ರಮುಖವಾದ ಸವಾಲಾಗಿದೆ. ಆರ್‌ಜೆಡಿ ಮತ್ತು ನಿತೀಶ್ ಕುಮಾರ್‌ರ ಜೆಡಿ (ಯುನೈಟೆಡ್) ನಡುವೆ ಏರ್ಪಟ್ಟಿರುವ ಮಹಾಮೈತ್ರಿಯನ್ನು ಒಡೆಯದೆ ಇದನ್ನು ಸಾಧಿಸಲು ಸಾಧ್ಯವಿಲ್ಲ. ಹೀಗಾಗಿ ಯಾದವ್ ಮತ್ತವರ ಕುಟುಂಬದ ಮೇಲೆ ದಾಖಲಿಸಲಾಗುತ್ತಿರುವ ಪ್ರಕರಣಗಳು, ಯಾದವ್ ಅವರು ಅಧಿಕಾರಕ್ಕೆ ಬಂದಿದ್ದರಿಂದ ಬಿಹಾರ ಮತ್ತೆ ಗೂಂಡಾ ರಾಜ್ಯಕ್ಕೆ ಮರಳಿದೆ ಎಂಬ ಬಿಜೆಪಿಯ ಪ್ರಚಾರಕ್ಕೆ ಪೂರಕವಾಗಿದೆ. ಇದು ಸ್ವಚ್ಛ ಸರ್ಕಾರವನ್ನು ಕೊಡುತ್ತೇವೆಂಬ ಭರವಸೆ ನೀಡಿದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನೂ ಇಕ್ಕಟ್ಟಿಗೆ ಸಿಲುಕಿಸುತ್ತದೆ. 2014ರ ಚುನಾವಣೆಯಲ್ಲಿ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದರಿಂದ ನಿತೀಶ್ ಕುಮಾರ್ ಅವರು ಎನ್‌ಡಿಎಯೊಂದಿಗೆ ತಮ್ಮ 17 ವರ್ಷಗಳ ಮೈತ್ರಿಯನ್ನು ಮುರಿದುಕೊಂಡರು. ನಿತೀಶ್ ಕುಮಾರ್ ಅವರನ್ನು ಮತ್ತೆ ತಮ್ಮೆಡೆಗೆ ಸೆಳೆದುಕೊಂಡು ಮಹಾಮೈತ್ರಿಯನ್ನು ಮುರಿಯಬೇಕೆಂಬ ಬಿಜೆಪಿಯ ತಂತ್ರವು ರಾಷ್ಟ್ರಪತಿ ಚುನಾವಣೆಯಲ್ಲಿ ಒಂದಷ್ಟು ಕಾವನ್ನು ಪಡೆದುಕೊಂಡರೂ ಅದೇನೂ ಬದಲಾಯಿಸಲಸಾಧ್ಯವಾದ ಬೆಳವಣಿಗೆಯೇನಲ್ಲ.



ಲಾಲೂ ಪ್ರಸಾದ್ ಯಾದವ್ ಅವರು ಒಬ್ಬ ನುರಿತ ಹಿರಿಯ ರಾಜಕಾರಣಿಯಾಗಿದ್ದು ಮೇವು ಹಗರಣದ ಕುಖ್ಯಾತಿಯ ನಂತರವೂ ಬಿಹಾರದ ರಾಜಕಾರಣವನ್ನು ನಿಯಂತ್ರಿಸುವ ಸ್ಥಾನಕ್ಕೆ ಮರಳಿದ್ದಾರೆ. ಅವರ ಗ್ರಾಮೀಣ ಸೊಗಡು, ನೇರ ನಿಷ್ಠೂರ ನಡೆನುಡಿ ಮತ್ತು ಜಿಗುಟು ಸ್ವಭಾವಗಳು ಗ್ರಾಮೀಣ ಮತದಾರರಲ್ಲಿ ಅವರ ಬಗ್ಗೆ ಒಲವನ್ನು ಮೂಡಿಸಿ ಹಲವಾರು ರಾಜಕೀಯ ಬಿರುಗಾಳಿಯನ್ನೂ ಎದುರಿಸಿ ನಿಲ್ಲುವಂತೆ ಮಾಡಿದೆ. ಹೀಗಾಗಿ ಲಾಲೂ ಪ್ರಸಾದರ ಮೇಲೆ ಬಿಜೆಪಿ ನಡೆಸುತ್ತಿರುವ ಪ್ರತಿಯೊಂದು ದಾಳಿಯೂ ಅವರಿಗೆ ವಿರುದ್ಧವಾಗಿ ತಿರುಗಿಕೊಳ್ಳುವ ಸಂಭವವಿದೆ. ಲಾಲೂ ಯಾದವ್ ಅವರು ಸಿಬಿಐ ದಾಳಿಯಾದ ನಂತರದಲ್ಲಿ ಮಾಧ್ಯಮದೊಂದಿಗೆ ಮಾತನಾಡುತ್ತಾ ತನ್ನ ರಾಜಕೀಯ ಅಸ್ತಿತ್ವಕ್ಕೆ ಸಂಚಕಾರ ಬಂದರೂ ಎದೆಗುಂದದೆ ಬಿಜೆಪಿ ಮತ್ತು ಮೋದಿಯ ಕೋಮುವಾದದ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸುತ್ತೇನೆಂದು ಗುಡುಗಿದ್ದಾರೆ. ಈ ಪ್ರಕರಣದಲ್ಲಿ ಲಾಲೂ ಯಾದವರಿಗೆ ಜೈಲು ಶಿಕ್ಷೆಯಾದರೆ ಅವರ ರಾಜಕೀಯ ಜೀವನ ಮುಕ್ತಾಯವಾಗುವುದರಿಂದ ಈ ಸಂಘರ್ಷವು ಮಹತ್ತರ ಪರಿಣಾಮಗಳನ್ನು ಹೊಂದಿರುವ ಕದನವಾಗಿ ಮಾರ್ಪಟ್ಟಿದೆ. ಆದರೆ ಲಾಲೂ ಯಾದವ್ ಅವರು ತನ್ನ ವಿರೋಧಿಗಳ ತಂತ್ರವನ್ನು ಮೀರಿ ಮುನ್ನಡೆ ಸಾಧಿಸಬೇಕೆಂದರೆ 2015ರ ವಿಧಾನ ಸಭಾ ವಿಜಯದ ನಂತರ ಅವರು ಕೊಟ್ಟ ಭರವಸೆಗೆ ಮರಳಬೇಕಿದೆ. ಅದೆಂದರೆ ವಿರೋಧ ಪಕ್ಷಗಳಲ್ಲಿ ಐಕ್ಯತೆಯನ್ನು ಮೂಡಿಸುತ್ತಾ ಕೋಮುವಾದ ವಿರೋಧಿ ಸಂಘರ್ಷವನ್ನೂ ಬಿಹಾರಕ್ಕೆ ಮಾತ್ರ ಸೀಮಿತಗೊಳಿಸದೆ ಬಿಹಾರದ ಹೊರಗೂ ಆ ಸಂಘರ್ಷವನ್ನು ಬೀದಿಬೀದಿಗಳಲ್ಲಿ ಮುನ್ನಡೆಸುವುದು. ■


ಟ್ಟಿಯ ಹೆಸರು ಶೋಭಾರ ಪಟ್ಟಿಯಲ್ಲಿ ಯಾಕಿಲ್ಲ? ಅದೇ ಪ್ರಕಾರ ವಿನಾಯಕ ಬಾಳಿಗಾ, ಪ್ರವೀಣ್ ಪೂಜಾರಿ, ಹರೀಶ್ ಪೂಜಾರಿ, ಕೃಷ್ಣಪ್ಪ ಇವರ ಹೆಸರು ಯಾಕಿಲ್ಲ? ಇವರೆಲ್ಲರೂ ಸಂಘ ಸದಸ್ಯರೇ ಆಗಿದ್ದರೂ ಸಂಘಿಗಳಿಂದಲೇ ಕೊಲೆಯಾಗಿದ್ದರು ತಾನೇ! ಬೇಬಿಯಕ್ಕನವರೇ ನಿಮ್ಮ ಕರ್ನಾಟಕದಲ್ಲಿ ಹಿಂದಿನ ನಾಲ್ಕು ವರ್ಷದಲ್ಲಿ ಕೊಲೆಯಾದವರ ನಿಮ್ಮ ಪಟ್ಟಿಯಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣನ ಹೆಸರು ಯಾಕೆ ಇಲ್ಲ? (ಬೇಬಿಯನ್ನು ಶೋಭಾ ಎಂದು ಮರು ನಾಮಕರಣ ಮಾಡಿ ಅವಳನ್ನು ರಾಜಕೀಯಕ್ಕೆ ಕರೆತಂದ ರಾಮಚಂದ್ರ ಗೌಡರು ಈಗ ತಲೆ ಚಚ್ಚಿಕೊಳ್ಳುತ್ತಿರಬಹುದು ಪಾಪ)

ಮನಮೋಹನ್ ಸಿಂಗ್ ಪ್ರಧಾನ ಮಂತ್ರಿ ಆಗಿದ್ದ ಹತ್ತು ವರ್ಷಗಳಲ್ಲಿ ನಮ್ಮ ಗಡಿಯಲ್ಲಿ ಕೇವಲ 171 ಸೈನಿಕರು ಮಾತ್ರ ಹುತಾತ್ಮರಾಗಿದ್ದರು. ಆದರೆ ಮೋದಿಯವರ ಆಡಳಿತದ ಮೂರು ವರ್ಷದ ಅವಧಿಯಲ್ಲಿ 721 ಯೋಧರು ಗಡಿಯಲ್ಲಿ ಹುತಾತ್ಮರಾಗಿದ್ದಾರೆ. ಮೋದಿಯವರ ಬೆಳವಣಿಗೆ ದರ ಇದೇ ರೀತಿ ಮುಂದುವರಿದರೆ ಅವರ ಐದು ವರ್ಷದ ಅವಧಿ ಮುಗಿಯುವ ಹೊತ್ತಿಗೆ ಹುತಾತ್ಮ ಸೈನಿಕರ ಸಂಖ್ಯೆ ನಾಲ್ಕು ಅಂಕಿ ದಾಟುವುದು ಖಚಿತ. ರಾಜಕಾರಣಿಗಳು ತಮ್ಮ ನಕಲಿ ದೇಶಭಕ್ತಿ ತೋರಿಸಿ ತಮ್ಮ ಅಧಿಕಾರದ ಕುರ್ಚಿ ಗಟ್ಟಿ ಮಾಡಿಕೊಳ್ಳಲು ಸೈನಿಕರನ್ನು ಬಲಿ ಕೊಡುತ್ತಾರೆ ಎಂದು ದಾರ್ಶನಿಕರು ನೂರು ವರ್ಷಗಳ ಹಿಂದೆ ಹೇಳಿರುವ ಮಾತು ಇವತ್ತಿಗೂ ನಿಜವಾಗುತ್ತಿರುವುದು ದುರದೃಷ್ಟ.

-ಅಭಿಷೇಕ್ ಪಡಿವಾಳ್, ಸುಳ್ಯ

ದಲಿತರಿಗೆ ಮತ್ತೆಮತ್ತೆ ಅವಮಾನ

ಮೊನ್ನೆ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಜೈಪುರದಲ್ಲಿ ಒಂದು ಬಿಜೆಪಿ ಕಾರ್ಯಕರ್ತನ ಮನೆಯಲ್ಲಿ ಊಟ ಮಾಡಿದ್ದು ದೊಡ್ಡ ರಾಷ್ಟ್ರೀಯ ಸುದ್ದಿಯಾಯಿತು. ಕಾರಣ ಆ ಕೇಸರಿ ಕಾರ್ಯಕರ್ತ ದಲಿತನಾಗಿದ್ದನಂತೆ! ಭಾರತದಲ್ಲಿ ಎಂತೆಂತಹ ವಿಷಯಗಳು ದೊಡ್ಡ ರಾಷ್ಟ್ರೀಯ ಸುದ್ದಿ ಎನಿಸುತ್ತವೆ ನೋಡಿ! ಯಾರೋ ತನ್ನ ಹೊಟ್ಟೆ ತುಂಬಿಸಲು ಊಟ ಮಾಡಿದ್ದೂ ಒಂದು ರಾಷ್ಟ್ರೀಯ ಸುದ್ದಿಯೇ? ಎಲ್ಲರ ಮನೆಯಲ್ಲಿ ಊಟ ಮಾಡಿದಂತೆ ದಲಿತರ ಮನೆಯ ಊಟವೂ ಹಸಿವು ನೀಗಿಸುವ ಒಂದು ಆಹಾರವಾಗಿದೆ ಅಷ್ಟೇ. ಅದರಲ್ಲಿ ವಿಶೇಷವಾದುದೇನೂ ಇರುವುದಿಲ್ಲ. ಅದಕ್ಕೆ ಯಾಕಿಷ್ಟು ಪ್ರಚಾರ? ಆದರೆ ಕೊಳಕು ರಾಜಕಾರಣಿಗಳು ಅದನ್ನು ತಾವು ದಲಿತರಿಗೆ ಮಾಡಿದ ಒಂದು ಮಹಾ ಉಪಕಾರ ಎನ್ನುವ ರೀತಿಯಲ್ಲಿ ಪಬ್ಲಿಸಿಟಿ ಮಾಡುತ್ತಾರೆ. ದಲಿತರೇನು ಮನುಷ್ಯರಲ್ಲವೇ? ಹಾಗಿರುವಾಗ ದಲಿತರ ಮನೆಯಲ್ಲಿ ಊಟ ಮಾಡಿದ್ದು ಯಾಕೆ ವಿಶೇಷ ಸುದ್ದಿಯಾಗಬೇಕು? ಈ ನಕಲಿ ಎನ್‌ಕೌಂಟರ್ ವೀರ ಅಮಿತ್ ಶಾ ತನ್ನದೇ ಜೈನ ಜಾತಿಯವರ ಮನೆಯಲ್ಲಿ ಊಟ ಮಾಡಿದಾಗ ಯಾಕೆ ಸುದ್ದಿಯಾಗುವುದಿಲ್ಲ? ಜೈನ/ಬ್ರಾಹ್ಮಣರ ಮನೆಯಲ್ಲಿ ಊಟ ಮಾಡುವುದಕ್ಕೂ ದಲಿತರ ಮನೆಯಲ್ಲಿ ಊಟ ಮಾಡುವುದಕ್ಕೂ ವ್ಯತ್ಯಾಸವೇನಿದೆ? ಜಾತ್ಯತೀತ ಮನಸ್ಸಿನವರಿಗೆ ಎರಡೂ ಒಂದೇ.



ಮೇಲ್ಜಾತಿಯವರು ದಲಿತರ ಮನೆಯಲ್ಲಿ ಊಟ ಮಾಡಿದೆವು ಎಂದು ಪ್ರಚಾರ ಮಾಡುವುದು ನಿಜವಾಗಿ ದಲಿತರಿಗೇ ಅವಮಾನಕರ. ಊಟ ಮಾಡುವುದು, ನೀರು ಕುಡಿಯುವುದು ಮುಂತಾದ ಕ್ಷುಲ್ಲಕ ವಿಷಯಗಳು ದೊಡ್ಡ ಸುದ್ದಿಯಾಗುವುದು ಕೇವಲ ಭಾರತದಲ್ಲಿ ಮಾತ್ರ. ಇನ್ನು ದಲಿತರು ಸಹ ಹಸಿ ಮಾನವ ರಕ್ತ ಮೆತ್ತಿರುವ ಕೈಯುಳ್ಳ ಅಮಿತ್ ಶಾನಂತಹ ಮೇಲ್ಜಾತಿ ರಾಜಕಾರಣಿಗಳನ್ನು ತಮ್ಮ ಮನೆಗೆ ಕರೆದು ಊಟ ಹಾಕುವುದು ಮತ್ತು ಅದರಿಂದ ತಾವೂ ಬಿಟ್ಟಿ ಪ್ರಚಾರ ಪಡೆಯುವುದು ಡಾ.ಬಾಬಾ ಸಾಹೇಬ್ ಅಂಬೇಡ್ಕರರ ತತ್ವಗಳಿಗೆ ವಿರುದ್ಧ ಎಂದು ಭಾವಿಸಬೇಕು. ಈಗ ಕೋವಿಂದ್ ಎಂಬ ದಲಿತರೊಬ್ಬರು ರಾಷ್ಟ್ರಪತಿ ಆಗಿದ್ದಾರೆ. ಇನ್ನು ಮುಂದೆ ಆಗಾಗ ರಾಷ್ಟ್ರಪತಿ ಭವನದಲ್ಲಿ ಅಧಿಕೃತವಾಗಿ ಭೋಜನಕೂಟ ನಡೆಯುತ್ತಿರುತ್ತವೆ. ಹಾಗಾದರೆ ಆ ಭೋಜನ ಕೂಟಕ್ಕೆ ಹೋಗಿ ಬಂದ ರಾಜಕಾರಣಿಗಳೆಲ್ಲಾ "ನಾವು ದಲಿತರ ಮನೆಯಲ್ಲಿ ಊಟ ಮಾಡಿದೆವು" ಎಂಬ ರೀತಿಯಲ್ಲಿ ಮಾಧ್ಯಮದಲ್ಲಿ ಪೋಸ್ ಕೊಡುತ್ತಾರೆಯೇ?

-ಏಕಲವ್ಯ ಮುಂಡಾಲ, ಮಂಗಳೂರು

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 09-08-2017 RNI No. KARKAN2

ಪ್ರಥಮ್‌ಗಳು, ಹುಚ್ಚಾ ವೆಂಕಟ್‌ಗಳು ಮತ್ತು ಟಿಆರ್‌ಪಿ ಪರಮ್‌ಗಳು

ಕಲರ್ಸ್ ಚಾನೆಲ್‌ಗೆ ಇದೆಂಥಾ ಸಿಂಡ್ರೋಮು!



ಇಂತಿಪ್ಪ ಪರಮ್ ಬಿಗ್‌ಬಾಸ್‌ನ ಐದನೇ ಸೀ[...] ಅಣಿಯಾಗುತ್ತಿದ್ದು, ನಿಮ್ಹಾನ್ಸ್‌ನಿಂದಲೇ ಸೇರ[...] ಸ್ಪರ್ಧಿಗಳನ್ನು ಆಮದು ಮಾಡಿಕೊಳ್ಳದಿದ್ದರೆ [...] ಸಾಕು.









ಮೊನ್ನೆ ಪ್ರಥಮ್ ಎನ್ನುವ ಟಿಆರ್‌ಪಿ ಹುಡುಗ ಸಹನಟ ಭುವನ್‌ನ ತೊಡೆ ಕಚ್ಚಿದ್ದು ಭಾರೀ ಸುದ್ದಿಯಾಯ್ತು. ತಲಘಟ್ಟಪುರದಲ್ಲಿ ಕೇಸು ದಾಖಲಾಗಿ ಕೋರ್ಟ್ ಜಾಮೀನು ನೀಡಿದ್ದೂ ಆಯ್ತು. ಬಹುತೇಕ ಚರ್ಚೆಗಳು ಪ್ರಥಮ್‌ನ ಹುಚ್ಚಾಟದ ಸುತ್ತ ಗಿರಕಿ ಹೊಡೆದವೇ ವಿನಾಃ ಇಂತಹದ್ದೊಂದು ಅನಾಹುತಕಾರಿ ಟ್ರೆಂಡ್‌ಗೆ ಅಡಿಗಲ್ಲು ಹಾಕಿದ ಮೂಲವನ್ನೇ ಯಾರು ಕೆದಕಲಿಲ್ಲ. ಇದು ಬಹಳ ಬೇಸರದ ಸಂಗತಿ. ಆದರು ಹೇಳಲೇಬೇಕಿದೆ. ಒಂದುಕಾಲಕ್ಕೆ ಸದಭಿರುಚಿ ಕಾರ್ಯಕ್ರಮಗಳನ್ನು ಕೊಡುತ್ತಿದ್ದ 'ಈ ಟಿವಿ ಕನ್ನಡ' ಅದ್ಯಾವ ಘಳಿಗೆಯಲ್ಲಿ ಬಣ್ಣ ಬದಲಿಸಿಕೊಂಡು ಕಲರ್ಸ್ ಕನ್ನಡವಾಯ್ತೊ ಆಗಿನಿಂದ ಅದರ ವೈಖರಿಯೇ ಭಯಾನಕವಾಗಿದೆ. ಗೃಹಭಂಗ, ಮುಕ್ತದಂತಹ ದೇಸಿ ಸೊಗಡಿನ ಧಾರಾವಾಹಿಗಳ ಜಾಗಕ್ಕೆ ಐಪಾರಾಮಿ ಮಾರ್ವಾಡಿ ಶೈಲಿಯ ಆಮದು ಸ್ಟೋರಿಗಳು ವಕ್ಕರಿಸಿದವು. ತಲೆಬುಡವಿಲ್ಲದ ಹಳಸಲು ಕತೆಗಳೇ ಹೊಸ ಬಣ್ಣ ಬಳಿದುಕೊಂಡು ಬಂಗಲೆಗಳ ಒಳಗೆ ನರ್ತಿಸಲು ಮೊದಲ್ಗೊಂಡವು. ರಿಯಾಲಿಟಿ ನೆಪದಲ್ಲಿ ಅಪಹಾಸ್ಯಗಳು, ವಿಕೃತಗಳು ವಿಜೃಂಭಿಸಲು ಶುರು ಮಾಡಿದವು. ಒಟ್ಟನಲ್ಲಿ ಟಿಆರ್‌ಪಿ ದಾಹಕ್ಕೆ ಸದಭಿರುಚಿ ಚಾನೆಲ್‌ವೊಂದು ಹೇಗೆಲ್ಲ ಆತ್ಮಹತ್ಯೆ ಮಾಡಿಕೊಳ್ಳಬಹುದೊ ಅದೆಲ್ಲ ಅನಾಹುತಗಳಿಗೂ ಚಾನೆಲ್ ಕೈಹಾಕುತ್ತಲೇ ಬಂತು. ಅದರಲ್ಲೂ ಪರಮೇಶ್ವರ್ ಗುಂತ್ಕಲ್ ಎಂಬ ಕಮರ್ಷಿಯಲ್ ಕಿಲಾಡಿ ಆ ಚಾನೆಲ್‌ನ ಬಿಸಿನೆಸ್ ಹೆಡ್ಡಾಗಿ ಅವತರಿಸಿದ ಮೇಲಂತೂ ಇಡೀ ಕನ್ನಡ ಟೀವಿ ಸಮೂಹದ ನೈತಿಕತೆಯನ್ನೇ ದಿಕ್ಕೆಡಿಸುವಷ್ಟು ಕಲರ್ಸ್ ಕನ್ನಡ ಬದಲಾಗಿಬಿಟ್ಟದೆ. ಈ ಪರಮೇಶಿಗೆ ಪ್ರೇಕ್ಷಕ ಸಮೂಹದ ಸಂವೇದನೆ ಮತ್ತು ಮಾಧ್ಯಮದ ಸ್ಪಂದನಾಶೀಲತೆಗಿಂತ ಟಿಆರ್‌ಪಿ ಅಂಕಿಸಂಖ್ಯೆಗಳೇ ಫೇವರಿಟ್ಟು! ಇವತ್ತಿನ ಮೀಡಿಯಾ ಕ್ಷೇತ್ರದ ಕಾಂಪಿಟೇಷನ್‌ಗೆ ಅದು ಅವಶ್ಯವಾಗಿರಬಹುದು. ಆದರೆ ಪ್ರೇಕ್ಷಕರ ಪ್ರಜ್ಞಾವಂತಿಕೆಯನ್ನೇ ಹೀಯಾಳಿಸುವಂತಹ ಪರಮ್‌ನ ಸ್ಟ್ರಾಟಜಿಗಳಿವೆಯಲ್ಲ ಅವೇ ಇವತ್ತು ಕನ್ನಡದ ಉದಯೋನ್ಮುಖ ಪೀಳಿಗೆಗೆ ರಿಪಿ ಕುಮಾರ, ಬ್ರಹ್ಮಾಂಡ, ಹುಚ್ಚ ವೆಂಕಟ್, ಪ್ರಥಮ್‌ನಂತಹ ಪ್ರಾಡಕ್ಟುಗಳನ್ನು ಕೊಡುತ್ತಿರೋದು. ಇವರೆಲ್ಲ ಇದೇ ಪರಮೇಶ್ವರನ ಬಿಗ್‌ಬಾಸ್ ಉತ್ಪನ್ನಗಳು. ಇವರ ಅವಾಂತರಗಳೇ ಪರಮ್‌ನ ಸಕ್ಸಸ್ ಸೂತ್ರಗಳು!!

ಟಿಆರ್‌ಪಿ ಸಿಗಲಿಲ್ಲ ಅನ್ನೋ ಕಾರಣಕ್ಕೆ ಹುಚ್ಚಾ ವೆಂಕಟ್‌ನನ್ನು ಬಿಗ್‌ಬಾಸ್ ಮನೆಯೊಳಕ್ಕೆ ಕಳಿಸಿ ಪ್ರಥಮ್‌ಗೆ ಹೊಡೆಸಿದ್ದು (ಹಿಂದಿನ ಸೀಸನ್‌ನಲ್ಲಿ ಹುಚ್ಚಾ ವೆಂಕಟ್ ಮಾಡಿದ್ದ ಇಂತದ್ದೇ ಅವಾಂತರ ಗೊತ್ತಿದ್ದಾಗ್ಲೂ), ಬಿಗ್‌ಬಾಸ್ ಮನೆಯಲ್ಲಿ ದೆವ್ವವಿದೆ ಅಂತ ಪುಕಾರೆಬ್ಬಿಸಿದ್ದು, ಮಾನಸಿಕ ರೋಗಿಯಂತಿರುವ ಹುಚ್ಚಾ ವೆಂಕಟ್ ವಿರುದ್ಧ ಸಭ್ಯ ನಟ ಸುದೀಪ್ ಬಾಯಲ್ಲಿ ಪ್ರಿ-ಸ್ಕ್ರಿಪ್ಟೆಡ್ ಡೈಲಾಗ್ ಬರುವಂತೆ ಮಾಡಿ ಸುದೀಪ್‌ಗೆ ಮುಜುಗರ ತಂದಿಟ್ಟದ್ದು ಇವೆಲ್ಲ ಈ ಪರಮ್‌ನ ಐಲಾಟದ ಸ್ಯಾಂಪಲ್‌ಗಳಷ್ಟೆ. ಇಂತದ್ದೆ ಮತ್ತೊಂದು ಸ್ಯಾಂಪಲ್ ಅಂದ್ರೆ ಅದು 'ಸಂಜು ಮತ್ತು ನಾನು' ಎಂಬ ವೀಕ್-ಎಂಡ್ ಸೀರಿಯಲ್ಲು. ಬಿಗ್‌ಬಾಸ್ ಮನೆಯಲ್ಲಿ ಭುವನ್‌ಗು, ಸಂಜನಗೂ ಅದೇನೊ ಖುಚ್‌ಖುಚ್ ನಡೀತಿದೆ ಎಂಬಂತೆ ಗುಲ್ಲೆಬ್ಬಿಸಿ ನಾಲ್ಕನೇ ಸೀಸನ್‌ಗೆ ಕಷ್ಟಪಟ್ಟು ಟಿಆರ್‌ಪಿ ದಕ್ಕಿಸಿಕೊಂಡಿದ್ದ ಪರಮ್‌ಗೆ ಎದುರಾಳಿ ಚಾನೆಲ್‌ಗಳ ಮುಂದೆ ಕುಸಿಯುತ್ತಿರುವ ತನ್ನ ವರ್ಚಸ್ಸನ್ನು ಕಾಯ್ದುಕೊಳ್ಳುವ ಜರೂರಿತ್ತು. ಎರಡನೇ, ಮೂರನೇ ಸೀಸನ್‌ಗಳು ಮುಗಿಯುವ ಹೊತ್ತಿಗೆ ಬಿಗ್‌ಬಾಸ್ ಎನ್ನುವ ಬೊಗಳೆ ಪ್ರೋಗ್ರಾಂನ ಹಿಕಮತ್ತುಗಳು ನೋಡುಗರಿಗೆ ಅರ್ಥವಾಗಲು ಶುರುವಾಗಿದ್ದವು. ತಮ್ಮನ್ನಷ್ಟೇ ಅಲ್ಲ, ಅಲ್ಲಿಗೆ ಹೋದ ಸ್ಪರ್ಧಿಗಳನ್ನೂ ಪರಮ್‌ನ ತಂಡ ಯಾಮಾರಿಸುತ್ತಿರೋದು ಪ್ರೇಕ್ಷಕರಿಗೆ ಮನದಟ್ಟಾದ್ದರಿಂದ ನಾಲ್ಕನೇ ಸೀಸನ್ ವೇಳೆಗೆ ಬಿಗ್‌ಬಾಸ್ ಕಾರ್ಯಕ್ರಮದ ಟಿಆರ್‌ಪಿ ನೆಲ ನೋಡಲು ಶುರು ಮಾಡಿತ್ತು. ಅದೇ ಸಮಯಕ್ಕೆ ಡ್ರಾಮಾ ಜೂನಿಯರ್ಸ್, ವೀಕೆಂಡ್ ವಿತ್ ರಮೇಶ್, ಸರಿಗಮಪ, ಕಾಮಿಡಿ ಕಿಲಾಡಿಗಳಂತಹ ಗಟ್ಟಿ ಕಾರ್ಯಕ್ರಮ ಕೊಡಲು ಶುರು ಮಾಡಿದ್ದ ಜೀ ಕನ್ನಡ ವಾಹಿನಿ ಪ್ರೇಕ್ಷಕರಿಗೆ ಹತ್ತಿರವಾಗುವ ಹಾದಿಯಲ್ಲಿತ್ತು. ಆಗ ಪರಮೇಶಿಯ ತಲೆಯಲ್ಲಿ ಗರಿಗೆದರಿದ್ದೇ ಸಂಜು ಮತ್ತು ನಾನು ಎಂಬ ಸರಕು.

ಪ್ರಥಮ್‌ನಂತಹ ಬಾಯಿಬಡುಕ ಮುಗ್ಧ ಹುಡುಗ ಮಾನಸಿಕ ಸ್ಥಿಮಿತ ಕಳೆದುಕೊಂಡು ಆತ್ಮಹತ್ಯೆಗೆ ಯತ್ನಿಸಿ ನಿಮ್ಹಾನ್ಸ್ ಪಾಲಾದರು ತನ್ನ ಟಿಆರ್‌ಪಿ ಸ್ವಾರ್ಥಕ್ಕೋಸ್ಕರ ಅವನನ್ನು ಎಳೆತಂದ ಪರಮೇಶ್ ಇಂಥಾ ಭಾನ್ಗಡಿಗೆ ಕಾರಣನಾಗಿದ್ದಾನೆ. ಅಷ್ಟಕ್ಕೂ ಆ ಸೀರಿಯಲ್‌ನಲ್ಲಿ ಹೊಸತೇನೂ ಇಲ್ಲ, ಅದೇ ಹಳೆ ಸರಕು. ಹಿಂದೊಮ್ಮೆ ಥರ್ ಹೆಸರಲ್ಲಿ ಹಿಂದಿಯಲ್ಲಿ, ಪ್ರೀತ್ಸೆ ಹೆಸರಲ್ಲಿ ಕನ್ನಡದಲ್ಲಿ ಬಂದುಹೋಗಿದ್ದ ಕತೆಯನ್ನೇ ಅಲ್ಲಿ-ಇಲ್ಲಿ ಬದಲಿಸಿ ರೆಡಿ ಮಾಡಿದ್ದಾರೆ. ಅದು ಸಹ ಯಥಾಪ್ರಕಾರ ಪರಮ್ ಶೈಲಿಯ ಆತ್ಮವೇ ಇಲ್ಲದ ಒಣಸಿಂಗಾರದ ಸೀರಿಯಲ್ಲು! ಹಾಗಾಗಿ ಜನರಿಗೆ ರುಚಿಸಲೇ ಇಲ್ಲ. ಚಾನೆಲ್‌ನ ಟಿಆರ್‌ಪಿಯೂ ಮೇಲಕ್ಕೇರಲಿಲ್ಲ. ಅಂಥಾ ಹೊತ್ತಲ್ಲಿ ಘಟಿಸಿದ್ದು ಈ ಪ್ರಥಮ್-ಭುವನ್ ತೊಡೆ-ಚುಂಬನ ಪ್ರಸಂಗ. ಈ ಘಟನೆ ಹಿಂದೆ ಪರಮೇಶಿಯ ಟಿಆರ್‌ಪಿ ಹಕೀಕತ್ತು ಇದ್ದರೂ ಇರಬಹುದು.



ಇನ್ನು ಕಲರ್ಸ್ ಚಾನೆಲ್‌ನ ಬಾಕಿ ಸೀರಿಯ[...] ಕತೆಯೂ ಹೀಗೇ ಇದೆ. ಆರಂಭದಲ್ಲಿ ಟಿಆರ[...] ತಂದುಕೊಟ್ಟವು ಎಂಬ ಕಾರಣಕ್ಕೆ 'ಪುಟ್ಟಗೌ[...] ಮದುವೆ' 'ಲಕ್ಷ್ಮಿ ಬಾರಮ್ಮ' ಎಂಬೆರಡು ಧಾರಾವಾಹಿಗಳನ್ನು ಈತ ಚುಯಿಂಗ್ ಗಮ್[...] ಎಳೆಯುತ್ತಿರುವ ಪರಿ ನೋಡುಗರಿಗೆ ಅದೆಷ[...] ತರಿಸಿದೆ ಅನ್ನೋದಕ್ಕೆ ವಾಟ್ಸಪ್‌ಗಳಲ್ಲಿ ಹರಿದಾಡುತ್ತಿರುವ ಜನರೇ ಸೃಷ್ಟಿಸಿದ ಲೇವಡಿ[...] ಆಡಿಯೊ ಬೈಟ್‌ಗಳೇ ಸಾಕ್ಷಿ. ಇನ್ನು ಈತನ[...] ನೇತೃತ್ವದಲ್ಲಿ ಹೊಸದಾಗಿ ಶುರು ಮಾಡಿದ 'ಕ[...] ಸೂಪರ್'ನ ಕತೆ ಇದಕ್ಕಿಂತ ಭಿನ್ನವಿಲ್ಲ. ಪ್ರೇಕ್ಷಕ[...] ವಿಚಾರವಂತಿಕೆಯಿಂದ ವಿಮುಖವಾಗಿಸುವ ಗ[...] ಕತೆಗಳೇ ತಲೆಚಿಟ್ಟು ಹಿಡಿಸುತ್ತವೆ. ಈಗಲಾದರು[...] ಕಲರ್ಸ್ ವಾಹಿನಿಯ ಮುಖ್ಯಸ್ಥರು ಎಚ್ಚೆತ್ತುಕೊ[...] ಕಾರ್ಯಕ್ರಮಗಳಿಗೆ ಆಡಂಬರಕ್ಕಿಂತ ಆತ್ಮ ಮ[...] ಗಾಸಿಪ್‌ಗಿಂತ ಗಟ್ಟಿತನ ಮುಖ್ಯ ಅನ್ನೋದನ್ನು[...] ಅರ್ಥ ಮಾಡಿಕೊಳ್ಳಬೇಕಿದೆ. ಇಲ್ಲವಾದಲ್ಲಿ ಸ[...] ಕಾಣಿಸಿಕೊಂಡಿರುವ ಸಿಂಡ್ರೋಮು ಇಡೀ ಚಾ[...] ಬಲಿ ತೆಗೆದುಕೊಳ್ಳುವ ಕಾಲ ದೂರವಿಲ್ಲ. ಸದಭಿರುಚಿಯ ಕಾನ್‌ಸೆಪ್ಟ್ ಅರ್ಥಮಾಡಿಕೊ[...] ಟಿಆರ್‌ಪಿ ತಾನಾಗೇ ಅರಸಿ ಬರುತ್ತೆ.

ಅಂದಹಾಗೆ, 'ಭಜರಂಗಿ ಭಾಯಿಜಾನ್' [...] ಯಾಕೆ ಹಿಟ್ಟಾಯ್ತು ಗೊತ್ತಾ? ಅದರ ಮಾ[...] ಮೌಲ್ಯದ ಕತೆಯ ಹೆಣಿಗೆಯಿಂದ, ಸಂಕೀರ್ಣ[...] ವಿಷಯದ ನವಿರು ನಿರೂಪಣೆಯಿಂದ, ಪ್ರ[...] ಪಾತ್ರಗಳ ಮುಗ್ಧತೆಯಿಂದ, ಕತೆಯ ಆಳದ[...] ಸೌಹಾರ್ದತೆಯ ಕಾಳಜಿಯಿಂದ ಅಂತ ಅಂದುಕೊಂಡರೆ ಅದು ತಪ್ಪು! ಯ[...] ಟಿಆರ್‌ಪಿ ಪರಮೇಶಿಯ ಪ್ರಕಾ[...] ಸಿನಿಮಾ ಹಿಟ್ ಆದದ್ದು[...] 'ಹಿಂದೂ ದೇವರ [...] ಪಾತ್ರದಲ್ಲಿ ಮುಸ್ಲಿ[...] ನಟನೊಬ್ಬ (ಸಲ[...] ಖಾನ್) ನಟಿಸಿ, ಸಿನಿಮಾ ಈದ್ [...] ದಿನ ರಿಲೀಸ್ ಆಗಿದ್ದರಿಂದ!!!!

ಜೈ ಟಿಆ[...]

■ ಗಿರೀಶ್ ತಾಳಿಕಟ್ಟೆ